

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಜೂನ್ 1 ಭಾನುವಾರ 2025
₹4
46
ಸಂಪುಟ: 46 | ಸಂಚಿಕೆ: 46 | ಪುಟಗಳು: 12
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com











ಸೋಮನಾಥನಗರಕ್ಕೆ ಶೀಘ್ರ ಕಬಿನಿ ನೀರು

ತಮ್ಮನ್ನು ಭೇಟಿ ಮಾಡಿದ ನಿವಾಸಿಗಳಿಗೆ ಶಾಸಕ ಜಿಟಿಡಿ ಭರವಸೆ



ಮೈಸೂರಿನ ಸೋಮನಾಥನಗರ ಬಡಾವಣೆ ನಿವಾಸಿ ರೂಪಾ ನೇತೃತ್ವದಲ್ಲಿ ಮಹಿಳಾ ನಿಯೋಗ ಶಾಸಕ ಜಿ.ಟಿ.ದೇವೇಗೌಡ ಅವರನ್ನು ಖುದ್ದಾಗಿ ಭೇಟಿಯಾಗಿ ತಮ್ಮ ಸಮಸ್ಯೆಗಳನ್ನು ಹೇಳಿಕೊಂಡರು.

ಮೈಸೂರು: ಕುಡಿಯುವ ನೀರಿಲ್ಲದೆ ಪರದಾಡುತ್ತಿರುವ ಮೈಸೂರು ಸೋಮನಾಥನಗರಕ್ಕೆ ಶೀಘ್ರದಲ್ಲೇ ಕಬಿನಿ ನೀರು ಸರಬರಾಜು ಮಾಡಲಾಗುವುದು ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ಭರವಸೆ ನೀಡಿದ್ದಾರೆ.

ಕಳೆದ ಕೆಲವು ತಿಂಗಳುಗಳಿಂದ ನೀರು ಸರಬರಾಜು ಮಾಡುವ ಮೋಟಾರ್ ಕೆಟ್ಟು ಹೋಗಿದ್ದರಿಂದ ಸೋಮನಾಥನಗರದ ನಿವಾಸಿಗಳು ನೀರಿಲ್ಲದೆ ಪರಿತಪಿಸುವಂತಾಗಿತ್ತು. ಈ ಹಿನ್ನೆಲೆಯಲ್ಲಿ ಬಡಾವಣೆ ನಿವಾಸಿ ರೂಪಾ ನೇತೃತ್ವದಲ್ಲಿ ಮಹಿಳಾ ನಿಯೋಗ ಶಾಸಕ ಜಿ.ಟಿ. ದೇವೇಗೌಡರನ್ನು ಖುದ್ದಾಗಿ ಭೇಟಿಯಾಗಿ ತಮ್ಮ ಸಮಸ್ಯೆಗಳನ್ನು ಹೇಳಿಕೊಂಡರು.

ನಿವಾಸಿಗಳ ಸಮಸ್ಯೆಯನ್ನು ಆಲಿಸಿದ ಗೌಡರು, ನೀರಿನ ಸಮಸ್ಯೆ ನನ್ನ ಗಮನಕ್ಕೆ ಬಂದಿಲ್ಲ ಎನ್ನುತ್ತಾ ತಕ್ಷಣ ಸಂಬಂಧಪಟ್ಟ ಅಧಿಕಾರಿಗಳನ್ನು ದೂರವಾಣಿ ಮೂಲಕ ಸಂಪರ್ಕಿಸಿ, ಸೋಮನಾಥನಗರದ ನೀರಿನ ಬವಣೆಯ ಮಾಹಿತಿ ಪಡೆದು ಕೂಡಲೇ ಇಲ್ಲಿಗೆ ಕಬಿನಿ ನೀರು ಸರಬರಾಜು ಮಾಡುವಂತೆ ಸೂಚಿಸಿದರು.

ಜೊತೆಗೆ ಬಡಾವಣೆಯಲ್ಲಿರುವ ಕಸ ತೆಗೆಯುವ ವಿಚಾರ ಸೇರಿದಂತೆ ಮೂಲ ಸೌಕರ್ಯಗಳ ಬಗ್ಗೆಯೂ ಚರ್ಚಿಸಿ ಎಲ್ಲಾ ಸಮಸ್ಯೆಗಳನ್ನು ಹಂತ ಹಂತವಾಗಿ ಬಗೆಹರಿಸುವುದಾಗಿ ಶಾಸಕರು ಭರವಸೆ ನೀಡಿದರು. ಈ ಕುರಿತು ಬೋಗಾದಿ ಪಟ್ಟಣ ಪಂಚಾಯಿತಿ ಅಧಿಕಾರಿಗಳೊಂದಿಗೆ ಚರ್ಚಿಸಿದರು ಎಂದು ಬಡಾವಣೆಯ ನಿವಾಸಿ ರೂಪಾ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಸೋಮನಾಥನಗರ ಸೇರಿದಂತೆ ಸುತ್ತ–ಮುತ್ತಲಿನ ಬಡಾವಣೆಗಳಿಗೆ ನಿರಂತರ ಕಬಿನಿ ನೀರು ಸರಬರಾಜು ಮಾಡಲಾಗುವುದು. ಅಲ್ಲಿಯವರೆಗೂ ತಾತ್ಕಾಲಿಕ ಸ್ಕೀಂ ಮೂಲಕ ದಿನ ಬಿಟ್ಟು ದಿನ ಕಬಿನಿ ನೀರು ಪೂರೈಸಲಾಗುವುದು ಎಂದು ತಿಳಿಸಿದರು.

ಸೋಮನಾಥನಗರದ ನೀರಿನ ಸಮಸ್ಯೆ ಬಗೆಹರಿಸುವಂತೆ ಆಗ್ರಹಿಸಿ ಇತ್ತೀಚೆಗೆ ಮಹಿಳೆಯರು ಬೋಗಾದಿ ಪಟ್ಟಣ ಪಂಚಾಯ್ತಿ ಮುಂದೆ ಪ್ರತಿಭಟನೆ ನಡೆಸಿ, ಮನವಿ ಸಲ್ಲಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಈ ವೇಳೆ ಬಡಾವಣೆಯ ನಿವಾಸಿಗಳಾದ ರೂಪ, ಶೀಲಾ, ಸುಮಾ, ರತ್ನ, ಪದ್ಮ, ರಾಣಿ, ಗೀತಾ, ಲಕ್ಷ್ಮಿ, ಕರುಣಾ, ರಮ್ಯಾ, ಮೇಘನಾ ಮತ್ತು ರೇಖಾ ಸೇರಿದಂತೆ ಹಲವರಿದ್ದರು.

ಕನ್ನಡ ಭಾಷೆ ಪ್ರೀತಿಸಿ; ಬೇರೆ ಭಾಷೆ ಗೌರವಿಸಿ

ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಸಲಹೆ

● ಕನ್ನಡ ಭಾಷೆ ಮೇಲಿನ ಪ್ರೀತಿ ಇಮ್ಮಡಿಗೊಳ್ಳಲಿ ● ವ್ಯವಹಾರಕ್ಕಾಗಿ ಪ್ರಾಂತೀಯ ಭಾಷೆ ಕೂಡ ಕಲಿಯಿರಿ ● ಕನ್ನಡ ಕಾವ್ಯ, ಕವನ, ಸಣ್ಣ ಕಥೆ ಕಲಿಯಿರಿ; ಬಹುಮಾನ ಗೆಲ್ಲಿ ● ಹುಟ್ಟುಹಬ್ಬದ ಹಿನ್ನೆಲೆ ವಿಶೇಷಚೇತನ ಮಕ್ಕಳಿಗೆ ಸಲಕರಣೆ ವಿತರಣೆ



ಮೈಸೂರಿನ ನಂಜನಗೂಡು ರಸ್ತೆಯ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಶನಿವಾರ ತಮ್ಮ 83ನೇ ಜನ್ಮ ದಿನೋತ್ಸವದ ಅಂಗವಾಗಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು ವಿಶೇಷಚೇತನ ವಿದ್ಯಾರ್ಥಿಗಳಿಗೆ ನಾನಾ ಸಲಕರಣೆ ವಿತರಣೆ ಮಾಡಿದರು.

ಮೈಸೂರು, ಮೇ31(ಬಿಎಲ್‌ಯು)– ಕನ್ನಡ ಭಾಷೆ ಪ್ರೀತಿಸಿ, ಬೇರೆ ಭಾಷೆ ಗೌರವಿಸಿ ಎಂದು ಮೈಸೂರಿನ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಇಂದು ಸಲಹೆ ನೀಡಿದರು.

ನಗರದ ನಂಜನಗೂಡು ರಸ್ತೆಯ ಅವಧೂತ ದತ್ತ ಪೀಠದ ಪ್ರಾರ್ಥನಾ ಮಂದಿರದಲ್ಲಿ ತಮ್ಮ 83ನೇ ಜನ್ಮ ದಿನೋತ್ಸವದ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಶೇಷಚೇತನ ಮಕ್ಕಳಿಗೆ ಸಲಕರಣೆಗಳನ್ನು ವಿತರಿಸಿ ಮಾತನಾಡಿದ ಅವರು, ನೀವು ಯಾವುದೇ ಪ್ರಾಂತ್ಯಕ್ಕೆ ಹೋದರೂ ಕನ್ನಡ ಭಾಷೆ ಮರೆಯಬೇಡಿ. ನಿಮ್ಮ ಮಾತೃ ಭಾಷೆಯ ಮೇಲಿನ ಪ್ರೀತಿ ಮತ್ತಷ್ಟು ಹೆಚ್ಚಾಗಲಿ. ಕನ್ನಡ ನಾಡಿನಲ್ಲಿ ವಾಸ್ತವ್ಯ ಹೂಡಿರುವ ಯಾರೇ ಆದರೂ ಕನ್ನಡ ಭಾಷೆ ಕಲಿತು ಮಾತನಾಡಬೇಕು ಎಂದು ಹೇಳಿದರು.

ನಾನು ಯಾವುದೇ ಪ್ರಾಂತ್ಯಕ್ಕೆ ಹೋದರೂ ಅಲ್ಲಿನ ಭಾಷೆ ಕಲಿಯುತ್ತೇನೆ. ಹಾಗಾಗಿ ಮತ್ತೊಂದು ಭಾಷೆಯನ್ನು ಸುಲಲಿತವಾಗಿ ಮಾತನಾಡುತ್ತೇನೆ. ಪ್ರಾಂತೀಯ ಭಾಷೆ ಕಲಿತರೆ ಹಣಕಾಸು ಸೇರಿದಂತೆ ಇತರೆ ವ್ಯವಹಾರ ನಡೆಸಲು ಸುಲಭವಾಗುತ್ತದೆ ಎಂದು ಶ್ರೀಗಳು ಅಭಿಪ್ರಾಯಪಟ್ಟರು.

ನಮ್ಮ ಆಶ್ರಮದಲ್ಲಿ ಕನ್ನಡ ಭಾಷೆ ಕಲಿತು ಮಾತನಾಡಲು 30 ದಿನಗಳ ಸಣ್ಣ ತರಬೇತಿ ಆರಂಭಿಸಲಾಗಿದೆ. ಅಲ್ಲಿನ ತರಬೇತಿಯಲ್ಲಿ ಪಾಲ್ಗೊಂಡು ಕನ್ನಡ ಕಲಿಯುವುದರ ಜೊತೆಗೆ ಕವನ, ಕಾವ್ಯ ಹಾಗೂ ಸಣ್ಣ ಕಥೆಗಳನ್ನು ಬರೆದರೆ ನಮ್ಮ ಆಶ್ರಮದ ವತಿಯಿಂದ ಬಹುಮಾನ ನೀಡಲಾಗುವುದು. ಈ ಮೂಲಕ ಕನ್ನಡ ಭಾಷೆ ಕಂಪು ವ್ಯಾಪಕವಾಗಿ ಪಸರಿಸಲು ಉತ್ತೇಜನ ನೀಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಶ್ರೀಗಳು ವಿಶೇಷ ಚೇತನ ಮಕ್ಕಳಿದ್ದ ಸ್ಥಳಕ್ಕೆ ಬಂದು ಹಲವು ಸಲಕರಣೆ ವಿತರಣೆ ಮಾಡಿದರು. ವೀಲ್ ಚೇರ್–26, ವಾಕರ್ಸ್–6, ಕ್ರಚಸ್ ಮತ್ತು ಎಲ್ಬೋ ಕ್ರಚಸ್–7, ವಾಕಿಂಗ್ ಸ್ಟಿಕ್–10, ಸೆಷಲ್ ಕೇನ್ ಬ್ಲೈಂಡ್ ಸ್ಟಿಕ್– 3, ಸ್ಪೆಷಲ್ ಸಿ.ಪಿ.ಚೇರ್– 8, ಟ್ವಿನ್ ಡಿವೈಸ್–9, ಜಿಮ್ ಬಾಲ್ಸ್– 20, ವಾಟರ್ ಫಿಲ್ಟರ್ ಸೇರಿದಂತೆ ಹಲವು ಸಲಕರಣೆ ನೀಡಿದರು. ನಂತರ ಗೋವುಗಳ ರಕ್ಷಣೆಗಾಗಿ ಕೊಠಡಿ ನಿರ್ಮಿಸಲು ಮೈಸೂರಿನ ಪಿಂಜರಾಪೋಲ್ ಸೊಸೈಟಿಗೆ 16.5 ಲಕ್ಷ ರೂ. ಸಹಾಯಧನ ವಿತರಿಸಿದರು. ಈ ವೇಳೆ ಆಶ್ರಮದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಉಪಸ್ಥಿತರಿದ್ದರು.

ಹಲವು ಖಾಯಿಲೆ ಗುಣಪಡಿಸಲು ಪ್ರಾಣಾಯಾಮ ರಾಮಬಾಣ

ನಂತರ ಮಾತನಾಡಿದ ಶ್ರೀಗಳು, ಪ್ರಾಣಾಯಾಮ ಮಾಡುವುದರಿಂದ ಶ್ವಾಸಕೋಶ ಸ್ವಚ್ಛವಾಗಲಿದೆ. ಬುದ್ಧಿ ಸ್ಥಿಮಿತದಲ್ಲಿರುತ್ತದೆ. ಮನಸ್ಸು ಚಂಚಲವಾಗದೆ ಶಾಂತವಾಗಿರುತ್ತದೆ ಎಂದರು.

ದೀರ್ಘವಾಗಿ ಉಸಿರು ತೆಗೆದುಕೊಂಡು ಉಸಿರಿನೊಂದಿಗೆ ಮನಸ್ಸನ್ನು ಏಕಾಗ್ರತೆಗೊಳಿಸಿ ನಿಧಾನವಾಗಿ ಬಿಡಬೇಕು. ಹೀಗೆ ಪ್ರತಿ ದಿನ 15ರಿಂದ 20 ನಿಮಿಷ ಅಭ್ಯಾಸ ಮಾಡಿದರೆ ದೇಹದ ಸ್ವಾಸ್ಥ್ಯ ಕಾಪಾಡಬಹುದು ಎಂದು ಶ್ರೀಗಳು ಸಲಹೆ ನೀಡಿದರು.

ಯೋಗಾಭ್ಯಾಸ ಮಾಡುವ ಮೊದಲು ಪ್ರಾಣಾಯಾಮ ಮಾಡಬೇಕು. ಇದರಿಂದ ಎಷ್ಟೋ ಖಾಯಿಲೆಗಳನ್ನು ಗುಣಪಡಿಸಬಹುದು. ಈ ಹಿನ್ನೆಲೆ ಪ್ರತಿಯೊಬ್ಬರೂ ನಿತ್ಯ ಪ್ರಾಣಾಯಾಮ ಅಭ್ಯಾಸ ಮಾಡಬೇಕು ಎಂದು ಹೇಳಿದರು. ಅಂತಿಮವಾಗಿ ಕೈ ಬೆರಳುಗಳ ಮೂಲಕ ಮಾಡುವ ಒಂದು ಸಣ್ಣ ವ್ಯಾಯಾಮವನ್ನೂ ಕೂಡ ಶ್ರೀಗಳು ಹೇಳಿಕೊಟ್ಟರು.

ಗುಂಡಿ ಬಿದ್ದಿರುವ ರಸ್ತೆ, ಒಳಚರಂಡಿ ದುರಸ್ತಿಗೆ ಆಗ್ರಹಿಸಿ ಪ್ರತಿಭಟನೆ



ಮೈಸೂರಿನಲ್ಲಿ ಗುಂಡಿ ಬಿದ್ದಿರುವ ರಸ್ತೆಗಳು, ಒಳಚರಂಡಿ, ಮ್ಯಾನ್‌ಹೋಲ್‌ಗಳನ್ನು ದುರಸ್ತಿಗೊಳಿಸಲು ಆಗ್ರಹಿಸಿ ಭಾರತ ಕಮ್ಯುನಿಸ್ಟ್ ಪಕ್ಷದ ನಗರ ಸ್ಥಳೀಯ ಸಮಿತಿಯವರು ನಗರಪಾಲಿಕೆ ಕಚೇರಿ ಮುಂಭಾಗ ಶನಿವಾರ ಪ್ರತಿಭಟಿಸಿದರು.

ಮೈಸೂರು, ಮೇ31(ಜಿಎ)–ಮೈಸೂರಿನಲ್ಲಿ ಗುಂಡಿ ಬಿದ್ದಿರುವ ರಸ್ತೆಗಳನ್ನು ಸರಿಪಡಿಸಲು, ಒಳಚರಂಡಿ ಹಾಗೂ ಮ್ಯಾನ್‌ಹೋಲ್‌ಗಳನ್ನು ದುರಸ್ತಿಗೊಳಿಸಲು ಆಗ್ರಹಿಸಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ನಗರ ಸ್ಥಳೀಯ ಸಮಿತಿಯವರು ನಗರ ಪಾಲಿಕೆ ಕಚೇರಿ ಮುಂಭಾಗ ಶನಿವಾರ ಪ್ರತಿಭಟಿಸಿದರು.

ಇತ್ತೀಚೆಗೆ ಸುರಿದ ಮಳೆಯಿಂದ ಅರೆಬರೆ ಕಾಮಗಾರಿಯಿಂದಾಗಿ ಪೂರ್ಣಗೊಳ್ಳದ ನಗರದ ರಸ್ತೆಗಳು ಮತ್ತಷ್ಟು ಗುಂಡಿ ಬಿದ್ದಿದೆ. ಚರಂಡಿ, ಮೋರಿಗಳು ಕಟ್ಟಿಕೊಂಡು ಮ್ಯಾನ್‌ಹೋಲ್‌ಗಳು ತುಂಬಿ ರಸ್ತೆಯಲ್ಲೆಲ್ಲ ಹರಿಯುತ್ತಿದೆ. ಇದರಿಂದಾಗಿ ಜನಸಾಮಾನ್ಯರು, ವಾಹನ ಸವಾರರಿಗೆ ತುಂಬಾ ತೊಂದರೆಯಾಗಿದೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ನಗರದ ತ್ಯಾಗರಾಜ ರಸ್ತೆ, ರಾಮಾನುಜ ರಸ್ತೆ, ಚಾಮರಾಜ ಜೋಡಿ ರಸ್ತೆ, ಕುವೆಂಪುನಗರದ ಮುಖ್ಯ ರಸ್ತೆಗಳು, ಜನತಾ ನಗರ, ಸರಸ್ವತಿಪುರಂ ರೈಲ್ವೆ ಅಂಡರ್ ಬ್ರಿಡ್ಜ್, ವಿನಾಯಕ ನಗರದ ಮುಖ್ಯ ರಸ್ತೆಗಳು, ಅಶೋಕ ರಸ್ತೆ, ಅಗ್ರಹಾರ, ಉದಯಗಿರಿ, ಎನ್.ಆರ್.ಮೊಹಲ್ಲಾ ಸೇರಿದಂತೆ ಹಲವು ವಾರ್ಡ್‌ಗಳಲ್ಲಿ ಒಳಚರಂಡಿ, ರಸ್ತೆ ಕಾಮಗಾರಿಗಳು ಮುಗಿದಿಲ್ಲ ಎಂದು ಅವರು ಆರೋಪಿಸಿದರು.

ಇದರಿಂದಾಗಿ ಬೇಸಿಗೆಯಲ್ಲಿ ಧೂಳಿನ ಸಮಸ್ಯೆ ಒಂದು ಕಡೆಯಾದರೆ, ಇತ್ತೀಚೆಗೆ ನಿರಂತರವಾಗಿ ಸುರಿದ ಮಳೆಯಿಂದ ರಸ್ತೆಗಳು ಮತ್ತಷ್ಟು ಗುಂಡಿಯಾಗಿವೆ. ಮಳೆ ನೀರು ರಸ್ತೆಯಲ್ಲಿ ನಿಂತು ರಸ್ತೆಯಲ್ಲಿ ಓಡಾಡುವುದು ದುಸ್ತರವಾಗಿದೆ. ಜೋರಾಗಿ ಮಳೆ ಬಂದಾಗ ರಾತ್ರಿ ಸಮಯದಲ್ಲಂತೂ ರಸ್ತೆಯಲ್ಲಿ ನೀರು ಹರಿದು ಗುಂಡಿಗಳ ಅರಿವಿಲ್ಲದೆ ಬಿದ್ದು ಅಪಘಾತವಾಗಿರುವ ನಿದರ್ಶನಗಳಿವೆ. ಇದರಿಂದಾಗಿ ಜೀವ ಕೈಯಲ್ಲಿ ಹಿಡಿದು ನಡೆದಾಡಬೇಕಾದ, ವಾಹನ ಚಲಾಯಿಸಬೇಕಾದ ಪರಿಸ್ಥಿತಿ ಇದೆ ಎಂದು ಅವರು ದೂರಿದರು.

ಪ್ರತಿಭಟನೆಯಲ್ಲಿ ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ನಗರ ಕಾರ್ಯದರ್ಶಿ ಎನ್.ಸುಬ್ರಮಣ್ಯ, ಮುಖಂಡರಾದ ಕೆ.ಬಸವರಾಜು, ಜಿ. ಜಯರಾಂ, ಕೃಷ್ಣಮೂರ್ತಿ, ರಾಜೇಂದ್ರ, ವರುಣ ನಾಗರಾಜ ಮತ್ತಿತರರಿದ್ದರು.

ನೇರ ಸಂದರ್ಶನ

ಮೈಸೂರು: ಕರ್ನಾಟಕ ಮಿದುಳಿನ ಆರೋಗ್ಯ ಉಪಕ್ರಮ ಕಾರ್ಯಕ್ರಮದಡಿ ಗುತ್ತಿಗೆ ಆಧಾರದ ಮೇಲೆ ನ್ಯೂರಾಲಜಿಸ್ಟ್, ಫಿಸಿಯನ್, ವೈದ್ಯಕೀಯ ಅಧಿಕಾರಿ–1, ಶುಶ್ರೂಷಕರು–1, ಫಿಜಿಯೋಥೆರಪಿಸ್ಟ್–1, ಸ್ಪೀಚ್ ಥೆರಪಿಸ್ಟ್–1, ಕ್ಲಿನಿಕಲ್ ಸೈಕಾಲಜಿಸ್ಟ್–1, ಜಿಲ್ಲಾ ಸಂಯೋಜಕರು–1 ಹುದ್ದೆಗಳ ಭರ್ತಿಗೆ ಜೂ.10 ರಂದು ಬೆಳಗ್ಗೆ 10.30 ಗಂಟೆಗೆ ಮೈಸೂರಿನ ಡಿಹೆಚ್‌ಓ ಕಚೇರಿಯಲ್ಲಿ ನೇರ ಸಂದರ್ಶನ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಇಂದು 'ಬುದ್ಧಮ್ ನಮಾಮಿ, ಬೋಧಿಯ ಮಡಿಲಲ್ಲಿ ಮಕ್ಕಳ ಸಂಗಮ' ಕಾರ್ಯಕ್ರಮ



ಪುರುಷೋತ್ತಮ್

ಮೈಸೂರು, ಮೇ31(ಜಿಎ)–ಅಂಬೇಡ್ಕರ್ ಸಾಹಿತ್ಯ ಅಕಾಡೆಮಿ, ಮೈಸೂರು ವಿವಿ ಸಂಶೋಧಕರ ಸಂಘಗಳ ಸಂಯುಕ್ತಾಶ್ರಯದಲ್ಲಿ ಜೂ.1ರಂದು ಬೆಳಗ್ಗೆ 10ಗಂಟೆಗೆ ನಗರದ ವಿಜ್ಞಾನ ಭವನದಲ್ಲಿ ಧಮ್ಮ ಪಯಣದ ಹಾದಿಯಲ್ಲಿ 'ಬುದ್ಧಮ್ ನಮಾಮಿ, ಬೋಧಿಯ ಮಡಿಲಲ್ಲಿ ಮಕ್ಕಳ ಸಂಗಮ' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಂತೆ ಸುಗತ ಪಾಲರು, ಬಂತೆ ಮಾತೆ ಗೌತಮಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸುವರು. ಮೂಡ್ನಾಕೂಡು ಚಿನ್ನಸ್ವಾಮಿ ಕಾರ್ಯಕ್ರಮ ಉದ್ಘಾಟಿಸುವರು. ಶಿವಶಂಕರ್ ಇನ್ನಿತರರು ವೇದಿಕೆಯಲ್ಲಿರುವವರು ಎಂದು ತಿಳಿಸಿದರು.

ಮಧ್ಯಾಹ್ನ 2ಕ್ಕೆ 'ಬುದ್ಧ ಬೆಳಕು' ನಾಟಕಕ್ಕೆ ರಂಗಾಯಣದ ಮಾಜಿ ನಿರ್ದೇಶಕ ಜನ್ನಿ ಚಾಲನೆ ನೀಡುವರು. ಸಂಜೆ 5ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಜ್ಞಾನ ಪ್ರಕಾಶ್ ಸ್ವಾಮೀಜಿ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಬೆಟ್ಟಯ್ಯ ಕೋಟೆ, ಹಾಡ್ಯ ರಂಗಸ್ವಾಮಿ, ಬಸವರಾಜು ದೇವನೂರು, ಉಮೇಶ್, ಅಹಿಂದ ಜವರಪ್ಪ, ಗೋಪಾಲ್, ರಮಾ ಸಿದ್ದಲಿಂಗಯ್ಯ ವೇದಿಕೆಯಲ್ಲಿರುವವರು ಎಂದರು.

ಕಳೆದ 8 ತಿಂಗಳಿನಿಂದ ಮನೆ ಮನೆಗೆ ಬುದ್ಧ ಬೆಳಕು ಚೆಲ್ಲಲು ನೂರಾರು ಗ್ರಾಮಗಳಿಗೆ ಭೇಟಿ ನೀಡಿ, ನೂರಾರು ಕಿಮೀ ಸಂಚರಿಸಲಾಗಿದೆ. ಈ ವೇಳೆ ಬುದ್ಧ ಹಾಗೂ ಅಂಬೇಡ್ಕರ್ ಚಿಂತನೆ ಅರಿವು ಮೂಡಿಸಲಾಗಿದೆ. ಈ ಧಮ್ಮ ಪಯಣದ ಹಾದಿಯನ್ನು ದೇಶದುದ್ದಕ್ಕೂ ವಿಸ್ತರಿಸುವ ಉದ್ದೇಶವಿದೆ. ಈ ಕಾರ್ಯಕ್ರಮದ ಅಂಗವಾಗಿ ಆನ್‌ಲೈನ್‌ನಲ್ಲಿ 15 ವರ್ಷದೊಳಗಿನ ಮಕ್ಕಳಿಗೆ ಬುದ್ಧ, ಅಂಬೇಡ್ಕರ್ ಕುರಿತ ವಿವಿಧ ಸ್ಪರ್ಧೆ ಆಯೋಜಿಸಲಾಗಿತ್ತು. ಇದರಲ್ಲಿ ವಿಜೇತರಾದವರಿಗೆ ಕಾರ್ಯಕ್ರಮದಲ್ಲಿ ಬಹುಮಾನ ವಿತರಿಸಲಾಗುವುದು. ಸಾಮಾಜಿಕ ಕಾರ್ಯಕರ್ತರನ್ನು ಸನ್ಮಾನಿಸಲಾಗುತ್ತದೆ ಎಂದರು. ಗೋಷ್ಠಿಯಲ್ಲಿ ಸೋಮಯ್ಯ ಮಲೆಯೂರು, ಸಿ.ಹರಕುಮಾರ್, ಶಿವಶಂಕರ್, ವಿಶ್ವನಾಥ್ ಉಪಸ್ಥಿತರಿದ್ದರು.

ನಿಧನ

ಶ್ರೀಮತಿ ಝುಬೇದ ಸಾಹೆಬಾ


ಮೈಸೂರು, ಮೇ 31– ಮೈಸೂರಿನ ಮಂಡಿ ಮೊಹಲ್ಲಾದ ಸಾಡೇ ರಸ್ತೆ ನಿವಾಸಿ ಶ್ರೀಮತಿ ಝುಬೇದ ಸಾಹೇಬಾ (70) ಶುಕ್ರವಾರ ನಿಧನರಾದರು. ಮೃತರು ಮೂವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಈ ಸಂಬಂಧ ಶುಕ್ರವಾರದಂದು ರಾತ್ರಿ 9–30 ಗಂಟೆಗೆ ಮಸೀದಿ ಆಜಮ್ ಮರ್ಕಾಜ್ ಅಹಲೆ ಸುನ್ನತ್–ವಲ್–ಜಮಾತ್, ಅಶೋಕ ರಸ್ತೆ, ಮೈಸೂರು ಇಲ್ಲಿ ನಮಾಜ್–ಎ–ಜನಾಜ ನಡೆಯಿತು. ನಂತರ ಮೈಸೂರಿನ ಟಿಪ್ಪು ಸರ್ಕಲ್ ಹಿಂಭಾಗದಲ್ಲಿರುವ ಮುಸ್ಲಿಮರ ರುದ್ರಭೂಮಿ ಗೇಟ್ ನಂ.2ರಲ್ಲಿ ಮೃತರ ಅಂತ್ಯ ಸಂಸ್ಕಾರ ನೆರವೇರಿತು.

ಕೆ.ವಿಷಕಂಠ



ಮೈಸೂರು ಒಂಟಿಕೊಪ್ಪಲು ನಿವಾಸಿ ಕೆ.ವಿಷಕಂಠ (62) ಅವರು ಇಂದು ಬೆಳಗ್ಗೆ ಹೃದಯಾಘಾತದಿಂದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ, ಸಹೋದರರು ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಶನಿವಾರ ಸಂಜೆ ಗೋಕುಲಂ ರುದ್ರಭೂಮಿಯಲ್ಲಿ ನೆರವೇರಿತು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

1.06.2025 ಭಾನುವಾರ, ಮಳೆ ನಕ್ಷತ್ರ: ರೋಹಿಣಿ 25.05.2025 ರಿಂದ 07.06.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ,
ತಿಥಿ: ಷಷ್ಠಿ, ನಕ್ಷತ್ರ: ಆಶ್ಲೇಷ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಕನ್ನಡದ್ ಕನ್ನಡಿ :** ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ 141ನೇ ಜಯಂತಿ ಅಂಗವಾಗಿ ಪಾರಂಪರಿಕೆ ನಡಿಗೆ, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಿಂದ, ಬೆಳಗ್ಗೆ 6.30ಕ್ಕೆ.

■ **ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ :** ಉಚಿತ ಒಕ್ಕಲಿಗರ ವಧು–ವರರ ಸಮಾವೇಶ, ಅಧ್ಯಕ್ಷತೆ : ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಶಿವರಾಮು, ಉದ್ಘಾಟನೆ : ಡಾ. ಬಿ.ಆರ್. ಚಂದ್ರಶೇಖರ್, ಡಾ. ಸರಳ ಚಂದ್ರಶೇಖರ್, ಮುಖ್ಯ ಅತಿಥಿಗಳು : ವಿಮರ್ಶಕ ಡಾ. ನೀ.ಗೂ. ರಮೇಶ್, ಕೃಷಿ ಇಲಾಖೆ ಉಪನಿರ್ದೇಶಕ ಕೆ. ರಾಜು, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಎನ್. ಚಿದಾನಂದ, ಸ್ಥಳ: ನೇಗಿಲ ಯೋಗಿ ಮರುಳೇಶ್ವರ ಸೇವಾ ಭವನ, ಹೊಸ ನ್ಯಾಯಾಲಯದ ಎದುರು, ಜಯನಗರ, ಬೆಳಗ್ಗೆ 9 ರಿಂದ.

■ **ಸುಯೋಗ್ ಆಸ್ಪತ್ರೆ :** ಉಚಿತ ಕೀಲು, ಮೂಳೆ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ ಆವರಣ, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ :** ಓಪನ್ ಡೇ ಮತ್ತು ಜೇಸಿಯಾನ–2025, ಸ್ಥಳ : ಎಸ್‌ಜೆಸಿಇ ಕಾಲೇಜು ಆವರಣ, ಬೆಳಗ್ಗೆ 10 ರಿಂದ.

■ **ಸಮುದ್ಯತಾ ಶ್ರೋತೃ ಸಂಘ, ಮೈಸೂರು ಆಕಾಶವಾಣಿ ಕೇಳುಗರ ಬಳಗ, ಮೈಸೂರು ಆಕಾಶವಾಣಿ ನಾಟಕ ಕಲಾವಿದರು :** ಬೀಳ್ಕೊಡುಗೆ ಸಮಾರಂಭ, ಅತಿಥಿಗಳು : ನಿವೃತ್ತ ಹಿರಿಯ ಉದ್ಘೋಷಕ ಪ್ರಭುಸ್ವಾಮಿ ಮಳಿಮಠ, ಅಧ್ಯಕ್ಷತೆ : ಅಪ್ರವರಂಬೆ ರಂಗ ತಂಡದ ಸ್ಥಾಪಕ ನಾ. ನಾಗಚಂದ್ರ, ಮುಖ್ಯ ಅತಿಥಿಗಳು : ಕದಂಬ ರಂಗ ವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ, ಸಮುದ್ಯತಾ ಶ್ರೋತೃ ಸಂಘದ ಸದಸ್ಯ ರಮೇಶ್ ಪಿ. ರಂಗಸಮುದ್ರ, ಸಂಘದ ಅಧ್ಯಕ್ಷ ಕಣ್ಣೂರು ವಿ. ಗೋವಿಂದಾಚಾರಿ, ಸಂಘದ ಕಾರ್ಯದರ್ಶಿ ಶ್ರೀಮತಿ ಟಿ.ಎನ್.ರಾಜೇಶ್ವರಿ, ಸ್ಥಳ: ವಿಜಯ ವಿಠಲ ಶಿಕ್ಷಣ ಸಂಸ್ಥೆ, ಸರಸ್ವತಿಪುರಂ, ಬೆಳಗ್ಗೆ 10 ರಿಂದ.

■ **ವೀರಶೈವ ಲಿಂಗಾಯತ ವಿವಿಧ ಬಡಾವಣೆಗಳ ಒಕ್ಕೂಟ :** ಶ್ರೀ ಜಗಜ್ಯೋತಿ ಬಸವೇಶ್ವರರ 892ನೇ ಜಯಂತಿ ಮಹೋತ್ಸವ, ಸಾನ್ನಿಧ್ಯ : ಡಾ. ಶ್ರೀ ಶರತ್‌ಚಂದ್ರ ಸ್ವಾಮೀಜಿ, ನೇತೃತ್ವ : ಒಕ್ಕೂಟದ ಗೌರವಾಧ್ಯಕ್ಷ ಡಾ. ಶ್ರೀ ಸೋಮಶೇಖರಸ್ವಾಮಿಗಳು, ಅಧ್ಯಕ್ಷತೆ : ಒಕ್ಕೂಟದ ಅಧ್ಯಕ್ಷ ಜಿ.ಎಸ್. ಗುರುಪಾದಸ್ವಾಮಿ, ಉಪಸ್ಥಿತರು : ಒಕ್ಕೂಟದ ಕಾರ್ಯಾಧ್ಯಕ್ಷ ಎಂ.ಹೆಚ್. ಚಂದ್ರಶೇಖರ್, ಗೌರವ ಸಲಹೆಗಾರ ಕೆ.ಸಿ. ಬಸವರಾಜಸ್ವಾಮಿ, ಸ್ಥಳ: ಶಿಕ್ಷಕರ ಬಡಾವಣೆ ಉದ್ಯಾನವನ, ಜೆಎಸ್‌ಎಸ್ ಬಡಾವಣೆ 2ನೇ ಹಂತದ ಎದುರು, ಬೆಳಗ್ಗೆ 10.30ಕ್ಕೆ.

■ **ಬಸವ ಸಮಿತಿ :** ಶರಣ ಸಂಗಮ, ಸಾನ್ನಿಧ್ಯ : ಶ್ರೀ ಗುರುಶಾಂತ ಸ್ವಾಮೀಜಿ, ಶ್ರೀಮತಿ ಹುಸ್ಕೂರು ಅಂಬಿಕಾ ಶಿವನಂಜಪ್ಪ ಅವರಿಂದ ಲಿಂಗ ಸಮಾನತೆ ಮತ್ತು ಸಾಮಾಜಿಕ ಸಾಮರಸ್ಯ ಕುರಿತು ಉಪನ್ಯಾಸ, ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಹಿನಕಲ್, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ತೊಳಸಿ ಜ್ಯುವೆಲ್ಸ್ :** ಇಟಾಳಸಿ ಲಕ್ಸೆ ಫೆಸ್ಟ್– ಆಭರಣಗಳ ಪ್ರದರ್ಶನ, ಉದ್ಘಾಟನೆ : ಯಶಸ್ವಿ ಮಹಿಳಾ ಉದ್ಯಮಿ ಶ್ರೀಮತಿ ಪ್ರತಿಭಾ ನಾಯಕ್, ಸ್ಥಳ: ತೊಳಸಿ ಜ್ಯುವೆಲ್ಸ್, ವಿ.ವಿ. ಮೊಹಲ್ಲಾ, ಟೆಂಪಲ್ ರಸ್ತೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಅವಧೂತ ದತ್ತ ಪೀಠ :** ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದ 26ನೇ ಬ್ರಹ್ಮೋತ್ಸವ, ನಾದಮಂಟಪದ 27ನೇ ವಾರ್ಷಿಕೋತ್ಸವ ಹಾಗೂ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 83ನೇ ಜನ್ಮದಿನಾಚರಣೆ, ಬೆಳಗ್ಗೆ 7ಕ್ಕೆ ದತ್ತಾತ್ರೇಯ, ಮೃತ್ಯುಂಜಯ ಮತ್ತು ಆಯುಷ್ಯ ಹೋಮ,ಶ್ರೀ ಚಕ್ರ ಪೂಜೆ, 8 ಗಂಟೆಗೆ ಶ್ರೀ ಚಕ್ರ ಪೂಜಾ, 9ಕ್ಕೆ ಔದುಂಬರ ಸಿಂಹಾಸನ ಆದಿರೋಹನಂ ಸಮರ್ಪಣ ಭಕ್ತರಿಂದ, ಸಂಜೆ 7ಕ್ಕೆ ಅಶ್ರಮ ಭಜನಾ ಮಂಡಳಿಯಿಂದ ದತ್ತ ಪ್ರಭು ಸ್ಮರಣ ಭಜನೆಗಳು. ಸ್ಥಳ: ಅವಧೂತ ದತ್ತಪೀಠ, ನಂಜನಗೂಡು ರಸ್ತೆ.

■ **ಸಮತಾ ಅಧ್ಯಯನ ಕೇಂದ್ರ :** ಡಾ. ವಿಜಯಾ ದಬ್ಬೆ ಸಾಹಿತ್ಯ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಕಾವ್ಯ ಮತ್ತು ಕಥಾ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಣೆ, ಪ್ರಶಸ್ತಿ ಪ್ರದಾನ : ಹಿರಿಯ ಲೇಖಕಿ ನೇಮಿಚಂದ್ರ, ಪ್ರಶಸ್ತಿ ಪುರಸ್ಕೃತರು : ಹಿರಿಯ ಕವಯತ್ರಿ ಸವಿತಾ ನಾಗಭೂಷಣ, ತೀರ್ಪುಗಾರರ ಮಾತು : ಹಿರಿಯ ಕವಿ ಜಿ.ಪಿ. ಬಸವರಾಜು, ಪುಸ್ತಕ ಬಿಡುಗಡೆ : ವಿಮರ್ಶಕ ಡಾ. ಎಂ.ಎಸ್. ಆಶಾದೇವಿ, ಅಧ್ಯಕ್ಷತೆ : ಸಮತಾ ಅಧ್ಯಯನ ಕೇಂದ್ರದ ಅಧ್ಯಕ್ಷ ಡಾ. ಸಬಿಹಾ ಭೂಮಿಗೌಡ, ಸ್ಥಳ: ರೋಟರಿ ಮೈಸೂರು, ಪಶ್ಚಿಮ ಸಭಾಂಗಣ, ಕಾಮಾಕ್ಷಿ ಆಸ್ಪತ್ರೆ ಹತ್ತಿರ, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಆರ್ಯ ಈಡಿಗರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಡಾ. ಎಂ.ಕೆ. ಪೋತರಾಜ್, ಸ್ಥಳ: ಸಂಘದ ಆವರಣ, ವಿಜಯನಗರ 1ನೇ ಹಂತ, ಬೆಳಗ್ಗೆ 11ಕ್ಕೆ.

■ **ವಾಗ್ದೇವಿ ಟ್ರಸ್ಟ್ :** ಉಚಿತ ನೋಟ್ ಬುಕ್ ವಿತರಣಾ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಶಾಸಕ ಕೆ. ಹರೀಶ್‌ಗೌಡ, ನಗರ ಕಾಂಗ್ರೆಸ್ ಅಧ್ಯಕ್ಷ ಮೂರ್ತಿ, ಓಬಿಸಿ ಅಧ್ಯಕ್ಷ ನಾಗೇಶ್, ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಸ್ಥಳ: ವಾಗ್ದೇವಿ ಟ್ರಸ್ಟ್, ಹೆಬ್ಬಾಳು 2ನೇ ಹಂತ, ಸಂಜೆ 4ಕ್ಕೆ.

■ **ಕಲಾಸೌರಭ :** ಕರ್ನಾಟಕ ಶಾಸ್ತ್ರೀಯ ಸಂಗೀತ ಅಧ್ಯಯನ ಶಿಬಿರ, ವಿದುಷಿ ಚಾರುಲತಾ ರಾಮಾನುಜಂ, ಬೆಂಗಳೂರು ಅವರು ತೋಡಿ ರಾಗದ ರಚನೆಯನ್ನು ಮನೋಧರ್ಮ ಸಂಗೀತದೊಂದಿಗೆ ತರಬೇತಿ, ಸ್ಥಳ: 298, 8ನೇ ಅಡ್ಡ ರಸ್ತೆ, ಇ ಅಂಡ್ ಎಫ್ ಬ್ಲಾಕ್, ರಾಮಕೃಷ್ಣನಗರ, ಸಂಜೆ 4.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ. ವಿಜಯಲಕ್ಷ್ಮೀ ಬಾಳೆಕುಂದ್ರಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ– ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ – ಮತ್ತೂರು ಕುಮಾರಸ್ವಾಮಿ ಮತ್ತು ನಿತಿನ್ ರಾಜಾರಾಂಶಾಸ್ತ್ರೀ, ವ್ಯಾಖ್ಯಾನ–ಪ್ರೊ. ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಸಂಗೀತ ಕಟ್ಟಿ, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಯೋಗದತ್ತ ಜಗತ್ತು– ಯೋಗ ಕುರಿತ ವಿಶೇಷ ಕಾರ್ಯಕ್ರಮ ಸರಣಿ, ಯೋಗ ಭಾರತ ಕುರಿತು ಮಾತನಾಡುತ್ತಾರೆ ಡಾ. ರಾಘವೇಂದ್ರ ಪೈ, 8.50 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ–ವಿಶ್ವ ಪರಿಸರ ದಿನಾಚರಣೆಯ ಸಂದರ್ಭದಲ್ಲಿ ಪರಿಸರ ಮತ್ತು ಮಕ್ಕಳ ಆರೋಗ್ಯ ಕುರಿತು ತಿಳಿಸಿಕೊಡಲಿದ್ದಾರೆ ಮಕ್ಕಳ ತಜ್ಞರು ಹಾಗೂ ಭಾರತೀಯ ಶಿಶುವೈದ್ಯರ ಸಂಘದ ಮೈಸೂರು ಘಟಕದ ಅಧ್ಯಕ್ಷರಾದ ಡಾ. ಶ್ರೀನಿವಾಸ್ ಬಿ. ಎಚ್. ಮತ್ತು ನಿಯೋಜಿತ ಅಧ್ಯಕ್ಷರಾದ ಡಾ. ಶಿವು ಪಿ.ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ– ಕಥೆ ಹೇಳ್ತೀಯೊ ಹಾಡು ಹೇಳ್ತೀಯೊ – ಫೋನ್ ಇನ್ ಕಾರ್ಯಕ್ರಮ, 10.30 KRISH- TRISH and Balty boy ನಾವು ಭಾರತೀಯರು, ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕು ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ–ಕುವೆಂಪುನಗರದ ವಿ.ವಿ.ಎಸ್.ಬಿ.ಎಂ. ಶ್ರೀ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.15 ಮಿಶ್ರಮಾಧುರ್ಯ

ಮಧ್ಯಾಹ್ನ: 12.00 ವನಿತಾ ವಿಹಾರ, 12.35 ದೇವರನಾಮ–ಅಂಬುಜಾ ಶ್ರೀಧರ್, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಎಂ. ವಿ. ಪ್ರಭಾಮಣಿ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿ ವಾಹಿನಿ ಆರಾಧನೆ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ–ತಾಳಮದ್ದಲೆ ಪ್ರಸಂಗ– ರೇಣುಕಾ ಮಹಾತ್ಮೆ, ಪ್ರಸ್ತುತಿ–ನೀಲಾವರ ಲಕ್ಷ್ಮೀನಾರಾಯಣರಾವ್ ಮತ್ತು ತಂಡದವರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.51 ಕೃಷಿರಂಗ: ತೋರಣ ಹೂರಣ– ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರು ಉಮೇಶ್, ಕೃಷಿ ಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ–ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ನಾದ ಮೀಮಾಂಸೆ –ಕರ್ನಾಟಕ ಶಾಸ್ತ್ರೀಯ ಸಂಗೀತದ ರೂಪು ರೇಷೆ ಕುರಿತ ಸರಣಿ, ಸಂಶೋಧನೆ ಹಾಗೂ ಸಾಹಿತ್ಯ –ಡಾ. ಸಿ.ಎ. ಶ್ರೀಧರ್, ಪ್ರಸ್ತುತಿ–ಜಿ. ಕೆ. ರವೀಂದ್ರಕುಮಾರ್, 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು–ಎಂ.ಪಿ. ನಾಗಲಿಂಗಾಚಾರ್, 9.30 ಸವಿನೆನಪು, 10.00 ರವಿವಾರದ ಅಖಿಲ ಭಾರತ ಸಂಗೀತ ಸಭಾ, ತುಷಾರ್ ಎಂ.ಕೆ.–ಹಾಡುಗಾರಿಕೆ

■ **ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘ :** ಪೌರಾಣಿಕ ಯಕ್ಷಗಾನ ಪ್ರದರ್ಶನ, ವಿದ್ವಾನ್ ದತ್ತಮೂರ್ತಿ ಭಟ್ ಸಂಚಾಲಕತ್ವದ ನಾಟ್ಯಶ್ರೀ ಕಲಾ ತಂಡ, ಶಿವಮೊಗ್ಗ ಅವರಿಂದ ನಾಟ್ಯಶ್ರೀ ರಜತನೂಪುರ–25 ಯಕ್ಷಗಾನ–ಬ್ರಹ್ಮಕಪಾಲ ಕಾರ್ಯಕ್ರಮ, ಸ್ಥಳ: ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘ, ಕುವೆಂಪುನಗರ, ಸಂಜೆ 5.30 ರಿಂದ.

■ **ಶ್ರೀ ಗುರು ಪುಟ್ಟರಾಜ ಸಂಗೀತ ಸಭಾ :** ದಿವಂಗತ ಪಂಡಿತ್ ಕೆ.ಎಸ್. ಹಡಪದ ಅವರ 19ನೇ ಪುಣ್ಯ ಸ್ಮರಣಾರ್ಥ 2025ನೇ ಸಾಲಿನ ಪಂಡಿತ್ ಕೆ.ಎಸ್. ಹಡಪದ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಸಂಗೀತ ಕಾರ್ಯಕ್ರಮ, ಸಂಜೆ 5.30ಕ್ಕೆ ಎಸ್.ಜಿ.ಪಿ. ಸಂಗೀತ ವಿದ್ಯಾಲಯದ ವಿದ್ಯಾರ್ಥಿಗಳಿಂದ ಸಮೂಹ ತಬಲಾ ವಾದನ, ಸಂಜೆ 6ಕ್ಕೆ ಸಭಾ ಕಾರ್ಯಕ್ರಮ, ಉದ್ಘಾಟನೆ : ಇಕ್ವೆಲೈಜ್ ಆರ್‌ಸಿಎಂ ಪ್ರೈವೇಟ್ ಲಿಮಿಟೆಡ್ ಛೇರ್‌ಮೆನ್ ಭಾಸ್ಕರ್ ಕಳಲೆ, ಅಧ್ಯಕ್ಷತೆ : ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯ ಮಾ.ವಿ. ರಾಮಪ್ರಸಾದ್, ಮುಖ್ಯ ಅತಿಥಿಗಳು : ಎನ್‌ಐಇ ಕಾಲೇಜು ಪ್ರಾಧ್ಯಾಪಕ ಡಾ. ಸಿ.ಕೆ. ಸಂಜಯ್ ಕುಮಾರ್, ಪ್ರಶಸ್ತಿ ಪ್ರದಾನ : ರಾಷ್ಟ್ರೀಯ ಕುಸ್ತಿ ಪಟು ಶಂಕರ್ ಎಸ್. ಕಳಿಗೊನ್ನವರ್, ಸಂಜೆ 7ಕ್ಕೆ ತಬಲಾ ಸೋಲೋ ಸ್ಥಳ: ಗಾನಭಾರತೀ (ರಮಾ ಗೋವಿಂದ ಕಲಾ ವೇದಿಕೆ), ಆದುಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 5.30ಕ್ಕೆ.

■ **ಜೆಎಸ್‌ಎಸ್ ಬಡಾವಣೆ :** ಬಸವ ಬಳಗ ಟ್ರಸ್ಟ್ ಉದ್ಘಾಟನೆ ಹಾಗೂ ಬಸವ ಜಯಂತಿ ಕಾರ್ಯಕ್ರಮ, ಮಧ್ಯಾಹ್ನ 3.30ಕ್ಕೆ ಶಿವಕಥೆ ವಿದ್ವಾನ್ ಬದನವಾಳು ಬಿ. ಶಿವಕುಮಾರ್ ಶಾಸ್ತ್ರಿ ಮತ್ತು ತಂಡದವರಿಂದ ವಚನ ಗಾಯನ, ಸಂಗೀತ ಕಾರ್ಯಕ್ರಮ ಹಾಗೂ ಬಸವ ಉತ್ಸವ, ಸರ್ದಾರ್ ವಲ್ಲಭಭಾಯ್ ಪಟೇಲ್ ನಗರದ ಮುಖ್ಯದ್ವಾರದಿಂದ ನಂದೀಧ್ವಜ, ಮಂಗಳವಾದ್ಯ, ವಿವಿಧ ಜಾನಪದ ಕಲಾತಂಡಗಳು, ಭಜನಾ ತಂಡಗಳೊಂದಿಗೆ, ಸಂಜೆ 6.00ಕ್ಕೆ ಸಭಾ ಕಾರ್ಯಕ್ರಮ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ದಿವ್ಯ ಸಮ್ಮುಖ ತುಮಕೂರಿನ ಶ್ರೀ ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳು. ಶ್ರೀ ಗುರುಶಾಂತಸ್ವಾಮಿಗಳು, ಶ್ರೀ ಕುದೇರು ಮಠ, ಮೈಸೂರು ಮತ್ತು ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು, ಶ್ರೀ ಕುಂದೂರು ಮಠ, ಉದ್ಘಾಟನೆ : ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯಾಧ್ಯಕ್ಷ ಶಂಕರ ಮಹದೇವ ಬಿದರಿ, ಮುಖ್ಯ ಅತಿಥಿಗಳು : ಶಾಸಕ ಎಚ್.ಎಂ. ಗಣೇಶ್ ಪ್ರಸಾದ್, ಅಪರ ಜಿಲ್ಲಾಧಿಕಾರಿ ಡಾ. ಪಿ. ಶಿವರಾಜು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಎಚ್.ವಿ. ಬಸವರಾಜು(ಹಿನಕಲ್), ಬಿ.ಕೆ. ನಾಗರಾಜು (ಬ್ಯಾತಹಳ್ಳಿ), ಮೈಸೂರು ಜಲಮಹಲ್ ರೆಸಾರ್ಟ್ ಮಾಲೀಕ ಮಹೇಶ್, ಅಧ್ಯಕ್ಷತೆ : ಬಸವ ಬಳಗ ಟ್ರಸ್ಟ್‌ನ ಮೈಸೂರು ಪೂರ್ವ ವಲಯ ಅಧ್ಯಕ್ಷ ಎಸ್. ಶಿವಸ್ವಾಮಿ, ಸ್ಥಳ: ಜೆಎಸ್‌ಎಸ್ ಬಡಾವಣೆ 2ನೇ ಹಂತ, ಯಾಂದಳ್ಳಿ ರಸ್ತೆ.

■ **ರಂಗಾಯಣ :** ಭಾರತೀಯ ರಂಗ ಶಿಕ್ಷಣ ಕೇಂದ್ರದ ಕಲಾವಿದರಿಂದ ಅಗ್ನಿ ಮತ್ತು ಮಳೆ ನಾಟಕ ಪ್ರದರ್ಶನ, ರಚನೆ : ಗಿರೀಶ್ ಕಾರ್ನಾಡ್, ನಿರ್ದೇಶನ : ಸಾಲಿಯಾನ ಉಮೇಶ್ ನಾರಾಯಣ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

■ **ಜಿಪಿಐಇಆರ್ ರಂಗ ತಂಡ :** ಜಿಪಿಐಇಆರ್ ಕಲಾವಿದರಿಂದ ನಾಟಕ 'ವಾರ್ಡ್ ನಂ. 6', ನಿರ್ದೇಶನ : ಹಿರಿಯ ರಂಗಕರ್ಮಿ ಮೈಮ್ ರಮೇಶ್, ಸ್ಥಳ: ಕಿರು ರಂಗ ಮಂದಿರ, ರಂಗಾಯಣದ ಆವರಣ, ಸಂಜೆ 6.30ಕ್ಕೆ.



ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜೂನ್ 1 ಭಾನುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ-ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 46 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಎಸ್‌ಎಸ್‌ಎಲ್‌ಸಿಯಲ್ಲಿ ಕಡಿಮೆ ಫಲಿತಾಂಶ

ಡಿಡಿಪಿಐ ವಿರುದ್ಧ ಕ್ರಮ

■ ಮುಖ್ಯ ಕಾರ್ಯದರ್ಶಿಗೆ ಸಿಎಂ ಸಿದ್ದರಾಮಯ್ಯ ಸೂಚನೆ ■ ತಕ್ಷಣವೇ ಶಿಕ್ಷಣಾಧಿಕಾರಿಗಳಿಗೆ ನೋಟಿಸ್ ನೀಡಿ; ಉತ್ತರ ಸಮರ್ಪಕವಾಗಿಲ್ಲ ಎಂದರೆ ಕ್ರಮ ಕೈಗೊಳ್ಳಿ ■ ಎರಡನೇ ದಿನವೂ ಡಿಸಿ, ಎಸ್ಪಿ, ಸಿಇಓಗಳ ಸಭೆ ಮುಂದುವರಿಕೆ

ಬೆಂಗಳೂರು, ಮೇ 31 (ಕೆಎಂಶಿ)– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇಕಡ 60ಕ್ಕಿಂತ ಕಡಿಮೆ ಫಲಿತಾಂಶ ಬಂದಿರುವ ಸರ್ಕಾರಿ ಶಾಲೆಗಳ ವ್ಯಾಪ್ತಿಯ ಡಿಡಿಪಿಐ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶಿಸಿದ್ದಾರೆ.

ಶೇ.60ಕ್ಕಿಂತ ಕಡಿಮೆ ಫಲಿತಾಂಶ ಬಂದಿರುವ ಜಿಲ್ಲೆಗಳ ಶಿಕ್ಷಣಾಧಿಕಾರಿಗಳಿಗೆ ತಕ್ಷಣ ನೋಟಿಸ್ ನೀಡಿ, ಅವರ ಉತ್ತರ ಸಮರ್ಪಕವಾಗಿಲ್ಲ ಎಂದು ಅನ್ನಿಸಿದರೆ ಅಂತಹವರ ವಿರುದ್ಧ ಕ್ರಮ ಕೈಗೊಳ್ಳಲು ಮುಖ್ಯ ಕಾರ್ಯದರ್ಶಿಯವರಿಗೆ ಸೂಚಿಸಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಎರಡನೇ ದಿನವಾದ ಇಂದೂ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ಆದೇಶ ಮಾಡಿದ್ದಾರೆ. ಎಸ್‌ಎಸ್‌ಎಲ್‌ಸಿಯಲ್ಲಿ ಫಲಿತಾಂಶ ಕಡಿಮೆ ಬರಲು ಶಿಕ್ಷಕರ ಮತ್ತು ಸಿಬ್ಬಂದಿ ಕೊರತೆ ನೆಪ ಹೇಳಬೇಡಿ. ಕರಾವಳಿ ಜಿಲ್ಲೆಗಳಲ್ಲಿ ಉತ್ತಮ ಫಲಿತಾಂಶ ಬರುತ್ತದೆ. ಅದೇ ಫಲಿತಾಂಶ ಬೇರೆ ಜಿಲ್ಲೆಗಳಲ್ಲಿ ಏಕೆ ಬರುತ್ತಿಲ್ಲ ಎಂದು ಪ್ರಶ್ನಿಸಿದರು.

ವಿವೇಕ ಯೋಜನೆಯಡಿ ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಹಣ ಮಂಜೂರಾತಿಗೆ ವಿಳಂಬ ಆಗಬಾರದು, ಕ್ರಿಯಾ ಯೋಜನೆ ತಕ್ಷಣ ಸಿದ್ಧಪಡಿಸಬೇಕು, ಹಣ ಬಿಡುಗಡೆಯಾಗಿದ್ದರೂ ಶಾಲಾ ಕೊಠಡಿಗಳ ನಿರ್ಮಾಣ ಆಗದಿರಲು ಕಾರಣವೇನು ಎಂದು ಪ್ರಶ್ನಿಸಿದರು.

ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಪ್ರಮಾಣ ಕಡಿಮೆ ಆಗದಂತೆ ಶಿಕ್ಷಕರು ಮತ್ತು ಅಧಿಕಾರಿಗಳು ಪೋಷಕರ ಜೊತೆ ಮಾತನಾಡಬೇಕು, ಡ್ರಾಪ್‌ಔಟ್ ತಡೆಯಲು ಸಾಧ್ಯವಿರುವ ಎಲ್ಲ ಕ್ರಮ ಕೈಗೊಳ್ಳಬೇಕು. ಸರ್ಕಾರ ವಿದ್ಯಾರ್ಥಿಗಳಿಗೆ ಮೊಟ್ಟೆ, ಹಾಲು, ರಾಗಿ ಮಾಲ್ಟ್, ಸೂಪು, ಹಾಸ್ಟೆಲ್ ಎಲ್ಲಾ ಸವಲತ್ತು ಕೊಟ್ಟರೂ ಮಕ್ಕಳ ದಾಖಲಾತಿ ಪ್ರಮಾಣ ಏಕೆ ಕಡಿಮೆ ಆಗುತ್ತಿದೆ ಎಂಬ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದು ಸಮಸ್ಯೆಗಳ ಪರಿಹಾರಕ್ಕೆ ಅಗತ್ಯ ಕ್ರಮಗೊಳ್ಳುವಂತೆ ಸೂಚಿಸಿದರು.

ಮಹಿಳೆ, ಮಕ್ಕಳ ಪೌಷ್ಟಿಕ ಮಟ್ಟ ಸುಧಾರಿಸಿ: ಮಕ್ಕಳ ಹಿಮೋಗ್ಲೋಬಿನ್ ಪ್ರಮಾಣ ಸೇರಿದಂತೆ ಆರೋಗ್ಯ ತಪಾಸಣೆ ನಿರಂತರವಾಗಿ ನಡೆಸಬೇಕು, ಹಾಲು, ಮೊಟ್ಟೆ, ಮಾತ್ರೆ ಕೊಡುತ್ತಿದ್ದರೂ ಕೆಲವು ಕಡೆ ಮಹಿಳೆಯರ ಮತ್ತು ಮಕ್ಕಳ ಪೌಷ್ಟಿಕ ಮಟ್ಟ ಸುಧಾರಿಸದ ಬಗ್ಗೆ ವೈಜ್ಞಾನಿಕ ವರದಿ ನೀಡಿ, ಅದರ ಆಧಾರದಲ್ಲಿ ಅಗತ್ಯ ಸುಧಾರಣಾ ಕ್ರಮ ಕೈಗೊಳ್ಳಿ ಎಂದರು.

ವಿಶೇಷಾಧಿಕಾರಿ ನೇಮಿಸಿ: ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಹಲವು ಯೋಜನೆಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ತಾಂತ್ರಿಕ ತೊಂದರೆಗಳ ಸಬೂಬನ್ನು ಎಷ್ಟು ವರ್ಷಗಳಿಂದ ಹೇಳಿಕೊಂಡು ಬರುತ್ತಿದ್ದೀರಿ, ಅಗತ್ಯ ಬಿದ್ದರೆ ಭೂಸ್ವಾಧೀನಕ್ಕಾಗಿ ವಿಶೇಷ ಅಧಿಕಾರಿ ನೇಮಕ ಮಾಡಿಕೊಳ್ಳಿ, ಇದಕ್ಕೆ ಧ್ವನಿಗೂಡಿಸಿದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, 42 ಬಾಕಿ ಯೋಜನೆಗಳಲ್ಲಿ 22 ಯೋಜನೆ ಪೂರ್ಣಗೊಳಿಸಿದ್ದು, ಕೇಂದ್ರದಿಂದಲೇ ಸಮಸ್ಯೆ ಎದುರಾಗಿದೆ, ಹಲವೆಡೆ ಅವರು ಇನ್ನಷ್ಟು ಕ್ರಿಯಾಶೀಲವಾಗಬೇಕಿದೆ ಎಂದರು.

ಎಲ್ಲೆಲ್ಲಿ ಬಾಟಲ್‌ನೆಕ್ ಸಮಸ್ಯೆ ಇದೆ ಅವುಗಳಿಗೆ ಮೊದಲ ಆದ್ಯತೆ ನೀಡಿ ಬಗೆಹರಿಸಬೇಕು, ಎಸ್‌ಎಲ್‌ಎಓಗಳು ಜಿಲ್ಲಾಧಿಕಾರಿಗಳ ಅಧೀನದಲ್ಲಿ ಬರುವಂತೆ ಸುತ್ತೋಲೆ ಹೊರಡಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕಂದಾಯ ಸಚಿವ ಕೃಷ್ಣಬೈರೇಗೌಡ, ಮೇಲಿಂದ ಮೇಲೆ ಪರಿಶೀಲನೆ ನಡೆಸುತ್ತಿದ್ದರೆ ಪರಿಸ್ಥಿತಿ ▶ 6ನೇ ಪುಟಕ್ಕೆ




ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಎರಡನೇ ದಿನವಾದ ಶನಿವಾರವೂ ಡಿಸಿ, ಎಸ್‌ಪಿ ಹಾಗೂ ಜಿಪಂ ಸಿಇಓಗಳ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡುತ್ತಿರುವುದು. ಡಿಸಿಎಂ ಡಿ.ಕೆ.ಶಿವಕುಮಾರ್ ಚಿತ್ರದಲ್ಲಿದ್ದಾರೆ.

> **“ಶಿಕ್ಷಕರು ಆಸಕ್ತಿಯಿಂದ ಕೆಲಸ ಮಾಡಿದರೆ, ಎಲ್ಲೆಡೆ ಕರಾವಳಿಯಂತೆ ಫಲಿತಾಂಶ ಬರುತ್ತದೆ. ವಿದ್ಯಾರ್ಥಿಗಳಿಗೆ ಸರಿಯಾದ ಶಿಕ್ಷಣ ನೀಡಿದರೆ, ಉಳಿದೆಡೆಯೂ ಇದೇ ಫಲಿತಾಂಶ ಪಡೆಯಬಹುದು. ಶಿಕ್ಷಣಕ್ಕಾಗಿ ಸರ್ಕಾರ ಎಲ್ಲ ಸವಲತ್ತುಗಳನ್ನು ನೀಡುತ್ತದೆ. ಆದರೆ ಡಿಡಿಪಿಐ ಮತ್ತು ಶಿಕ್ಷಕರು ತಮ್ಮ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸದಿದ್ದರೆ ಮಕ್ಕಳು ಕಲಿಕೆಯಲ್ಲಿ ಹಿಂದುಳಿಯುತ್ತಾರೆ. ಇನ್ನು ಮುಂದೆ ಡಿಡಿಪಿಐಗಳು, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸರ್ಕಾರಿ ಶಾಲೆಗಳಿಗೆ ಹಠಾತ್ ಭೇಟಿ ನೀಡಿ ಪರಿಶೀಲಿಸಬೇಕು. ಅಗತ್ಯವಿದ್ದರೆ ಮಾರ್ಗದರ್ಶನ ನೀಡಬೇಕು.**
>
> –ಸಿದ್ದರಾಮಯ್ಯ, ಮುಖ್ಯಮಂತ್ರಿ

ರಾಜ್ಯದಲ್ಲಿ ಕೊರೊನಾ ಸಕ್ರಿಯ ಪ್ರಕರಣಗಳ ಏರಿಕೆ

ಆತಂಕವಿಲ್ಲ; ಮುಂಜಾಗ್ರತಾ ಕ್ರಮ ವಹಿಸಿ: ಆರೋಗ್ಯ ಇಲಾಖೆ ಸೂಚನೆ

ಬೆಂಗಳೂರು: ರಾಜ್ಯದಲ್ಲಿ ದಿನೇ ದಿನೆ ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿದೆ. ರಾಜ್ಯದ ಒಟ್ಟು ಸಕ್ರಿಯ ಪ್ರಕರಣದ ಸಂಖ್ಯೆ 238ಕ್ಕೆ ಏರಿಕೆಯಾಗಿದ್ದು, ಅದರಲ್ಲಿ ಬೆಂಗಳೂರು ಒಂದರಲ್ಲೇ ಬರೋಬ್ಬರಿ 150ಕ್ಕೂ ಹೆಚ್ಚು ಆಕ್ಟೀವ್ ಕೇಸ್‌ಗಳು ದಾಖಲಾಗಿದೆ. ಕಳೆದ 24 ಗಂಟೆಯಲ್ಲಿ ರಾಜ್ಯದಲ್ಲಿ 58 ಮಂದಿಗೆ ಕೋವಿಡ್-19 ಪಾಸಿಟಿವ್ ದೃಢಪಟ್ಟಿದೆ. ಇದೇ ಅವಧಿಯಲ್ಲಿ ಸೋಂಕಿಗೆ ತುತ್ತಾಗಿದ್ದ 53 ಮಂದಿ ಗುಣಮುಖರಾಗಿದ್ದಾರೆ. ಸೋಂಕಿತರಲ್ಲಿ 225 ಮಂದಿ ಹೋಮ್ ಐಸೋಲೇಷನ್ (ಮನೆಯಲ್ಲೇ ಚಿಕಿತ್ಸೆ)ನಲ್ಲಿದ್ದಾರೆ. 13 ಮಂದಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಒಬ್ಬರು ಕೃತಕ ಆಮ್ಲಜನಕದ ಬೆಂಬಲದಲ್ಲಿದ್ದಾರೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಿಳಿಸಿದೆ. ರಾಜ್ಯದಲ್ಲಿ ಕೊರೊನಾದಿಂದ ಇಂದು ಮೈಸೂರಲ್ಲಿ ಒಬ್ಬರು ಸೇರಿ ಒಟ್ಟು ಇಬ್ಬರು ಮೃತಪಟ್ಟಿದ್ದು, ಸಾವಿನ ಸಂಖ್ಯೆ 5ಕ್ಕೆ ಏರಿಕೆಯಾಗಿದೆ. ಕೊರೊನಾ ಅಷ್ಟೇನೂ ಅಪಾಯಕಾರಿಯಲ್ಲ. ▶ 6ನೇ ಪುಟಕ್ಕೆ



ಕೆಮ್ಮು, ನೆಗಡಿ, ಜ್ವರ ಇದ್ದರೆ ಮಕ್ಕಳಿಗೆ ರಜೆ

ಬೆಂಗಳೂರು, ಮೇ 31(ಕೆಎಂಶಿ)– ಕೆಮ್ಮು, ನೆಗಡಿ, ಜ್ವರ ಇರುವ ಮಕ್ಕಳಿಗೆ ರಜೆ ನೀಡುವಂತೆ ಶಾಲೆಗಳಿಗೆ ಸರ್ಕಾರ ಕಟ್ಟಾದೇಶ ಮಾಡಿದೆ.

ಕೋವಿಡ್-19 ಸಾಂಕ್ರಾಮಿಕ ರೋಗ ಮತ್ತೆ ಹರಡುತ್ತಿರುವ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮಕ್ಕಾಗಿ ಆರೋಗ್ಯ ಹಾಗೂ ಪ್ರಾಥಮಿಕ ಶಿಕ್ಷಣ ಇಲಾಖೆ ಈ ತೀರ್ಮಾನ ಕೈಗೊಂಡಿದೆ. ಜೂ.2ರಿಂದ ಶಾಲೆಗಳು ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರ ಮುನ್ನೆಚ್ಚರಿಕೆಯಾಗಿ ▶ 6ನೇ ಪುಟಕ್ಕೆ

ಮೈಸೂರಲ್ಲಿ ಸೋಂಕಿತ ಸಾವು

ಮೈಸೂರು, ಮೇ 31(ಆರ್‌ಕೆ)– ಕಿಡ್ನಿ ಸಮಸ್ಯೆಯಿಂದ ಬಳಲುತ್ತಿದ್ದ ಕೊರೊನಾ ಸೋಂಕಿತ ಕೊಳ್ಳೇಗಾಲದ ರೋಗಿಯೊಬ್ಬರು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾರೆ. ಕೊಳ್ಳೇಗಾಲದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ 62 ವರ್ಷದ ವ್ಯಕ್ತಿ ಡಯಾಲಿಸಿಸ್‌ಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಸ್ವ್ಯಾಬ್ ಟೆಸ್ಟ್ ಮಾಡಿದಾಗ ಅವರಿಗೆ ಕೊರೊನಾ ಸೋಂಕಿರುವುದು ದೃಢಪಟ್ಟಿತ್ತು. ಚಿಕಿತ್ಸೆ ಫಲಕಾರಿಯಾಗದೆ ಮೇ 25ರಂದು ಮೃತಪಟ್ಟಿದ್ದಾರೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಮೈಸೂರು ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ನಾಗರಾಜ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಮೈಸೂರಿನ ಕೆಆರ್ ಆಸ್ಪತ್ರೆಯಲ್ಲಿ ಆರ್-ಪಿಸಿಆರ್ ಪರೀಕ್ಷೆ ಮಾಡುತ್ತಿದ್ದು, ಕೊರೊನಾ ಪ್ರಕರಣ ದಾಖಲಾಗುತ್ತಿಲ್ಲವಾದರೂ ಮುಂಜಾಗ್ರತಾ ಕ್ರಮವಾಗಿ ಕೆಆರ್ ಆಸ್ಪತ್ರೆಯಲ್ಲಿ ಕೊರೊನಾ ವಾರ್ಡ್ ಸಜ್ಜುಗೊಳಿಸಿದ್ದು, ಚಿಕಿತ್ಸೆಗೆ ಸಕಲ ವ್ಯವಸ್ಥೆ ಮಾಡಲಾಗಿದೆ ಎಂದ ಅವರು, ಸಾರ್ವಜನಿಕರು ಆತಂಕಪಡಬೇಕಿಲ್ಲ. ಆದರೆ ಎಚ್ಚರ ವಹಿಸಬೇಕು ಎಂದು ಸಲಹೆ ನೀಡಿದ್ದಾರೆ.

ಕೆಆರ್‌ಎಸ್ ಪ್ರವೇಶ, ವಾಹನ ನಿಲುಗಡೆಗೆ ಇಂದಿನಿಂದ ಹೊಸ ದರ



ಮೈಸೂರು, ಮೇ 31(ಆರ್‌ಕೆ)– ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕು ವಿಶ್ವ ಪ್ರಸಿದ್ಧ ಕೃಷ್ಣರಾಜ ಸಾಗರ (ಕೆಆರ್‌ಎಸ್) ಬೃಂದಾವನದ ಪರಿಷ್ಕೃತ ಪ್ರವೇಶ ದರ ನಾಳೆ (ಜೂನ್ 1)ಯಿಂದ ಜಾರಿಯಾಗಲಿದೆ.

ಬೃಂದಾವನದ ಪ್ರವೇಶ, ವಾಹನಗಳ ನಿಲುಗಡೆ ಮತ್ತು ಟೋಲ್ ಶುಲ್ಕ ಹೆಚ್ಚಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿತ್ತು. ಜೂನ್ 1ರ ಭಾನುವಾರದಿಂದ ಪರಿಷ್ಕೃತ ದರ ಜಾರಿಯಾಗಲಿದೆ ಎಂದು ಕಾವೇರಿ ನೀರಾವರಿ ನಿಗಮ ನಿಯಮಿತ (ಸಿಎನ್‌ಎನ್‌ಎಲ್)ದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಫಾರುಖ್ ಅಹಮದ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಪ್ರವೇಶ ಶುಲ್ಕ: ವಯಸ್ಕರಿಗೆ (6 ವರ್ಷ ಮೇಲ್ಪಟ್ಟವರು) 100 ರೂ., 3ರಿಂದ 6 ವರ್ಷದೊಳಗಿನ ಮಕ್ಕಳಿಗೆ 50 ರೂ., ಶಾಲಾ ಮಕ್ಕಳಿಗೆ 5 ರೂ. ಹಾಗೂ ಕ್ಯಾಮರಾ ಶುಲ್ಕ 100 ರೂ. ದರ ನಿಗದಿಪಡಿಸಲಾಗಿದೆ. ದೈಹಿಕ ಅಂಗವಿಕಲರು, ಹಿರಿಯ ನಾಗರಿಕರು ಹಾಗೂ ಮಕ್ಕಳಿಗೆ ಬೃಂದಾವನದಲ್ಲಿ ವಿಹರಿಸಲು 9ರಿಂದ 14 ಆಸನವುಳ್ಳ ಎಲೆಕ್ಟ್ರಿಕ್ ವಾಹನ ವ್ಯವಸ್ಥೆ ಇದ್ದು, ತಲಾ 100 ರೂ. ಶುಲ್ಕ ಪಾವತಿಸಬೇಕಾಗುತ್ತದೆ.

ಪಾರ್ಕಿಂಗ್ ಶುಲ್ಕ: ಬೆಳಗ್ಗೆ 8 ಗಂಟೆಯಿಂದ ಬೃಂದಾವನ ಗಾರ್ಡನ್ ವಿದ್ಯುದ್ದೀಪಾಲಂಕಾರ ಮುಗಿದ ನಂತರ 45 ನಿಮಿಷದವರೆಗೆ ದ್ವಿಚಕ್ರ ವಾಹನಗಳಿಗೆ 20 ರೂ., ತ್ರಿಚಕ್ರ ವಾಹನಗಳಿಗೆ 50 ರೂ., ಕಾರುಗಳಿಗೆ 100 ರೂ. ಹಾಗೂ ಮಿನಿ ಬಸ್‌ಗೆ 100 ರೂ. ಪಾರ್ಕಿಂಗ್ ಶುಲ್ಕ ನಿಗದಿಪಡಿಸಲಾಗಿದೆ.

ಟೋಲ್ ಶುಲ್ಕ: ಸೇತುವೆ ಮೇಲೆ ಸಂಚರಿಸಲು 3 ಚಕ್ರ ವಾಹನಗಳಿಗೆ 100 ರೂ., ಕಾರುಗಳಿಗೆ 100 ರೂ., ಟೆಂಪೋ, ಮಿನಿ ಬಸ್‌ಗೆ 100 ರೂ., ಬಸ್‌ಗಳಿಗೆ 200 ರೂ., 6 ಚಕ್ರದ ಲಾರಿಗಳಿಗೆ 200 ರೂ. ಹಾಗೂ 10 ಚಕ್ರದ ಲಾರಿಗಳಿಗೆ 300 ರೂ. ಟೋಲ್ ಫೀ ಪಾವತಿಸಬೇಕಾಗಿದೆ. ಟೋಲ್‌ನಲ್ಲಿ ಫಾಸ್ಟ್ಯಾಗ್ ಸೌಲಭ್ಯವೂ ಇರುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಾರ್ವಜನಿಕ ಸ್ಥಳದಲ್ಲಿ ಬೀಡಿ-ಸಿಗರೇಟ್ ಸೇದಿದರೆ; ಗುಟ್ಕಾ ಉಗುಳಿದರೆ ದಂಡ

ಬೆಂಗಳೂರು, ಮೇ 31(ಕೆಎಂಶಿ)–ಸಾರ್ವಜನಿಕ ಸ್ಥಳಗಳಲ್ಲಿ ಬೀಡಿ, ಸಿಗರೇಟ್ ಸೇದುವಂತಿಲ್ಲ. ತಂಬಾಕು, ಗುಟ್ಕಾ ಎಲ್ಲೆಂದರಲ್ಲಿ ಉಗುಳಿದರೆ ದಂಡ ವಿಧಿಸುವ ಕಾನೂನು ರಾಜ್ಯಾದ್ಯಂತ ತಡರಾತ್ರಿಯಿಂದಲೇ ಜಾರಿಗೊಂಡಿದೆ.



ತಂಬಾಕು, ಗುಟ್ಕಾ ತಿಂದು ಉಗುಳುವುದು ಹಾಗೂ ಸಿಗರೇಟ್ ಸೇದಿದರೆ 1 ಸಾವಿರ ರೂ.ವರೆಗೆ ದಂಡ ವಿಧಿಸಲು ಕಾನೂನಿನಲ್ಲಿ ಅವಕಾಶ ಮಾಡಿಕೊಡಲಾಗಿದೆ. ರಾಜ್ಯದ ಯಾವುದೇ ಭಾಗದಲ್ಲಿ ಹುಕ್ಕಾಬಾರ್ ತೆರೆಯುವಂತಿಲ್ಲ, ಈಗಿರುವ ಹುಕ್ಕಾಬಾರ್‌ಗಳನ್ನು ತಕ್ಷಣವೇ ಮುಚ್ಚಬೇಕು. ಕಾನೂನಿಗೆ ವಿರುದ್ಧವಾಗಿ ನಡೆದರೆ 3 ವರ್ಷ ಜೈಲು ಶಿಕ್ಷೆ ಅನುಭವಿಸಬೇಕಾಗುತ್ತದೆ. ಈ ಸಂಬಂಧದ ತಿದ್ದುಪಡಿ ಕಾನೂನಿಗೆ ರಾಷ್ಟ್ರಪತಿಗಳು ಅಂಗೀಕಾರ ನೀಡಿದ ತಕ್ಷಣವೇ ಸರ್ಕಾರ ನಿಯಮಾವಳಿ ರೂಪಿಸಿ ಆದೇಶ ಜಾರಿಗೊಳಿಸಿದೆ. 21 ವರ್ಷಗಳಿಗಿಂತ ಕಡಿಮೆ ವಯಸ್ಸಿನವರಿಗೆ ತಂಬಾಕು ಉತ್ಪನ್ನಗಳನ್ನು ಮಾರುವಂತಿಲ್ಲ, ತಂಬಾಕು ಉತ್ಪನ್ನಗಳ ಸಂಬಂಧ ಸಾರ್ವಜನಿಕವಾಗಿ ಜಾಹೀರಾತು ನೀಡುವಂತಿಲ್ಲ. ಶಾಲಾ-ಕಾಲೇಜುಗಳ ಆವರಣದಿಂದ 100 ಮೀಟರ್ ಸುತ್ತಳತೆ ಪ್ರದೇಶದಲ್ಲಿ ಬೀಡಿ, ಸಿಗರೇಟ್ ಹಾಗೂ ಬೆಂಕಿ ಪೊಟ್ಟಣ ಮಾರುವುದನ್ನು ನಿಷೇಧಿಸಲಾಗಿದೆ. ಉಪಾಹಾರ ಗೃಹ, ಪಬ್, ಬಾರ್, ರೆಸ್ಟೋರೆಂಟ್ ಒಳಗೊಂಡಂತೆ ಯಾವುದೇ ಸ್ಥಳದಲ್ಲಿ ಹುಕ್ಕಾ ಬಾರ್ ತೆರೆಯುವಂತಿಲ್ಲ ಹಾಗೂ ನಡೆಸುವಂತಿಲ್ಲ.

ಕಸಾಪ ಅಧ್ಯಕ್ಷ ಮಹೇಶ್ ಜೋಶಿಗೆ ಸಚಿವ ಸ್ಥಾನಮಾನ ಹಿಂಪಡೆದ ರಾಜ್ಯ ಸರ್ಕಾರ



ಬೆಂಗಳೂರು, ಮೇ 31– ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ ಅವರಿಗೆ ನೀಡಲಾಗಿದ್ದ ರಾಜ್ಯ ಸಚಿವ ಸ್ಥಾನಮಾನ ಹಾಗೂ ಸವಲತ್ತುಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ರಾಜ್ಯ ಸರ್ಕಾರ ಹಿಂಪಡೆದಿದೆ. ಕೆಲವು ಸಾಹಿತಿಗಳು ಮಹೇಶ್ ಜೋಶಿ ಅವರ ಕಾರ್ಯವೈಖರಿ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದರು.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸ್ಥಾನದಿಂದ ಅವರನ್ನು ಕೆಳಗಿಳಿಸಬೇಕು ಎಂದು ಕೋರಿದ್ದರು. ಇದರ ಬೆನ್ನಲ್ಲೇ ರಾಜ್ಯ ಸರ್ಕಾರ ಅವರಿಗೆ ನೀಡಿದ್ದ ಸಚಿವ ಸ್ಥಾನಮಾನವನ್ನು ಹಿಂಪಡೆದಿದೆ. ನಾಡೋಜ ಡಾ.ಮಹೇಶ್ ಜೋಶಿ ಅವರಿಗೆ ನೀಡಲಾಗಿದ್ದ ರಾಜ್ಯ ಸಚಿವ ಸ್ಥಾನಮಾನ ಹಾಗೂ ಸವಲತ್ತುಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ.

ದ್ವಿಚಕ್ರ ವಾಹನದ ಹಿಂಬದಿ ಸವಾರನ ಹಿಡಿದೆಳೆಯಬೇಡಿ; ಗಾಡಿ ಕೀಲಿಕೈ ಮುಟ್ಟಬೇಡಿ!

ಮಂಡ್ಯ ಘಟನೆ ಬೆನ್ನಲ್ಲೇ ವಾಹನ ತಪಾಸಣೆಗೆ ಹೊಸ ಮಾರ್ಗಸೂಚಿ

ಬೆಂಗಳೂರು, ಮೇ 31– ಇತ್ತೀಚೆಗೆ ಮಂಡ್ಯದಲ್ಲಿ ಸಂಚಾರ ಪೊಲೀಸರ ಅಮಾನವೀಯ ವರ್ತನೆಯಿಂದ ಮಗು ಬಿದ್ದು ಸಾವನ್ನಪ್ಪಿರುವ ದುರಂತದ ಹಿನ್ನೆಲೆಯಲ್ಲಿ ಎಚ್ಚೆತ್ತುಕೊಂಡಿರುವ ರಾಜ್ಯ ಪೊಲೀಸ್ ಇಲಾಖೆಯು ವಾಹನ ತಪಾಸಣೆ ಮಾಡುವಾಗ ಕೈಗೊಳ್ಳಬೇಕಾದ ಸುರಕ್ಷತಾ ಕ್ರಮಗಳ ಬಗ್ಗೆ ಮಾರ್ಗಸೂಚಿ ಹೊರಡಿಸಿದೆ.



ಡಾ.ಸಲೀಂ

ವಾಹನ ತಪಾಸಣೆ ವೇಳೆ ಮಂಡ್ಯದಲ್ಲಿ ಮೂರು ವರ್ಷದ ಮಗು ಸಾವನ್ನಪ್ಪಿದೆ. ಹೀಗಾಗಿ ಭವಿಷ್ಯದಲ್ಲಿ ಇಂತಹ ದುರ್ಘಟನೆ ಮರುಕಳಿಸದಿರಲು ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ. ಸಲೀಂ, ತಪಾಸಣೆ ವೇಳೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮಾರ್ಗಸೂಚಿ ಹೊರಡಿಸಿದ್ದಾರೆ.

ಡಿಜಿಪಿಯಿಂದ ಮಾರ್ಗಸೂಚಿ ಪ್ರಕಟ

- ವಾಹನಗಳಿಗೆ ಸಂಬಂಧಪಟ್ಟ ದಾಖಲೆ ಪರೀಕ್ಷಿಸಲು ಸಕಾರಣವಿಲ್ಲದೇ ವಾಹನಗಳನ್ನು ತಡೆದು ತಪಾಸಣೆಗೊಳಪಡಿಸಬಾರದು. ಕಣ್ಣಿಗೆ ಕಾಣುವ (Visible violation) ಸಂಚಾರ ನಿಯಮ ಉಲ್ಲಂಘನೆಗಳು ಕಂಡುಬಂದಲ್ಲಿ ಮಾತ್ರವೇ ಅಂತಹ ವಾಹನಗಳನ್ನು ನಿಲ್ಲಿಸಿ ಪ್ರಕರಣಗಳನ್ನು ದಾಖಲಿಸಬೇಕು.
- ಹೆದ್ದಾರಿಗಳಲ್ಲಿ ಜಿಗ್‌ಜಾಗ್ ಮಾದರಿಯಲ್ಲಿ ಬ್ಯಾರಿಕೇಡ್ ಹಾಕಿ ವಾಹನಗಳನ್ನು ತಡೆಯಬಾರದು. ರಸ್ತೆಯಲ್ಲಿ ದಿಢೀರನೇ ಅಡ್ಡಬಂದು ವಾಹನ ನಿಲ್ಲಿಸುವಂತೆ ಹೇಳಬಾರದು.
- ದ್ವಿಚಕ್ರ ವಾಹನ ಹಿಂಬದಿ ಸವಾರನನ್ನು ಹಿಡಿದು ಎಳೆಯುವುದು ಹಾಗೂ ವಾಹನಗಳ ಕೀಲಿಕೈ ತೆಗೆದುಕೊಳ್ಳುವುದನ್ನು ಮಾಡಬಾರದು.
- ವೇಗವಾಗಿ ಚಲಾಯಿಸಿಕೊಂಡು ಬರುವ ವಾಹನ ಸವಾರರನ್ನು ಹಿಡಿಯಲು ಅವರನ್ನು ಬೆನ್ನಟ್ಟದೇ ಆ ವಾಹನಗಳ ನೋಂದಣಿ ಸಂಖ್ಯೆ ▶ 6ನೇ ಪುಟಕ್ಕೆ

ಮೈಸೂರು ಮುಕ್ತ ವಿವಿಯಲ್ಲಿ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಫ್ಯೂಚರ್ ಸ್ಕಿಲ್ಸ್ ಕೇಂದ್ರ ಉದ್ಘಾಟನೆ

ಆರ್ಥಿಕತೆ, ಸ್ವಾವಲಂಬನೆಯಿಂದ ಭಾರತ ವಿಶ್ವದ ಕೌಶಲ ರಾಜಧಾನಿಯಾಗುತ್ತಿದೆ: ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಮೆಚ್ಚುಗೆ

ಮೈಸೂರು, ಮೇ31 (ಜಿಎ)–ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ಆವರಣದಲ್ಲಿರುವ ಸಿದ್ಧಪಾತ ವಿಭಾಗದ ಮೊದಲ ಮಹಡಿಯಲ್ಲಿ ರಾಷ್ಟ್ರೀಯ ಕೌಶಲ ಅಭಿವೃದ್ಧಿ ನಿಗಮ(ಎನ್‌ಎಸ್‌ಡಿಎಸ್), ಸ್ಕಿಲ್ ಇಂಡಿಯಾ, ಎಥ್ನೋಟೆಕ್ ಗ್ರೂಪ್ ಸಹಯೋಗದೊಂದಿಗೆ ನಿರ್ಮಿಸಿರುವ 'ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಫ್ಯೂಚರ್ ಸ್ಕಿಲ್ಸ್' ಕೇಂದ್ರವನ್ನು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಶನಿವಾರ ಉದ್ಘಾಟಿಸಿದರು.

ನಂತರ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ಏರ್ಪಡಿಸಿದ್ದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳು, ನೀತಿಗಳು ಮತ್ತು ಸಂಸ್ಥೆಗಳು ಯುವಕರನ್ನು ಉತ್ತಮ ಜೀವನಕ್ಕಾಗಿ ಸಿದ್ಧಪಡಿಸುತ್ತಿವೆ ಮತ್ತು ದೇಶದ ಆರ್ಥಿಕತೆ ಮತ್ತು ಸ್ವಾವಲಂಬನೆಯನ್ನು ಬಲಪಡಿಸುತ್ತಿವೆ. ಈ ಪ್ರಯತ್ನಗಳಿಂದಾಗಿ, ಇಂದು ಭಾರತವು ವಿಶ್ವದ ಕೌಶಲ ರಾಜಧಾನಿಯಾಗುವತ್ತ ಸಾಗುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಎನ್‌ಎಸ್‌ಡಿಎಸ್, ಸ್ಕಿಲ್ ಇಂಡಿಯಾ, ಎಥ್ನೋಟೆಕ್ ಗ್ರೂಪ್ ಸಹಯೋಗದೊಂದಿಗೆ ಸ್ಥಾಪಿಸಲಾದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಫ್ಯೂಚರ್ ಸ್ಕಿಲ್ಸ್ ಸೆಂಟರ್ ಉದ್ಘಾಟನೆಗೊಂಡಿರುವುದು ಸಂತೋಷದ ವಿಷಯ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ಪ್ರಾರಂಭದಿಂದಲೂ, ಎಲ್ಲರಿಗೂ, ಎಲ್ಲೆಡೆಯೂ ಉನ್ನತ ಶಿಕ್ಷಣ ಎಂಬ ತನ್ನ ಧ್ಯೇಯವಾಕ್ಯವನ್ನು ಗಮನದಲ್ಲಿಟ್ಟುಕೊಂಡು ನಿರಂತರ ಮತ್ತು ಸಕಾರಾತ್ಮಕ ಪ್ರಯತ್ನಗಳನ್ನು ಮಾಡುತ್ತಿದೆ. ನ್ಯಾಕ್‌ನಿಂದ ಎ+ ದರ್ಜೆ ಪಡೆದ ಈ ವಿಶ್ವವಿದ್ಯಾನಿಲಯವು, ಮುಕ್ತ ಮತ್ತು ದೂರಶಿಕ್ಷಣ ವ್ಯವಸ್ಥೆಯ ಮೂಲಕ ಉನ್ನತ ಶಿಕ್ಷಣವನ್ನು ನೀಡುವಲ್ಲಿ ರಾಜ್ಯ ಮತ್ತು ದೇಶದಲ್ಲಿ ಮುಂಚೂಣಿಯಲ್ಲಿರುವ ಸಂಸ್ಥೆಯಾಗಿದ್ದು, ಅಭಿವೃದ್ಧಿ ಹೊಂದಿದ ಭಾರತಕ್ಕಾಗಿ ಮಾನವ ಸಂಪನ್ಮೂಲವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ ಎಂದು ತಿಳಿಸಿದರು.

ಭಾರತದ ಜನಸಂಖ್ಯೆಯಲ್ಲಿ ಸುಮಾರು 65 ಪ್ರತಿಶತದಷ್ಟು ಜನಸಂಖ್ಯೆಯು 35 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದಾರೆ. ಇಷ್ಟು ದೊಡ್ಡ ಯುವಜನರಿಗೆ ಸರಿಯಾದ ದಿಕ್ಕಿನಲ್ಲಿ ತರಬೇತಿ ನೀಡಿದರೆ, ಭಾರತವನ್ನು ಜಾಗತಿಕ ಮಟ್ಟದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ತಾಂತ್ರಿಕವಾಗಿ ಬಲಿಷ್ಠಗೊಳಿಸಬಹುದು. ಈ ಕಾರಣಕ್ಕಾಗಿ, ಇಂದಿನ ಯುಗದಲ್ಲಿ ಕೌಶಲ ಶಿಕ್ಷಣದ ಮಹತ್ವ ಇನ್ನಷ್ಟು ಹೆಚ್ಚುತ್ತಿದೆ. ಕೌಶಲ ಎಂದರೆ ಒಂದು ಕೆಲಸವನ್ನು ಸರಿಯಾಗಿ, ಪರಿಣಾಮಕಾರಿಯಾಗಿ ಮತ್ತು ಕೌಶಲದಿಂದ ಮಾಡುವ ಸಾಮರ್ಥ್ಯ. ಒಬ್ಬ ವ್ಯಕ್ತಿಯು ತನ್ನ ಜ್ಞಾನ, ಅನುಭವ ಮತ್ತು ಅಭ್ಯಾಸದ ಆಧಾರದ ಮೇಲೆ ಪಡೆಯುವ ಸಾಮರ್ಥ್ಯವೇ ಅವನಿಗೆ ಒಂದು ಕೆಲಸವನ್ನು ಪರಿಣಾಮಕಾರಿಯಾಗಿ ಪೂರ್ಣಗೊಳಿಸಲು ಅನುವು ಮಾಡಿಕೊಡುತ್ತದೆ ಎಂದು ಅಭಿಪ್ರಾಯಪಟ್ಟರು.

ರಾಜಕೀಯ ಪ್ರವೇಶ ಮಾಡುವ ಮೊದಲು ನಾನು ಮಧ್ಯಪ್ರದೇಶದಲ್ಲಿರುವ ಬಿರ್ಲಾ ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದೆ, ಅಲ್ಲಿ ನನಗೆ ಸೂಪರ್‌ವೈಸ್ ಮಾಡುವ ಕೆಲಸ ನೀಡಲಾಗಿತ್ತು. ಆದರೆ ನಾನು ಪ್ರತಿಯೊಂದು ಕೆಲಸ ಮಾಡಿದೆ. ಒಬ್ಬ ವ್ಯಕ್ತಿ ಎಲ್ಲಾ ಹಂತದ ಕೆಲಸ ಮಾಡಿದಾಗ ಪರಿಪೂರ್ಣವಾಗಿ, ಕೌಶಲ ಹೆಚ್ಚಾಗಲಿದೆ ಎಂದು ಹೇಳುವ ಮೂಲಕ ▶ 6ನೇ ಪುಟಕ್ಕೆ



ಮೈಸೂರಿನ ಕರ್ನಾಟಕ ಮುಕ್ತ ವಿವಿ ಆವರಣದಲ್ಲಿರುವ ಸಿದ್ಧಪಾತ ವಿಭಾಗದ ಮೊದಲ ಮಹಡಿಯಲ್ಲಿ ರಾಷ್ಟ್ರೀಯ ಕೌಶಲ ಅಭಿವೃದ್ಧಿ ನಿಗಮ, ಸ್ಕಿಲ್ ಇಂಡಿಯಾ, ಎಥ್ನೋಟೆಕ್ ಗ್ರೂಪ್ ಸಹಯೋಗದೊಂದಿಗೆ ನಿರ್ಮಿಸಿರುವ 'ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಫ್ಯೂಚರ್ ಸ್ಕಿಲ್ಸ್' ಕೇಂದ್ರವನ್ನು ಕರ್ನಾಟಕ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಉದ್ಘಾಟಿಸಿದರು.

> “ಭಾರತ ಸರ್ಕಾರವು ಕೌಶಲ ಅಭಿವೃದ್ಧಿಗೆ ಆದ್ಯತೆ ನೀಡಿದ್ದು, ಯುವಜನರಿಗೆ ಉದ್ಯೋಗ ಆಧಾರಿತ ಮತ್ತು ಕೈಗಾರಿಕಾ ಆಧಾರಿತ ತರಬೇತಿ ಒದಗಿಸಲು ಪ್ರಧಾನಮಂತ್ರಿ ಕೌಶಲ ವಿಕಾಸ ಯೋಜನೆ, ರಾಷ್ಟ್ರೀಯ ಕೌಶಲ ಅಭಿವೃದ್ಧಿ ಮಿಷನ್, ರಾಷ್ಟ್ರೀಯ ಶಿಷ್ಯವೃತ್ತಿ ಉತ್ತೇಜನ ಯೋಜನೆ, ಕೌಶಲ ಭಾರತ ಮಿಷನ್, ರಾಷ್ಟ್ರೀಯ ಕೌಶಲ ಅಭಿವೃದ್ಧಿ ನಿಗಮದಂತಹ ಸಂಸ್ಥೆಗಳಂತಹ ವಿವಿಧ ಯೋಜನೆಗಳು, ನೀತಿಗಳನ್ನು ಸ್ಥಾಪಿಸಿದೆ. ಈ ಪ್ರಯತ್ನಗಳು ದೇಶವನ್ನು ಕೌಶಲ ಪೂರ್ಣ ಭಾರತ ಸಬಲೀಕೃತ ಭಾರತವನ್ನಾಗಿ ಮಾಡುವಲ್ಲಿ ಮಹತ್ವದ ಪಾತ್ರವಹಿಸುತ್ತಿವೆ. **–ಥಾವರ್‌ಚಂದ್ ಗೆಹ್ಲೋಟ್**

ಮೊದಲ ಮಹಡಿಗೆ ಏರಬೇಕಾದ ರಾಜ್ಯಪಾಲರಿದ್ದ ಲಿಫ್ಟ್ ಸೆಲ್ಲರ್‌ಗೆ ಕುಸಿತ; ಕೆಲ ಸಮಯ ಆತಂಕ

6 ಮಂದಿ ಸಾಮರ್ಥ್ಯದ ಲಿಫ್ಟ್‌ನಲ್ಲಿ 16 ಮಂದಿ ಕೂಡಿಕೊಂಡರು!

ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ಆವರಣದಲ್ಲಿರುವ ಸಿದ್ಧಪಾತ ವಿಭಾಗದ ಮೊದಲ ಮಹಡಿಯಲ್ಲಿ 'ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಫ್ಯೂಚರ್ ಸ್ಕಿಲ್ಸ್' ಕೇಂದ್ರವನ್ನು ಉದ್ಘಾಟಿಸಲು ರಾಜ್ಯಪಾಲರು ಲಿಫ್ಟ್ ಮೂಲಕ ತೆರಳಿದಾಗ ಅದು ಓವರ್‌ಲೋಡ್‌ನಿಂದಾಗಿ ಮೇಲೇರುವ ಬದಲು ಸೆಲ್ಲರ್‌ಗೆ ಕುಸಿದಿದ್ದರಿಂದ ಕೆಲಕಾಲ ಆತಂಕ ಸೃಷ್ಟಿಯಾಯಿತು.

ಈ ಲಿಫ್ಟ್‌ನಲ್ಲಿ ಕೇವಲ 6 ಮಂದಿ ಏರಬಹುದು. ಆದರೆ ಅವರೊಟ್ಟಿಗೆ ಹೆಚ್ಚುವರಿಯಾಗಿ 10 ಮಂದಿ ಸೇರಿಕೊಂಡಾಗ ಲಿಫ್ಟ್ ಓವರ್‌ಲೋಡ್ ಆಗಿ ಮೊದಲ ಮಹಡಿಗೆ ಏರಬೇಕಿದ್ದ ಲಿಫ್ಟ್ ಸೆಲ್ಲರ್‌ಗೆ ಕುಸಿಯಿತು. ಈ ಘಟನೆಯಿಂದ ರಾಜ್ಯಪಾಲರ ಭದ್ರತಾ ಸಿಬ್ಬಂದಿ ಗಾಬರಿಗೊಂಡು ತಕ್ಷಣ ಲಿಫ್ಟ್ ಬಳಿ ಹೋಗಿ ಬಾಗಿಲು ತೆಗೆಯಲು ಪ್ರಯತ್ನಿಸಿದರು. ಆದರೆ, ಸಾಧ್ಯವಾಗಲಿಲ್ಲ. ನಂತರ ಲಿಫ್ಟ್ ನಿರ್ವಹಿಸುವ ಸಿಬ್ಬಂದಿ ಬಂದು ಬಾಗಿಲು ತೆಗೆದರು. ಬಳಿಕ ಭದ್ರತಾ ಸಿಬ್ಬಂದಿ ಲಿಫ್ಟಿನ ಒಳಗೆ ಇದ್ದವರನ್ನು ಸುರಕ್ಷಿತವಾಗಿ ಹೊರಕರೆತಂದರು. ರಾಜ್ಯಪಾಲರು ಮತ್ತೆ ಲಿಫ್ಟ್ ತಂಟೆಗೆ ಹೋಗದೆ ಮೆಟ್ಟಿಲು ಏರಿ ಬಂದು 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಫ್ಯೂಚರ್ ಸ್ಕಿಲ್ಸ್' ಕೇಂದ್ರವನ್ನು ಉದ್ಘಾಟಿಸಿದರು.



ರಾಜ್ಯಪಾಲರು ಲಿಫ್ಟ್‌ನಲ್ಲಿ ಸಿಲುಕಿದಾಗ ಭದ್ರತಾ ಸಿಬ್ಬಂದಿ ರಕ್ಷಣೆಗೆ ಮುಂದಾಗಿರುವುದು.

ನಕ್ಕರೆ ಅದೇ ಸ್ವರ್ಗ

ಗಂಡ : ಇನ್ನೂ ಅಡುಗೆ ಆಗಿಲ್ವಾ? ನನಗೆ ಹಸಿವಾಗ್ತಾ ಇದೆ. ಹೋಟೆಲ್‌ಗೆ ಹೋಗ್ತೀನಿ.
ಹೆಂಡತಿ : ಆಯ್ತು, ನಿಮಿಷ ತಡ್ಕೊಳ್ಳಿ
ಗಂಡ : ನಿಮಿಷದಲ್ಲಿ ಅಡುಗೆ ಮಾಡಿ ಬಿಡ್ತೀಯಾ?
ಹೆಂಡತಿ : ಇಲ್ಲಾರೀ, ಅಷ್ಟರಲ್ಲಿ ನಾನು ರೆಡಿ ಆಗಿ ಬರ್ತೀನಿ.

ಮೈಸೂರು ಮಿತ್ರ
ಭಾನುವಾರ 1 ಜೂನ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಸತ್ಯವನ್ನು ಹೇಳುವ ಅಭ್ಯಾಸ ಮಾಡಿಕೊಂಡರೆ ಭಗವಂತನಿಗೂ ಹೆದರುವ ಅವಶ್ಯಕತೆ ಇಲ್ಲ. ಸುಳ್ಳನ್ನು ಹೇಳಲು ಪ್ರಾರಂಭ ಮಾಡಿದರೆ ನಮಗೆ ನಾವೇ ಹೆದರಿ ಬದುಕಬೇಕಾಗುತ್ತದೆ.

ವೇದ ಸುಳ್ಳಾದರೂ { ಬೆಕ್ಕಿಗೆ ಚೆಲ್ಲಾಟ
ಗಾದೆ ಸುಳ್ಳಾಗದು { ಇಲಿಗೆ ಪ್ರಾಣ ಸಂಕಟ

ನಿಮ್ಮ ಪತ್ರಗಳು

ಕಮಲ್‌ಹಾಸನ್‌ಗೆ ಇದೆಲ್ಲಾ ಬೇಕಿತ್ತಾ?

ಮಾನ್ಯರೆ,

ಬಹುಭಾಷಾ ನಟ, ಪ್ರಖ್ಯಾತ ಹಾಗೂ ಜನಪ್ರಿಯ ನಟರಲ್ಲಿ ಒಬ್ಬರು. ಎಲ್ಲಾ ಪಾತ್ರಗಳನ್ನು ಲೀಲಾಜಾಲವಾಗಿ ಮಾಡಬಲ್ಲ ನಟನ ಚತುರರು ಕಮಲ್‌ಹಾಸನ್. ಆದರೆ ಇದೀಗ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕಾರ್ಯಕ್ರಮವೊಂದರಲ್ಲಿ ಎಲುಬಿಲ್ಲದ ನಾಲಗೆಯೆಂದು ಹರಿಯಲುಬಿಟ್ಟು ಬಾಯಿಗೆ ಬಂದದ್ದು ಮಾತನಾಡಿ ಕನ್ನಡಿಗರ ಕೆಂಗಣ್ಣಿಗೆ ಗುರಿಯಾಗಿದ್ದಾರೆ. ಕನ್ನಡ ಭಾಷೆಯ ಇತಿಹಾಸ ಅರಿಯದೆ ಉದ್ಧಟತನದಿಂದ ಮಾತನಾಡಿರುವುದು ಅವರ ಅಹಂಗೇ ಹಿಡಿದ ಕೈಗನ್ನಡಿ ಎಂದೇ ಹೇಳಬಹುದು.

ಇದೀಗ ನಾಡಿನಾದ್ಯಂತ ಕಮಲ್‌ಹಾಸನ್ ವಿರುದ್ಧ ಮೂಲೆ ಮೂಲೆಯಿಂದಲು ಚಳುವಳಿ ಕಾವು ರಂಗೇರುತ್ತಿದೆ. ಮಾಡಿದ ತಪ್ಪಿಗೆ ಕ್ಷಮೆ ಕೇಳದೆ ನಾನು ನುಡಿದದರಲ್ಲಿ ಯಾವುದೇ ಲೋಪವಿಲ್ಲ ಎಂದು ತಿರುಗೇಟು ನೀಡಿರುವ ಕಮಲ್‌ಗೆ ಪಾಠ ಕಲಿಸಲೆಂದು ಕನ್ನಡಪರ ಸಂಘಟನೆಗಳು ಹೋರಾಟ ನಡೆಸುತ್ತಿವೆ.ಇದಕ್ಕೆ ರಾಜ್ಯದ ಗಣ್ಯರು. ಸಿನಿಮಾ ನಟ–ನಟಿಯರು,ರಾಜಕೀಯ ಗಣ್ಯರು ತಮ್ಮ ತಮ್ಮ ನಿಲುವನ್ನು ಅವರದೇ ಆದ ಧಾಟಿಯಲ್ಲಿ ವ್ಯಕ್ತಪಡಿಸಿದ್ದಾರೆ. ಯಾವುದೇ ಕಾರಣಕ್ಕೂ ತಾನು ಕ್ಷಮೆ ಕೇಳುವುದಿಲ್ಲಾ ಎಂದು ಪಟ್ಟು ಹಿಡಿರುವ ಕಮಲ್ ಅವರಿಗೆ ಯಾವ ಮಂಕು ಕವಿದಿದೆಯೋ ನಿಜಕ್ಕೂ ಆ ದೇವರೇ ಬಲ್ಲ. ಕನ್ನಡ ಪರ ಸಂಘಟನೆಗಳು ಎರಡು ದಿನಗಳ ಗಡುವನ್ನು ಈ ನಟರಿಗೆ ನೀಡಿದೆ. ಅದರ ಒಳಗಾಗಿ ಇವರು ಕನ್ನಡ ನಾಡಿನ ಜನತೆಗೆ ಕ್ಷಮೆ ಕೇಳದೇ ಇದ್ದಲ್ಲಿ ಮುಂದೆ ತೀವ್ರ ಪರಿಣಾಮವನ್ನು ಎದುರಿಸಲು ಇವರು ಸಿದ್ಧರಾಗಬೇಕಾಗುತ್ತದೆ. ಕನ್ನಡ ನಾಡಿನ ವಿಷಯಕ್ಕೆ ಬಂದರೇ ಯಾರನ್ನು ಬಿಡುವುದಿಲ್ಲ ಎನ್ನುವುದನ್ನು ಮತ್ತೊಮ್ಮೆ ಸಾಬೀತು ಮಾಡಲು ನಮ್ಮ ಕನ್ನಡ ನಾಡಿನ ಜನತೆ ಮುನ್ನುಗ್ಗಿದ್ದಾರೆ. ಇದೆಲ್ಲಾ ವಿಚಾರ ತಿಳಿದ ಬುದ್ಧಿಜೀವಿಗಳು ಹೇಳುತ್ತಿರುವುದೇ ಒಂದೇ ಮಾತು. ಅದುವೇ ಕಮಲ್‌ಹಾಸನ್‌ಗೆ ಇದೆಲ್ಲಾ ಬೇಕಿತ್ತಾ. ಎಲ್ಲಾ ಕನ್ನಡಾಭಿಮಾನಿಗಳು ಸಂಘಟನೆಯ ಪರ ಕೈ ಜೋಡಿಸೋಣಾ?!

–ಅನಿಲ್ ರಾಜ, ಸಹ ಶಿಕ್ಷಕರು, ಮೈಸೂರು

ಖಾಲಿ ಜಾಗದಲ್ಲಿ ಕಸ ತೆರವುಗೊಳಿಸಿ

ಮಾನ್ಯರೆ,

ಮೈಸೂರು ಸ್ವಚ್ಛ, ಸುಂದರ ನಗರ ಎನ್ನುವುದು ಸರಿ. ಆದರೆ ಮೈಸೂರಿನ ಕನಕಗಿರಿ ಇದಕ್ಕೆ ವಿರುದ್ಧವಾಗಿದೆ. ಇಲ್ಲಿ ಎಲ್ಲಿ ನೋಡಿದರೂ ಹಸುಗಳ ಹಾವಳಿ ಹಾಗೂ ಕೊಳಕು ತಿಪ್ಪೆ ಗುಂಡಿಯಿಂದ ಕೂಡಿದ್ದು, ಮಕ್ಕಳು, ವಯಸ್ಸಾದವರು ಓಡಾಡಲು ತುಂಬಾ ಕಷ್ಟಪಡುವಂತಾಗಿದೆ. ಇಲ್ಲಿರುವ ಖಾಲಿ ಜಾಗದಲ್ಲಿ ಹಸುಗಳ ತಿಪ್ಪೆಯಿಂದ ದುರ್ವಾಸನೆಯಿಂದ ವಾಸಿಸಲು ಸಾಧ್ಯವಾಗದ ಪರಿಸ್ಥಿತಿ ಹಾಗೂ ಸೊಳ್ಳೆಗಳ ಕಾಟ ಹೇಳತೀರದು. ಇಲ್ಲಿನ ನಿವಾಸಿಗಳು ಅನಾರೋಗ್ಯದ ಭಯದಲ್ಲಿ ವಾಸಿಸುವಂತಾಗಿದೆ. ಎಲ್ಲೋ ಡೆಂಗ್ಯೂ ಸೊಳ್ಳೆಗಳು ಇರದ ಪ್ರದೇಶದಲ್ಲಿ ಸ್ವಚ್ಛತೆ ಮಾಡುವ ಬದಲು ಇಲ್ಲಿ ಸ್ವಚ್ಛತೆ ಮಾಡಿ. ಇಲ್ಲಿ ಒಂದು ದಿನ ಅಲ್ಲ ಒಂದು ಕ್ಷಣ ಕೂಡ ಇರಲು ಸಾಧ್ಯವಿಲ್ಲ. ದಯಮಾಡಿ ಪಾಲಿಕೆ ಇದಕ್ಕೊಂದು ಪರಿಹಾರ ದೊರಕಿಸಿ ಕೊಡಬೇಕೆಂದು ತಮ್ಮಲ್ಲಿ ಮನವಿ.

–ಕನಕಗಿರಿ 12ನೇ ರಸ್ತೆಯ ನಿವಾಸಿಗಳು

ವಿಜ್ಞಾನಿ ವೈ.ಟಿ. ತಾತಾಚಾರಿ ಪ್ರಶಸ್ತಿ ಪಡೆದ ಪ್ರೊ ಕೆ.ಎಸ್.ರಂಗಪ್ಪ

ಮಾನ್ಯರೆ,

ಪ್ರೊ. ಕೆ.ಎಸ್.ರಂಗಪ್ಪ ಅವರ ಕನಸಿನ ಕೂಸು ಮುಕ್ತ ವಿವಿ ಹಾಗೂ ಮೈಸೂರು ವಿವಿಯ ಮಾನಸಗಂಗೋತ್ರಿ ಕ್ಯಾಂಪಸ್. ಇವುಗಳಿಗೆ ಹೊಸ ರೂಪ ಕೊಟ್ಟು ತಮ್ಮ ಇರುವಿಕೆಯನ್ನು ಎಂದೆಂದಿಗೂ ಜೀವಂತಗೊಳಿಸಿದ್ದಾರೆ ಎಂದರೆ ಅತಿಶಯೋಕ್ತಿಯಲ್ಲ. ಅವರ 70ನೇ ವರ್ಷದ ಹುಟ್ಟುಹಬ್ಬವನ್ನು ಅವಿಸ್ಮರಣೀಯವಾಗಿ ಉಳಿಯುವ ರೀತಿಯಲ್ಲಿ ಅಂತರರಾಷ್ಟ್ರೀಯ ಸಮ್ಮೇಳನ ಆಯೋಜಿಸಿ 'ಔಷಧಿ ಕ್ಷೇತ್ರದ ಹೊಸ ಸವಾಲುಗಳು ಹಾಗೂ ನಾವೀನ್ಯತೆ' ವಿಚಾರ ಸಂಕಿರಣವನ್ನು ಏರ್ಪಡಿಸಿದ್ದ ಅವರ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಹಿತೈಷಿಗಳು ಅಭಿನಂದನಾರ್ಹರು. ಇದೇ ವೇಳೆ ನಿವೃತ್ತ ಪ್ರಾಧ್ಯಾಪಕ ಪ್ರೊ ಶಿವರಾಜಪ್ಪ ಸಂಪಾದಕತ್ವದ ವಿಸ್ಮಯ ಜಗತ್ತಿನ ವಿಜ್ಞಾನಿ ಪ್ರೊ.ರಂಗಪ್ಪ ಅವರ ಕವನ ಸಂಕಲನಗಳ ಸಂಗ್ರಹ ಕೃತಿಯನ್ನು ಬಿಡುಗಡೆಗೊಳಿಸಿರುವುದು ಸ್ವಾಗತಾರ್ಹ. ಪ್ರೊ.ರಂಗಪ್ಪ ಅವರು ಶ್ರೇಷ್ಠ ಶಿಕ್ಷಕರು, ಶ್ರೇಷ್ಠ ಶಿಕ್ಷಣ ತಜ್ಞರು, ಶ್ರೇಷ್ಠ ಸಂಶೋಧಕರು ಮಾತ್ರವಲ್ಲದೆ ಅತ್ಯುತ್ತಮ ಆಡಳಿತಗಾರರು ಎಂದು ಪ್ರಶಂಸೆ ವ್ಯಕ್ತಪಡಿಸಿದ ಲೋಕಸಭಾ ಸಂಸದರಾದ ಡಾ.ಸಿ.ಎನ್.ಮಂಜುನಾಥ್ ಅವರ ನುಡಿ ಮೆಚ್ಚುವಂತದ್ದು. ಇದೇ ವೇಳೆ ವಿಜ್ಞಾನಿ ವೈ.ಟಿ. ತಾತಾಚಾರಿ ಪ್ರಶಸ್ತಿ ಪಡೆದ ಪ್ರೊ.ರಂಗಪ್ಪ ಅವರಿಗೆ ಅಭಿನಂದನೆಗಳು. **–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.**

ಮಾಧವನೇ ಬರೆದಿದ್ದು ಸಾಕಾಯಿತೇ?

ಮಾನ್ಯರೆ,

ಕವಿತೆಗಳ ಕೊಟ್ಟ ಕವನಮೂರ್ತಿಯೇ
ಹೇಳದೇ ಹೊರಟೆಯಲ್ಲ ವೆಂಕಣ್ಣ|
ನಿನ್ನ ಜ್ಞಾನವನ್ನು ನಂಬಿದ ಲೇಖನಿಗೆ
ಶಾಯಿ ತುಂಬಿ ಬರೆದೆ ಸಾವಿರ ಕವಿತೆಗಳ||

ಬೆಟ್ಟದಷ್ಟು ಪ್ರೀತಿ ಕೊಟ್ಟ ಕನ್ನಡಿಗರಿಗೆ
ಚೆಂದ.. ಚೆಂದ.. ಕವಿತೆ ಕೊಟ್ಟ ವೆಂಕಣ್ಣ|
ಅನ್ನ ಕೊಟ್ಟ ನಾಡಿನ ಭುವನೇಶ್ವರಿ ದೇವಿಗೆ
ಹೊನ್ನ ಕಿರೀಟ ಕೊಟ್ಟ ವೆಂಕಣ್ಣ||

ಹಾಲು ಕೊಟ್ಟ ಶಾರದಾ ಮಾತೆಗೆ
ಕವಿತೆಗಳ ಮಾಲೆ ಕೊಟ್ಟ ವೆಂಕಣ್ಣ|
ಕವಿಯಾಗಿ ಹುಟ್ಟಿದ ಮಣ್ಣಿನಲ್ಲಿಯೇ
ಜೀವ ಬಿಟ್ಟು ಕಾವ್ಯ ಕೊಟ್ಟ ವೆಂಕಣ್ಣ||

–ಮಿರ್ಲೆ ಚಂದ್ರಶೇಖರ

(ಹೆಚ್‌ಎಸ್‌ವಿ ಅವರ ಪ್ರೀತಿ ಕೊಟ್ಟ ರಾಧೆಗೆ...
ಮಾತು ಕೊಟ್ಟ ಮಾಧವ ಕವನದಿಂದ ಪ್ರೇರಿತ)

ನಾದಲಹರಿ



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ಶ್ರೀ ಕೃಷ್ಣನ ನೆನಪೇ ಮಧುರ



ಜಿ.ಪಿ.ರಾಜರತ್ನಂ ಅವರ ಹೆಸರನ್ನು ಕೇಳದ ಕನ್ನಡಿಗರು ಇದ್ದಾರೆಯೇ. ಒಬ್ಬ ಕವಿಯಾಗಿ, ಲೇಖಕರಾಗಿ, ಚಿಂತಕರಾಗಿ ಅವರು ಮಾಡಿರುವ ಸಾಹಿತ್ಯ ಸೇವೆಯು ಅನುಪಮವಾದುದು. ಮಕ್ಕಳ ಸಾಹಿತ್ಯಕ್ಕೆ ಅವರ ಕೊಡುಗೆಯನ್ನು ಮರೆಯುವಂತೆಯೇ ಇಲ್ಲ. ಬಣ್ಣದ ತಗಡಿನ ತುತ್ತೂರಿ, ನಾಯಿಮರಿ ನಾಯಿಮರಿ, ಒಂದು ಎರಡು ಬಾಳೆಲೆ ಹರಡು ಇವುಗಳನ್ನು ಕಲಿಯದೆ ಬೆಳೆದ ಕನ್ನಡದ ಕಂದಮ್ಮಗಳು ಇರಲು ಬಹುಶಃ ಸಾಧ್ಯವಿಲ್ಲ. ಮಕ್ಕಳ ಮನಸ್ಸನ್ನು ಅವರಂತೆ ಅರಿತವರು ಕೆಲವೇ ಮಂದಿ ಎನ್ನಬಹುದು. ಜೈನಧರ್ಮ, ಬೌದ್ಧ ಧರ್ಮ, ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳ ಬಗ್ಗೆ ಅವರಿಗೆ ಇದ್ದ ಆಳವಾದ ಜ್ಞಾನವು ಅವರ ಹಲವು ಪುಸ್ತಕಗಳಲ್ಲಿ, ಲೇಖನಗಳಲ್ಲಿ ಮೂಡಿ ಬಂದಿದೆ. ಅವರ ಕಂಚಿನ ಕಂಠದಲ್ಲಿ ಕವನಗಳನ್ನು ವಾಚಿಸುತ್ತಿದ್ದ ರೀತಿಯೇ ಆಕರ್ಷಕ.

ಅವರ ಶಿಶು ಗೀತೆಗಳಲ್ಲಿ ನನ್ನನ್ನು ಸದಾ ಕಾಡುವ ಕವನವೊಂದು ಇದೆ. ಅದೆಷ್ಟು ಬಾರಿ ಅದನ್ನು ಓದಿದರೂ ಅದೇ ಮೊದಲ ಬಾರಿಯೇನೋ ಎಂಬಂತೆ ಮುಖದಲ್ಲಿ ಮಂದಹಾಸ ಮೂಡುತ್ತದೆ. ಕವಿಯ ಚಾತುರ್ಯವನ್ನು ಹೊಗಳಬೇಕೋ, ಕಪಟ ನಾಟಕ ಸೂತ್ರಧಾರಿಯ ಶಿಶು ರೂಪದ ಮುಗ್ಧತೆಯ ಸೋಗನ್ನು ಆನಂದಿಸಬೇಕೋ ತಿಳಿಯುವುದಿಲ್ಲ. ತಾಯಿ–ಮಗುವಿನ ನಡುವಿನ ಸಂಭಾಷಣೆಯ ರೂಪದ ಹಾಡಿಗೆ ಯಾವ ವಿವರಣೆಯೂ ಬೇಕಿಲ್ಲ. ಆ ಕವನದೊಂದಿಗೆ, ನನ್ನ ಮನಸ್ಸನ್ನು ತಟ್ಟಿದ ಮತ್ತೊಂದು ಚಿಕ್ಕ ಕತೆ ನಿಮಗಾಗಿ.

ಕೃಷ್ಣ ಕಾಡಿದನು ಅಮ್ಮಾ ಅಮ್ಮಾ
ತಾಯಿ ಕೇಳಿದಳು ಏನು ಮಗು
ಅಣ್ಣ ಬಲನಿಗೆ ನೆನ್ನೆರಾತ್ರಿ ನೀ
ಏನ ಕೊಟ್ಟೆ ಅದ ಕೊಡು ನನಗೂ ।
ಅಣ್ಣ ಬಲನಿಗೆ ನೆನ್ನೆ ರಾತ್ರಿ ನಾ
ಏನ ಕೊಟ್ಟೆ ಕಣ್ಣ

ಕರೆದ ಹಾಲು ನೀ ಕೊಟ್ಟೆಯಂತೆ;
ನೊರೆ ಚಂದ್ರನಂಥ ಬಣ್ಣ ।
ಕರೆದ ಹಾಲೆ ! ಓ ನಿನಗೂ ಕೊಡುವೆ
ಹಸು ಮನೆಗೆ ಬರಲಿ ತಾಳು

ಮನೆಗೆ ಬಂದು ಹಸು ಮೇವು
ಮೆಲುಕುತಿವೆ ಗೊಲ್ಲ ಬಂದ ಕೇಳು।
ಗೊಲ್ಲ ಬಂದರೇನ್ ಎಲ್ಲ
ಗೋವುಗಳು ಮೇವು ಮುಗಿಸಲೇಳು
ಸಂಜೆಗಾಗಲೆ ಏನು ಹಾಲು ತಡೆ

ರಾತ್ರಿಯಾಗಲೇಳು।
ರಾತ್ರಿಯೆಂದರೇನಮ್ಮ ರಾತ್ರಿಯನು
ಗುರುತು ಹಿಡಿವುದೆಂತು
ರಾತ್ರಿ ಎಂದರದು ಕಾಳಕತ್ತಲೆ
ಕಣ್ಣೇ ಕಾಣದಂತು ।

ಕೃಷ್ಣನಾಗ ಕಣ್ ಮುಚ್ಚಿ ಬಿಗಿದಿದೊ
ಕತ್ತಲಾಯಿತಮ್ಮ !
ಕಣ್ಣೇ ಕಾಣದು, ಹಾಲು ಕರೆದು ತಾ
ರಾತ್ರಿಯಾಯಿತಮ್ಮ ?!

ಎಂದು ಕಾಡಲಾ ತಾಯಿ ಯಶೋಧಾ
ನಕ್ಕು ನಟಿಕೆ ಮುರಿದು
ಕರೆದು ತಂದಳು ಹೊನ್ನ ಬಟ್ಟಲಲಿ
ನೊರೆಯ ಹಾಲು ಸುರಿದು ।
ಕೃಷ್ಣ ಕುಡಿದನಾ ನೊರೆಯ
ಹಾಲನವನೆಳೆಯ ತುಟಿಯ
ಸುತ್ತ ಹೊಳೆದು ಹರಡಿದಾ
ನಗೆಗೆ ನೀಗಲಿ ನಮ್ಮ ನಿಮ್ಮ ಕುತ್ತ ।

ವೃಂದಾವನದ ತುಂಬ ತುಂಟ ಶ್ರೀ ಕೃಷ್ಣನ ಕತೆಗಳೇ. ಅವನ ಬಾಲಲೀಲೆಗಳಿಗೆ ಸಾಕ್ಷಿಯಾಗಿದ್ದೇ ಆ ಪುಣ್ಯಭೂಮಿ ವೃಂದಾವನ. ಒಮ್ಮೆ ಯಥಾ ಪ್ರಕಾರ ಬಾಲಕೃಷ್ಣನ ತುಂಟತನ ಹೆಚ್ಚಾಗಿ, ಸಿಟ್ಟಾದ ಯಶೋಧೆಯು ಅವನನ್ನು ಹಿಡಿಯಲೆಂದು ಬೆನ್ನಟ್ಟುತ್ತಾಳೆ. ಆ ಪೋರ ಅವಳ ಕೈಗೆ ಸಿಗುವನೇ ಬೀದಿ ಬೀದಿಗಳಲ್ಲಿ ಅವಳನ್ನು ಅಡ್ಡಾಡಿಸಿದ ಕೃಷ್ಣನ ಕಣ್ಣಿಗೆ ಒಬ್ಬ ಮೊಸರ ಗಡಿಗೆ ಮಾರುವವನ ಅಂಗಡಿ ಕಾಣಿಸುತ್ತದೆ. ಯಶೋಧೆಯಿಂದ ತಪ್ಪಿಸಿಕೊಳ್ಳಲು ಕೂಡಲೇ ಅದರೊಳಗೆ ನುಗ್ಗುತ್ತಾನೆ ಕೃಷ್ಣ. ಅಲ್ಲಾದರೋ ಮಣ್ಣಿನಿಂದ ಮಾಡಿದ ಚಿಕ್ಕ, ದೊಡ್ಡ, ಕುಳ್ಳಗಿನ, ಎತ್ತರದ ಹಲವಾರು ಗಡಿಗೆಗಳ ರಾಶಿ. ಅಲ್ಲೇ ಇದ್ದ ಆ ಗಡಿಗೆ ಮಾರುವವನನ್ನು ಕಂಡ ಕೃಷ್ಣ, ತನ್ನನ್ನು ಯಶೋಧೆಯಿಂದ ಪಾರು ಮಾಡಲು ಬೇಡಿಕೊಳ್ಳುತ್ತಾನೆ. ಬಾ ಬಾ ಮುದ್ದು ಕೃಷ್ಣ. ಅಲ್ಲಿದೆಯಲ್ಲ, ಆ ದೊಡ್ಡ ಗಡಿಗೆ ಅದರಲ್ಲಿ ಹೋಗಿ ಅವಿತುಕೊ. ಸ್ವಲ್ಪವೂ ಸದ್ದು ಮಾಡಬೇಡ ಎಂದ ಗಡಿಗೆ ಮಾರುವವ. ಕೂಡಲೇ ಕೃಷ್ಣ ಆ ದೊಡ್ಡ ಗಾತ್ರದ ಗಡಿಗೆಯ ಮೇಲೆ ಹತ್ತಿ, ಅದರೊಳಗೆ ಇಳಿದ. ಆ ಕ್ಷಣದಲ್ಲೇ ಏದುಸಿರು ಬಿಡುತ್ತಾ ಯಶೋಧೆ ಅಲ್ಲಿಗೆ ಬರುವುದಕ್ಕೂ, ಕೃಷ್ಣ ಒಳಗೆ ಅಡಗಿಕೊಳ್ಳುವುದಕ್ಕೂ ಸರಿಹೋಯಿತು.

ಬೆವರೊರೆಸಿಕೊಳ್ಳುತ್ತಾ ಯಶೋಧೆ ನನ್ನ ತುಂಟ ಕೃಷ್ಣನನ್ನು ನೋಡಿದೆಯಾ ಎಂದು ಗಡಿಗೆಯವನನ್ನು ಕೇಳಿದಳು. ಇಲ್ಲವಲ್ಲಾ. ಅವನು ಇಲ್ಲಿಗೆ ಬಂದಿಲ್ಲ ಎಂದು ಏನೂ ಅರಿಯದವನಂತೆ ಅವನು ಉತ್ತರಿಸಿದ. ಆದರೆ ಯಶೋಧೆಗೆ ಏನೋ ಅನುಮಾನ. ಅವಳು ಅಲ್ಲಿದ್ದ ಮಡಕೆಗಳ ಒಳಗೆ ಹುಡುಕತೊಡಗಿದಳು. ಕೂಡಲೇ ಆ ಗಡಿಗೆ ಮಾರುವವ ಪುಟ್ಟ ಕೃಷ್ಣನು ಅಡಗಿದ್ದ ಗಡಿಗೆಯ ಮೇಲೆ ಒಂದು ಮುಚ್ಚಳವನ್ನು ಮುಚ್ಚಿ, ಅದರ ಮೇಲೆ ಏರಿ ಕುಳಿತು, ಅವಳು ಮಾಡುವುದನ್ನೇ ನೋಡುತ್ತಲಿದ್ದ. ಸ್ವಲ್ಪ ಹೊತ್ತು ಹುಡುಕಾಡಿ ನಿರಾಶಳಾದ ಯಶೋಧೆ ಅಲ್ಲಿಂದ ಹೊರಟಳು. ಅವಳ ಕಾಲ ಗೆಜ್ಜೆಯ ಸಪ್ಪಳ ಕಡಿಮೆಯಾದೊಡನೆಯೇ ಗಡಿಗೆಯೊಳಗಿಂದ ಟಕ್ ಟಕ್ ಶಬ್ದ ಹೊರಟಿತು. ನನ್ನನ್ನು ಹೊರಗೆ ಬಿಡು, ಹೊರಗೆ ಬಿಡು. ಒಳಗೆ ಕತ್ತಲೆ ಎಂದ ಕೃಷ್ಣ. ಬಿಡುತ್ತೇನೆ ಬಿಡುತ್ತೇನೆ. ಮೊದಲು ನೀನು ನನಗೆ ಬೇಕಾದ ಒಂದು ಮಾತನ್ನು ನೀಡಿದರೆ ಮಾತ್ರ. ಅದು ನಿನ್ನ ಹೊರತು ಬೇರ್‍ಯಾರೂ ನೀಡಲಾಗದು ಎಂದ ಮಾರುವವ. ಆಯಿತು, ನೀನು ಬೇಡಿದುದನ್ನು ನೀಡುತ್ತೇನೆ. ಮೊದಲು ನನ್ನನ್ನು ಹೊರಗೆ ಬಿಡು ಎಂದ ಕೃಷ್ಣ. ಕೃಷ್ಣ, ನೀನು ಸಾಮಾನ್ಯ ಬಾಲಕ ಅಲ್ಲವೆಂಬುದು ನನಗೆ ತಿಳಿದಿದೆ. ನೀನು ಸಕಲ ಜಗತ್ತಿನ ಒಡೆಯ. ನನಗೆ ಮೋಕ್ಷವನ್ನು ದಯಪಾಲಿಸು ಅಂದ ಅವನು. ಕೃಷ್ಣ ಅದಕ್ಕೆ ಒಪ್ಪಲೇಬೇಕಾಗಿತ್ತು. ಆದರೆ ಆ ಮಾರುವವನ ಬೇಡಿಕೆ ಇನ್ನೂ ಮುಗಿದಿರಲಿಲ್ಲ. ನನಗಷ್ಟೇ ಅಲ್ಲ, ನಿನ್ನನ್ನು ಇಷ್ಟು ಹೊತ್ತು ಮುಚ್ಚಿ ಇರಿಸಿಕೊಂಡಿದ್ದ ಈ ಗಡಿಗೆಗೂ ಮೋಕ್ಷ ನೀಡಬೇಕು ಎಂದ. ಆಯಿತಪ್ಪ, ನನ್ನನ್ನು ಹೊರತೆಗೆ ಎಂದು ಕೃಷ್ಣ ಹೇಳಿದ ನಂತರ, ಅವನನ್ನು ಗಡಿಗೆಯಿಂದ ಹೊರಗೆ ಬಿಟ್ಟ ಆ ಮೊಸರ ಗಡಿಗೆ ಮಾರುವವ. ಕೊಟ್ಟ ಮಾತಿನಂತೆ ನಡೆದ ಶ್ರೀ ಕೃಷ್ಣ. ಮೊಸರು ಮಾರುವವನಿಗೂ ಬಾಲ ಕೃಷ್ಣನನ್ನು ತನ್ನೊಳಗೆ ಮುಚ್ಚಿಟ್ಟುಕೊಂಡಿದ್ದ ಆ ಮಡಕೆಗೂ ಇಬ್ಬರಿಗೂ ಮೋಕ್ಷ ಲಭಿಸಿತು.

ಪ್ರತೀಕಾರಕ್ಕೆ ಮಾನವತೆಯೇ ಮದ್ದು!



ಪಾ.ಶ್ರೀ. ಅನಂತರಾಮು,
ಪತ್ರಕರ್ತ, ಅಂಕಣಕಾರ

ವಿಶೇಷ ಲೇಖನ

ಕರ್ನಾಟಕ ರಾಜ್ಯ ಸರ್ವ ಜನಾಂಗದ ಶಾಂತಿಯ ತೋಟ. ಇಲ್ಲಿ ಎಲ್ಲಾ ಜಾತಿ, ಧರ್ಮದ ಜನರಿಗೆ ಬದುಕಲು ಹಕ್ಕಿದೆ. ತಮ್ಮ ತಮ್ಮ ದೇವರನ್ನು ಆರಾಧಿಸಲು, ಮನುಕುಲದ ಉದ್ಧಾರಕ್ಕಾಗಿ ಸ್ಥಾಪನೆಗೊಂಡಿರುವ ಧರ್ಮಗಳ ಆದರ್ಶಗಳನ್ನು ಪಾಲಿಸಲು ಹಾಗೂ ಆಚಾರ–ವಿಚಾರಗಳನ್ನು ಅನ್ಯರಿಗೆ ನೋವಾಗದಂತೆ ಅನುಷ್ಠಾನಕ್ಕೆ ತರಲು ಅವಕಾಶ ಇದೆ.

ಆದರೆ. ಕೆಲವರು ತಮ್ಮ ಸ್ವಾರ್ಥಕ್ಕೆ, ರಾಜಕೀಯ ಲಾಭಕ್ಕೆ, ಸ್ವಪ್ರತಿಷ್ಠೆಗಾಗಿ, ಬೇರೆಯವರ ಪ್ರಚೋದನೆಯಿಂದಾಗಿ ಮತ್ತು ಸಮಸ್ಯೆಗಳನ್ನು ಜೀವಂತವಾಗಿಟ್ಟು ಲಾಭ ಪಡೆಯಲು ಷಡ್ಯಂತ್ರ ನಡೆಸುತ್ತಿರುವುದರಿಂದ ಶಾಂತಿಯ ತೋಟವಾಗಬೇಕಾದ ಕನ್ನಡ ನಾಡು ಪ್ರತೀಕಾರದ ಬೀಡಾಗುತ್ತಿದೆ.

ದ್ವೇಷ, ಅಸೂಯೆ, ಹಿಂಸಾಚಾರ ಮೂಲಕ ನರಮೇಧಕ್ಕೆ ಸಮಯ ವ್ಯರ್ಥ ಮಾಡುತ್ತಿರುವುದು ಶೋಚನೀಯ ಸಂಗತಿ. ಇದರಿಂದ ನಮ್ಮ ಮುಂದಿನ ಪೀಳಿಗೆಗೆ ಅನ್ಯಾಯವಾಗುತ್ತದೆ, ನಮ್ಮನ್ನು ನಂಬಿರುವ ಜನರನ್ನು ಅನಾಥರನ್ನಾಗಿ ಮಾಡಲಾಗುತ್ತಿದೆ.

ಜೊತೆಗೆ ರಾಜ್ಯದ ಮಾನ ಮರ್ಯಾದೆ ಹರಾಜಾಗುತ್ತಿದೆ, ಅಭಿವೃದ್ಧಿಗೆ ಹಿನ್ನಡೆ ಆಗುತ್ತಿದೆ, ಸಮಯ ಸಾಧಕರು, ಹಿಡನ್ ಅಜೆಂಡಾ ಮೂಲಕ ತಮ್ಮ ಬೇಳೆ ಬೇಯಿಸಿಕೊಳ್ಳಲು ಯತ್ನಿಸುತ್ತಿರುವವರು ಮೇಲುಗೈ ಸಾಧಿಸುತ್ತಿರುವುದರಿಂದ ಮುಂದೊಂದು ದಿನ ನಮ್ಮ ರಾಜ್ಯ ಅಧೋಗತಿಗೆ ತಲುಪುತ್ತದೆ. ಈ ಒಂದು ಕನಿಷ್ಠ ಪ್ರಜ್ಞೆ ಇಲ್ಲದಿದ್ದರೆ ಯಾವ ಧರ್ಮ, ಯಾವ ಜಾತಿ, ಯಾವ ರಾಜಕಾರಣಿ, ಯಾವುದೇ ಸರ್ಕಾರ, ಯಾವುದೇ ಮಠ, ಮಸೀದಿ, ಚರ್ಚ್ ಹಾಗೂ ಸ್ವಯಂ ಘೋಷಿತ ಕಪಟ ಜನರಿಂದ ರಾಜ್ಯವನ್ನು ರಕ್ಷಣೆ ಮಾಡಲು ಸಾಧ್ಯವಾಗುವುದಿಲ್ಲ.

ದುಷ್ಟರ ಸಂಹಾರವಾಗಬೇಕು: ಕೆಲವು ವರುಷಗಳಿಂದ ರಾಜ್ಯದ ವಿಶೇಷವಾಗಿ ಮಂಗಳೂರು, ಉಳ್ಳಾಲ ಸೇರಿದಂತೆ ಕರಾವಳಿ ಭಾಗದ ಹಲವು ಕಡೆ ಕ್ರಿಮಿನಲ್ ಚಟುವಟಿಕೆ ಹೆಚ್ಚಾಗುತ್ತದೆ. ಇದು ನಾಗರಿಕ ಸಮಾಜ ತಲೆ ತಗ್ಗಿಸುವ ಹಾಗೂ ಆತಂಕಕಾರಿ ಬೆಳವಣಿಗೆಯಾಗಿದೆ. ಕರ್ನಾಟಕ ರಾಜ್ಯ ಶಾಂತವಾಗಿ ಇರಬೇಕಾದರೆ, ಸೌಹಾರ್ದತೆ ಬಲಗೊಳಿಸಲು ಮತ್ತು ಸಮಾಜಘಾತುಕ ಶಕ್ತಿಗಳಿಂದ ರಾಜ್ಯವನ್ನು ಕಾಪಾಡಲು ಎಲ್ಲಾ ಧರ್ಮದ ಮಠಾಧೀಶರು, ಪಾದ್ರಿಗಳು, ಮೌಲ್ವಿಗಳು, ಮನು ಕುಲದ ಹಿತ ಬಯಸುವ ರಾಜಕಾರಣಿಗಳು, ವಿವಿಧ ಸಂಘಟನೆಗಳ ಮುಖಂಡರು ಒಂದಾಗಿ ದುಷ್ಟರ ಹಾವಳಿಗೆ ಅಂತ್ಯ ಹಾಡಲು ಬದ್ಧತೆ ತೋರಬೇಕಿದೆ.

ಮನ ಪರಿವರ್ತನೆಗಾಗಿ ಅರಿವು ಮೂಡಿಸಬೇಕು: ರಾಜ್ಯದಲ್ಲಿ ಈ ಹಿಂದೆ ಸಣ್ಣ, ಪುಟ್ಟ ಕೋಮು ಗಲಭೆ, ಕೊಲೆ, ಜಾತಿ ಸಂಘರ್ಷ, ಮಹಿಳೆಯರ ಮೇಲೆ ದೌರ್ಜನ್ಯ ನಡೆದರೂ ತಕ್ಷಣ ಎಲ್ಲಾ ಧರ್ಮದ ಮುಖಂಡರು, ಸಂಸ್ಕಾರವಂತ ರಾಜಕೀಯ ಮುತ್ಸದ್ದಿಗಳು ಶಾಂತಿ ಸಭೆ, ಪಾದಯಾತ್ರೆ ನಡೆಸಿ ಉದ್ವಿಗ್ನ ವಾತಾವರಣವನ್ನು ಶಮನಗೊಳಿಸುತ್ತಿದ್ದರು. ಆದರೆ ಈಗ ಯಾವುದೇ ಘಟನೆ ನಡೆದರೂ ಅದಕ್ಕೆ ರಾಜಕೀಯ, ಕೋಮು ಹಾಗೂ ಇನ್ನಿತರ ಬಣ್ಣ ಹಚ್ಚಿ ರಾಜ್ಯದ ನೆಮ್ಮದಿ ಹಾಳು ಮಾಡಲಾಗುತ್ತಿದೆ.

> “ ರಾಜಕೀಯ ಹಿತಾಸಕ್ತಿ, ಮತೀಯವಾದ, ಪ್ರಚೋದನೆ, ಹಿಂಸಾಚಾರ, ಕೊಲೆಗಳಿಂದ ಕನ್ನಡ ನಾಡಿನ ಭವಿಷ್ಯಕ್ಕೆ ಕಂಟಕವೇ ಹೊರತು ಬೇರೆ ಪ್ರಯೋಜನವಿಲ್ಲ. ಕರ್ನಾಟಕ ರಾಜ್ಯ ಸರ್ವ ಜನಾಂಗದ ಶಾಂತಿಯ ತೋಟವಾಗಿಸಲು ಕೇವಲ ಸರ್ಕಾರದಿಂದ ಸಾಧ್ಯವಿಲ್ಲ, ಮಠಾಧೀಶರು, ವಿವಿಧ ಸಂಘಟನೆಗಳು ಹಾಗೂ ಸರ್ವ ಜನಾಂಗದ ಮುಖಂಡರು, ಯುವಕರು, ವಿದ್ಯಾರ್ಥಿಗಳು, ರಾಜಕಾರಣಿಗಳು, ನಾಡಿನ ಹಿತ ಬಯಸುವ ಸಾಹಿತಿ, ಕಲಾವಿದರು, ಶಿಕ್ಷಣ ತಜ್ಞರು, ಕೋಮು ಸಾಮರಸ್ಯ ಮತ್ತು ಶಾಂತಿ ಮಂತ್ರದ ಬಗ್ಗೆ ಅರಿವು ಮೂಡಿಸುವುದು ಈಗ ಅತ್ಯವಶ್ಯಕ.



ಈ ವಿಲಕ್ಷಣ ಘಟನೆಗಳು ನಿಲ್ಲಬೇಕಾದರೆ ಸರ್ಕಾರ ಒಂದರಿಂದಲೇ ಸಾಧ್ಯವಿಲ್ಲ. ತಂದೆ, ತಾಯಿ, ಒಡಹುಟ್ಟಿದವರು, ಬಂಧುಗಳು, ಸ್ನೇಹಿತರು, ಮಠಾಧೀಶರು, ವಿದ್ಯಾರ್ಥಿಗಳು, ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಎಲ್ಲಾ ವರ್ಗದ ಜನರು ಹಿಂಜರಿಕೆ ಬದಿಗಿಟ್ಟು ತಮ್ಮ ತಮ್ಮ ಮನೆಗಳಲ್ಲಿ, ಗಲ್ಲಿಗಳಲ್ಲಿ, ಮಂದಿರ, ಮಸೀದಿ, ಚರ್ಚುಗಳಲ್ಲಿ, ಶಾಲಾ, ಕಾಲೇಜುಗಳಲ್ಲಿ, ಸಮುದಾಯ ಭವನ ಹಾಗೂ ಅರಳಿಮರದ ಕಟ್ಟೆಗಳ ಮೇಲೆ ಸಭೆ ಮಾಡಿ ಶಾಂತಿ, ಸೌಹಾರ್ದತೆ ಬಗ್ಗೆ ಅರಿವು ಮೂಡಿಸಲು ಹಾಗೂ ಮನಪರಿವರ್ತನೆಗಾಗಿ ತಜ್ಞರಿಂದ ಆಯಾ ಭಾಗದ ಯುವಕರು, ರೌಡಿಶೀಟರ್‌ಗಳಿಗೆ ಹಾಗೂ ತರ್ಲೆ ಮಾಡಿ ಸಮಾಜದ ನೆಮ್ಮದಿ ಹಾಳು ಮಾಡುವವರಿಗೆ ಕೌನ್ಸೆಲಿಂಗ್ ನಡೆಸುವ ಮೂಲಕ ದ್ವೇಷ, ಮತ್ಸರ, ರಕ್ತಪಾತ ನಿಯಂತ್ರಣ ಮಾಡಬಹುದಾಗಿದೆ. ಈ ಸಂಬಂಧ ಸರ್ಕಾರ ಮಾನವತಾ ವಾದದ ಆಧಾರದ ಮೇಲೆ ಸಮಾಜ ಸೇವೆ ಮಾಡುತ್ತಿರುವ ಸಂಘ ಸಂಸ್ಥೆಗಳನ್ನು ಗುರುತಿಸಿ ಅರಿವು ಮೂಡಿಸಲು ಅವಕಾಶ ನೀಡಿದಲ್ಲಿ ಕಾಲ ಕ್ರಮೇಣ ಪರಿಸ್ಥಿತಿ ತಿಳಿಗೊಳಿಸಬಹುದಾಗಿದೆ.

ಪ್ರತೀಕಾರ ಸಾಕು, ನಾಡಿನ ಋಣ ತೀರಿಸಿ: ಇಷ್ಟು ದಿನ ನಡೆದ ಹಿಂಸಾಚಾರ, ಪ್ರತೀಕಾರದ ಕೊಲೆ, ರಾಗ–ದ್ವೇಷದಿಂದ ಸಾಧನೆ ಮಾಡಿರುವುದು ಏನು? ಕೊಲೆ ಪ್ರಕರಣದಿಂದ ಗಳಿಸಿದ್ದು ಪುಡಿಗಾಸು ಅಷ್ಟೇ. ಒಮ್ಮೆ ಜೈಲಿಗೆ ಹೋದರೆ ಮತ್ತೆ ಅಲ್ಲಿಂದ ಹೊರಗೆ ಬರಲು ಅಪ್ಪ–ಅಮ್ಮ ಕಷ್ಟಪಟ್ಟು ಸಂಪಾದಿಸಿದ ಹಣ, ಆಸ್ತಿ ಮಾರಾಟ ಮಾಡಬೇಕು. ಮುಂದಿನ ಜೀವನದ ಬಗ್ಗೆ ಆಲೋಚಿಸಿ, ನಿಮ್ಮನ್ನು ನಂಬಿದ ಕುಟುಂಬಸ್ಥರು ಹಾಗೂ ಪರಿವಾರದ ಸಂಕಟವನ್ನು ಅರ್ಥ ಮಾಡಿಕೊಳ್ಳದಿದ್ದರೆ ಬದುಕು ಬರ್ಬಾದ್ ಆಗುತ್ತದೆ. ಪ್ರತೀಕಾರ ಎಂದು ಹೇಳಿಕೊಂಡು ದಿನಕ್ಕೆ ಒಬ್ಬರನ್ನೊಬ್ಬರು ಸಾಯಿಸುತ್ತ ಹೋದರೆ ಅಂತ್ಯ ಯಾವಾಗ. ನಿಮ್ಮನ್ನು ಕ್ರಿಮಿನಲ್ ಪ್ರಕರಣಕ್ಕೆ ಬಳಸಿಕೊಂಡು ನಂತರ ನಿಮ್ಮನ್ನು ಯೂಸ್ ಅಂಡ್ ಥ್ರೋ ಮಾಡುವ ಜನರಿಗಾಗಿ ನಿಮ್ಮ ಉಜ್ವಲ ಭವಿಷ್ಯ ಹಾಳು ಮಾಡಿಕೊಳ್ಳುವ ಬದಲು ಈಗಾಗಲೇ ಮಾಡಿರುವ ತಪ್ಪುಗಳ ಬಗ್ಗೆ ನೀವೇ ಆತ್ಮಾವಲೋಕನ ಮಾಡಿ ಹೆತ್ತವರ ಮತ್ತು ನಾಡಿನ ಋಣ ತೀರಿಸಲು ಪ್ರಯತ್ನ ಮಾಡಿ, ಒಳ್ಳೆಯ ಪುಸ್ತಕಗಳನ್ನು ಓದಿ ಜ್ಞಾನ ಸಂಪಾದಿಸಿ, ಮನಃ ಶಾಂತಿಗಾಗಿ ಆಧ್ಯಾತ್ಮಿಕ ಸಭೆಗಳಲ್ಲಿ ಭಾಗವಹಿಸಿ ಮನುಷ್ಯತ್ವದ ಕಡೆ ಗಮನ ಹರಿಸಿದಾಗ ನಕಾರಾತ್ಮಕ ವಿಷಯಗಳಿಂದ ಮುಕ್ತಿ ಹೊಂದಿ ಒಳ್ಳೆಯ ಮನುಷ್ಯರಾಗಿ ರೂಪುಗೊಳ್ಳಲು ಅವಕಾಶವಿದೆ. ಇತ್ತೀಚಿನ ದಿನಗಳಲ್ಲಿ ಕೆಲವು ಜನರು ವಾಟ್ಸಾಪ್ ಯೂನಿವರ್ಸಿಟಿಯಲ್ಲಿ ತರಬೇತಿ ಪಡೆದು ಅರಿವು ಮೂಡಿಸುವ ನೆಪದಲ್ಲಿ ಪ್ರಚೋದನಕಾರಿ ಸಂದೇಶಗಳನ್ನು ಶೇರ್ ಮಾಡಿ ಅದರಿಂದ ವಿಕೃತ ಆನಂದ ಗಳಿಸಲು ಹಾಗೂ ಶುದ್ಧವಾದ ಮನಸುಗಳನ್ನು ಕಲುಷಿತ ಮಾಡಿ ಒಬ್ಬರಿಗೊಬ್ಬರು ಕಿತ್ತಾಡುವಂತೆ ಷಡ್ಯಂತ್ರ ನಡೆಯುತ್ತಿದೆ. ನಾಗರಿಕ ಸಮಾಜ ಇದರ ವಿರುದ್ಧ ಸಂಘಟಿತ ಹೋರಾಟ ಮಾಡಬೇಕಾಗುತ್ತದೆ.

ಪ್ರಜ್ಞಾವಂತರ ಆಶಯ: ನಾಡಿನಲ್ಲಿ ಈಗ ಮಳೆಯ ಅವಾಂತರ ಹೆಚ್ಚಾಗಿದೆ, ಅಮಾಯಕರು ಗುಡ್ಡ ಕುಸಿತ, ಕಳಪೆ ರಸ್ತೆಗಳಿಂದ ಅಪಘಾತದಲ್ಲಿ ಸಾಯುತ್ತಿದ್ದಾರೆ. ರೈತರು ಕಂಗಾಲು ಆಗಿದ್ದಾರೆ, ಬಡ ಕೃಷಿ ಕೂಲಿ ಕಾರ್ಮಿಕರಿಗೆ ದುಡಿಮೆ ಇಲ್ಲದಂತಾಗಿದೆ. ರೋಗ ರುಜಿನದಿಂದ ಜನ ನರಳುತ್ತಿದ್ದಾರೆ. ಹಿರಿಯ ನಾಗರಿಕರು ಅನ್ಯಾಯವಾಗಿ ಸಾಯುತ್ತಿದ್ದಾರೆ. ಪೌಷ್ಟಿಕ ಆಹಾರದ ಕೊರತೆಯಿಂದ ಮಕ್ಕಳು, ತಾಯಂದಿರು ಬಲಿಯಾಗುತ್ತಿದ್ದಾರೆ. ಮತ್ತೊಂದು ಕಡೆ ಉಗ್ರರ ಹಾವಳಿ, ಯುದ್ಧದ ಭೀತಿ. ನಮ್ಮಿಂದ ಆಯ್ಕೆಯಾಗಿ ಉದ್ಧಟತನದಿಂದ ವರ್ತಿಸುವ ಜನರ ಅಟ್ಟಹಾಸದ ಬಗ್ಗೆ ಚಿಂತನೆ ಮಾಡಿ. ಉತ್ತಮ ಸಮಾಜ ನಿರ್ಮಾಣದ ಕಡೆ ಗಮನಹರಿಸಿ, ಈ ಮೂಲಕ ದೇಶಕ್ಕೆ, ವಿಶ್ವಕ್ಕೆ ಮಾದರಿ ಆಗಲು ಪಣ ತೊಡಬೇಕೆಂಬುದು ಪ್ರಜ್ಞಾವಂತರ ಆಶಯ.

ಮೈಸೂರು ಪ್ರಧಾನ ಅಂಚೆ ಕಚೇರಿಯಲ್ಲಿ ನಾಳೆ, ನಾಡಿದ್ದು ವಹಿವಾಟು ಇಲ್ಲ

ಮೈಸೂರು: ಐಟಿ 2.0 ಅಡಿಯಲ್ಲಿ ಹೊಸ ತಂತ್ರಾಂಶವನ್ನು ಅಳವಡಿಸುತ್ತಿರುವ ಹಿನ್ನೆಲೆಯಲ್ಲಿ ಮೈಸೂರು ಪ್ರಧಾನ ಅಂಚೆ ಕಚೇರಿ ಮತ್ತು ಅದರ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪ ಅಂಚೆ ಕಚೇರಿಗಳಲ್ಲಿ ಜೂನ್ 2 ಮತ್ತು 3ರಂದು ಯಾವುದೇ ರೀತಿಯ ವಹಿವಾಟು ಇರುವುದಿಲ್ಲ ಎಂದು ಮೈಸೂರು ಅಂಚೆ ವಿಭಾಗದ ಹಿರಿಯ ಅಂಚೆ ಅಧೀಕ್ಷಕ ಜಿ.ಹರೀಶ್ ತಿಳಿಸಿದ್ದಾರೆ. ಬನ್ನಿಮಂಟಪ, ಚಾಮುಂಡಿ ಎಕ್ಸ್‌ಟೆನ್ಷನ್, ಜೆ.ಎಸ್ ಆಶ್ರಮ, ಹೆಬ್ಬಾಳ್ ಲೇಔಟ್, ಜಯಲಕ್ಷ್ಮಿಪುರಂ, ಕೃಷ್ಣಮೂರ್ತಿಪುರಂ, ಮಾನಸಗಂಗೋತ್ರಿ, ಮಂಡಿಮೊಹಲ್ಲಾ, ಮೇಟಗಳ್ಳಿ, ಮೈಸೂರು ಫೋರ್ಟ್, ಮೈಸೂರು ಯುನಿವರ್ಸಿಟಿ, ನರಸಿಂಹರಾಜ ಮೊಹಲ್ಲಾ, ನೋಟ್ ಮುದ್ರಾ ನಗರ, ಪಿಟಿಸಿ ಕ್ಯಾಂಪಸ್, ಶಕ್ತಿನಗರ, ಶಿವರಾತ್ರೀಶ್ವರನಗರ, ಸಿದ್ಧಾರ್ಥನಗರ, ವಿಜಯನಗರ 2 ಮತ್ತು 3ನೇ ಹಂತ, ಯಾದವಗಿರಿ, ಬಿಎನ್‌ಪಿಎಲ್ ಮತ್ತು ಬಿಪಿಸಿ ಅಂಚೆ ಕಚೇರಿಗಳು ಮೇಲ್ಕಂಡ 2 ದಿನಗಳ ಕಾಲ ವಹಿವಾಟು ನಡೆಸುವುದಿಲ್ಲ. ಸರಸ್ವತಿಪುರಂ ಪ್ರಧಾನ ಅಂಚೆ ಕಚೇರಿ ಮತ್ತು ಅದರ ಅಡಿಯಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ಕಚೇರಿಗಳು ಎಂದಿನಂತೆ ಕಾರ್ಯನಿರ್ವಹಿಸುತ್ತವೆ. ಗ್ರಾಹಕರು ಸಹಕರಿಸಬೇಕೆಂದು ಅವರು ಮನವಿ ಮಾಡಿದ್ದಾರೆ.



ಇಂಡಿಯನ್ ಟಿವಿ ಮಾಲೀಕರೂ ಆದ ಕೆ.ಜಿ.ಕೊಪ್ಪಲಿನ ಯುವ ಮುಖಂಡ ಬಸವರಾಜ್ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಲಾಯಿತು. ಈ ವೇಳೆ ಮಾರಮ್ಮನ ಗುಡ್ಡಪ್ಪ ಲಿಂಗಪ್ಪ, ವಿಕ್ರಾಂತ್ ಪಿ.ದೇವೇಗೌಡ, ಗರಡಿ ಕಾರ್ಯದರ್ಶಿ ಎಲ್.ಚಂದ್ರು, ಗದ್ದೆಯನ್ ರಂಗಪ್ಪ, ಕಾಳಬೋರಪ್ಪ, ಕಾರ್ಪೊರೇಷನ್ ಶಂಭು, ಅರವಿಂದ್‌ನಗರ ರಾಜಣ್ಣ, ಗಂಡೇದಪ್ಪನ ನಾರಾಯಣ, ಶಿವಕುಮಾರ್, ಮರ್ಚಿ ಮಾದೇವ, ಶ್ರೀನಿವಾಸ್, ಶೇಖರ್, ಆನಂದ್ ಇನ್ನಿತರರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No.114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಸಮಾಜಸೇವಾಸಕ್ತ ಮೈಸೂರು ಬಸವಮಾರ್ಗ ಸಂಸ್ಥೆ ಸಂಸ್ಥಾಪಕ ಬಸವರಾಜು ಹುಟ್ಟುಹಬ್ಬ ಆಚರಣೆ




ಬಸವಮಾರ್ಗ ಸಂಸ್ಥೆಯ ಸಂಸ್ಥಾಪಕ ಬಸವರಾಜು ಅವರನ್ನು ಜನ್ಮದಿನದ ಅಂಗವಾಗಿ ಅವರ ಅಭಿಮಾನಿಗಳು ಬೆಳ್ಳಿಗದೆ ನೀಡಿ ಆತ್ಮೀಯವಾಗಿ ಅಭಿನಂದಿಸಿದರು. ಮತ್ತೊಂದು ಚಿತ್ರದಲ್ಲಿ ಶಾಸಕ ಕೆ.ಹರೀಶ್ ಗೌಡ ಅವರು ಬಸವಮಾರ್ಗ ಸಂಸ್ಥೆ ಸಂಸ್ಥಾಪಕ ಬಸವರಾಜು ಅವರನ್ನು ಅಭಿನಂದಿಸಿದರು.

ಮೈಸೂರು, ಮೇ 31– ಮೈಸೂರಿನ ಬಸವ ಮಾರ್ಗ ಸಂಸ್ಥೆ ಸಂಸ್ಥಾಪಕರು ಹಾಗೂ ಇಂಡಿಯನ್ ಟಿವಿ ಮಾಲೀಕರಾದ ಎಸ್.ಬಸವರಾಜು ಅವರ ಹುಟ್ಟುಹಬ್ಬವನ್ನು ಶನಿವಾರ ವಿವಿಧ ಕಾರ್ಯಕ್ರಮಗಳೊಂದಿಗೆ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಅನೇಕ ದೇವಸ್ಥಾನಗಳಲ್ಲಿ ವಿಶೇಷ ಪೂಜೆ, ಅನ್ನದಾನ ಜೊತೆಗೆ ಸಂಸ್ಥೆಯ ಆವರಣದಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿತ್ತು. ಬಸವರಾಜು ಅವರ ನೂರಾರು ಅಭಿಮಾನಿಗಳು ಹಾಗೂ ಸಾರ್ವಜನಿಕರು ರಕ್ತದಾನ ಮಾಡಿದರು. ಸಾವಿರಾರು ಅಭಿಮಾನಿಗಳು, ಹಿತೈಷಿಗಳು ಹಾಗೂ ಸ್ನೇಹಿತರು ಬಸವರಾಜು ಅವರಿಗೆ ಶುಭ ಕೋರಿದರು. ಈ ವೇಳೆ ಮಾತನಾಡಿದ ಬಸವರಾಜು ಅವರು, ವ್ಯಸನಮುಕ್ತ ಸಮಾಜ ನಿರ್ಮಾಣ ನನ್ನ ದೊಡ್ಡ ಕನಸಾಗಿದೆ. ಇದನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಲಾಗುತ್ತಿದೆ. ನನ್ನ ಜನ್ಮದಿನದ ಅಂಗವಾಗಿ ಕುಡಿತ ಬಿಡಿಸುವ 50ನೇ ಉಚಿತ ಶಿಬಿರವನ್ನು ಜೂ.1 ರಿಂದ ಜೂ.10ರವರೆಗೆ ಹಮ್ಮಿಕೊಳ್ಳಲಾಗಿದ್ದು, ರಾಜ್ಯದ ವಿವಿಧೆಡೆಯ ನೂರಾರು ವ್ಯಸನಿಗಳು ಈಗಾಗಲೇ ದಾಖಲಾತಿ ಪಡೆದಿದ್ದಾರೆ ಎಂದು ತಿಳಿಸಿದರು.

ಇದು ವಿಶೇಷ ಶಿಬಿರವಾಗಿದ್ದು, ನಿತ್ಯವೂ ವಿಭಿನ್ನ ಕಾರ್ಯಕ್ರಮ, ವ್ಯಸನಮುಕ್ತ ಸಂಬಂಧ ತರಗತಿ, ವಿಶೇಷ ಯೋಗ ತರಗತಿ, ಆಪ್ತ ಸಮಾಲೋಚನೆ, ಜಿಮ್, ಸಂಗೀತ ಕಾರ್ಯಕ್ರಮ, ವ್ಯಕ್ತಿತ್ವ ವಿಕಸನ ತರಗತಿಗಳು ಸೇರಿದಂತೆ ನಾನಾ ಕಾರ್ಯಕ್ರಮಗಳನ್ನು ನಡೆಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಬಸವಣ್ಣ ಅವರು ಸಮಾಜ ಸೇವೆಗೆ ತಮ್ಮನ್ನು ತಾವು ಅರ್ಪಣೆ ಮಾಡಿ ಕೊಂಡಿದ್ದಾರೆ. ವ್ಯಸನ ಮುಕ್ತ ಕೇಂದ್ರವನ್ನು ಮುನ್ನಡೆಸುವುದು ಅಷ್ಟು ಸುಲಭದ ಮಾತಲ್ಲ. ಆದರೆ ಬಸವಣ್ಣ ಅವರು ನಾಲ್ಕು ಶಾಖೆಗಳನ್ನು ಆರಂಭಿಸಿ, ಸಮರ್ಪಕವಾಗಿ ನಿರ್ವಹಿಸುವಲ್ಲಿ ಯಶಸ್ವಿಯಾಗಿದ್ದಾರೆ. ಅವರ ಸಮಾಜಮುಖಿ ಕೆಲಸಗಳಿಗೆ ನಮ್ಮ ಬೆಂಬಲ ಯಾವಾಗಲೂ ಇದೆ. ದೇವರು ಅವರಿಗೆ ಆಯಸ್ಸು–ಆರೋಗ್ಯ ನೀಡಿ, ಇನ್ನೂ ಹೆಚ್ಚಿನ ಸೇವೆಗೆ ಶಕ್ತಿ ನೀಡಲಿ ಎಂದು ಆಶಿಸಿದರು.

ಈ ವೇಳೆ ಬಸವರಾಜು ಅವರ ಸಹೋದರರಾದ ಉದ್ಯಮಿ ಎಸ್. ವೆಂಕಟೇಶ್, ರಾಜು, ಪ್ರಕಾಶ್, ಕೃಷ್ಣ, ಸಂಸ್ಥೆಯ ವ್ಯವಸ್ಥಾಪಕ ಮಹೇಶ್, ರಾಕೇಶ್, ರಾಘವೇಂದ್ರ, ಮಧು, ಬಾಲಸುಬ್ರಹ್ಮಣ್ಯಂ, ವಸಂತ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ 46
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಟಿ ಎಸ್ ಸುಬ್ಬಣ್ಣ ಸಾರ್ವಜನಿಕ ವಿದ್ಯಾಸಂಸ್ಥೆ(ರಿ.),

ವಿದ್ಯಾರಣ್ಯಪುರಂ, ಮೈಸೂರು–08

ಈ ವಿದ್ಯಾಸಂಸ್ಥೆಯ ಮೈಸೂರು, ಚಾಮುಂಡಿಬೆಟ್ಟ, ತಾಯೂರು, ಕಳಲೆ, ಕ್ಯಾತನಹಳ್ಳಿ, ತಲಕಾಡು, ಪೂರಿಗಾಲಿ, ಕಾಗಲವಾಡಿ,ಅಗರ–ಮಾಂಬಳ್ಳಿ ಮತ್ತು ವಡ್ಡಗೆರೆಯಲ್ಲಿರುವ ಅನುದಾನಿತ ಪ್ರೌಢಶಾಲೆಗಳಲ್ಲಿ ಖಾಲಿಯಾಗಿರುವ 31 ಸಹ ಶಿಕ್ಷಕರ ಹುದ್ದೆಗಳಿಗೆ ದಿನಾಂಕ: 07.06.2025 ಮತ್ತು 08.06.2025 ರಂದು ಬೆಳಗ್ಗೆ 10.00 ಗಂಟೆಗೆ ಮೇಲ್ಕಂಡ ವಿಳಾಸದಲ್ಲಿ ನೇರ ಸಂದರ್ಶನ (Walk in Interview) ಮೂಲಕ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗುವುದು. ಅರ್ಹ ಅಭ್ಯರ್ಥಿಗಳು ಹಾಗೂ ಆಸಕ್ತ ನಿವೃತ್ತ ಶಿಕ್ಷಕರು ಅಗತ್ಯ ದಾಖಲೆಗಳೊಂದಿಗೆ ಸರಿಯಾದ ಸಮಯಕ್ಕೆ ಹಾಜರಾಗಲು ಸೂಚಿಸಿದೆ.

01	ಕನ್ನಡ	05
02	ಇಂಗ್ಲೀಷ್	07
03	ಹಿಂದಿ	04
04	ಗಣಿತ (ಪಿ.ಸಿ.ಎಂ)	05
05	ವಿಜ್ಞಾನ (ಸಿ.ಬಿ.ಜೆಡ್)	07
06	ಸಮಾಜ–ವಿಜ್ಞಾನ	03

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: 9964476167/9481584152

ಸಹಿ/–
ಟ್ರಸ್ಟಿ ಮತ್ತು ಕಾರ್ಯದರ್ಶಿಗಳು

ಸಾರ್ವಜನಿಕ ಪ್ರಕಟಣೆ

ಕ್ರಯದಾರರಾದ ಎಂ.ವಿ.ಪದ್ಮಮ್ಮ ಕೋಂ ಗುರುರಾಜ್, # 965, 2ನೇ ಹಂತ, ಭೋಗಾದಿ ಉತ್ತರ, ಮೈಸೂರು ರವರು ತಪಶೀಲು ಸ್ವತ್ತುಗಳ ಮಾಲೀಕತ್ವತೆ ಮತ್ತು ಸ್ವಾಧೀನಾನುಭೋಗ ಸಾಬೀತುಪಡಿಸುವ ಎಲ್ಲಾ ದಾಖಲಾತಿಗಳೊಂದಿಗೆ ಕ್ಲಿಯರ್ ಮಾರ್ಕೆಟಬಲ್ ಟೈಟಲ್‌ಡೀಡ್ ಮತ್ತು ಕ್ಲಿಯರ್ ಮಾರುಕಟ್ಟೆ ಬೆಲೆ ಉಳ್ಳದ್ದಾಗಿರುವ ತಪಶೀಲು ಸ್ವತ್ತನ್ನು ನಮ್ಮ ಕಕ್ಷಿದಾರರಾದ ಮೊಹಮ್ಮದ್ ಮೊಯುದ್ದೀನ್ ಖಾನ್ ಬಿನ್ ಸೈಯದ್ ಖಾನ್, ಮತ್ತು ಇವರ ಕುಟುಂಬ ಸದಸ್ಯರು ಪಾಲುದಾರರು ವಾಸ: #96, 4ನೇ ಕ್ರಾಸ್, ಎಂ.ಪಿ.ರಸ್ತೆ, ಉದಯಗಿರಿ, ಮೈಸೂರು ರವರಿಗೆ ತಪಶೀಲು ಸ್ವತ್ತನ್ನು ಪ್ರಸ್ತುತ ಚಾಲ್ತಿಯಲ್ಲಿರುವ ಮಾರುಕಟ್ಟೆ ಬೆಲೆಗೆ ಕ್ರಯಪತ್ರ ಬರೆದುಕೊಡಲು ಶುದ್ಧಕ್ರಯಪತ್ರ ಮಾಡಿಕೊಂಡು ಖರೀದಿಸಲು ತಯಾರಿರುವುದರಿಂದ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ವ್ಯಕ್ತಿಗಳಿಗೆ ಹಕ್ಕುಗಳು, ತಗಾದೆ, ವಗೈರೆ ಇದ್ದ ಸನ್ನಿವೇಶದಲ್ಲಿ ಈ ಕೆಳಗೆ ಸಹಿ ಮಾಡಿರುವ ಜಂಗಮವಾಣಿ ಸಂಖ್ಯೆಗೆ ದಾಖಲಾತಿ ಸಹಿತ ಕಛೇರಿ ವಿಳಾಸಕ್ಕೆ 7 ದಿನಗಳ ಅವಧಿಯಲ್ಲಿ ಸಮರ್ಪಿಸಲು ಸದವಕಾಶ ನೀಡಲಾಗಿದ್ದು, ನಿಗದಿತ ಅವಧಿಯ ತರುವಾಯ ನಮ್ಮ ಕಕ್ಷಿದಾರರು ಸೂಕ್ತ ನೋಂದಾಯಿತ ಕ್ರಯಪತ್ರ ಮಾಡಿಕೊಳ್ಳುವುದಾಗಿ, ತದನಂತರ ಬರುವ ವ್ಯಾಜ್ಯ ವಗೈರೆಗಳಿಗೆ ನಮ್ಮ ಕಕ್ಷಿದಾರರು ಭಾಧ್ಯರಾಗಿರುವುದಿಲ್ಲ ಎಂದು ಸಾರ್ವಜನಿಕರಿಗೆ ತಿಳಿಸಲಾಗಿರುತ್ತದೆ.

ಸ್ವತ್ತಿನ ವಿವರ

1. ಮೈಸೂರು ಜಿಲ್ಲೆ, ತಿ.ನರಸೀಪುರ ತಾಲ್ಲೂಕು, ಸೋಸಲೆ ಗ್ರಾಮದ ವ್ಯಾಪ್ತಿಗೆ ಸೇರಿದ ಜಮೀನಿನ ಸರ್ವೆ ನಂ.249ರಲ್ಲಿ ವಿಸ್ತೀರ್ಣ 2 ಎಕರೆ 37 ಗುಂಟೆ ವಿಸ್ತೀರ್ಣದ ಜಮೀನಿಗೆ ಚೆಕ್ಕುಬಂದಿ : ಪೂರ್ವಕ್ಕೆ: ಖಾಸಗಿಯವರ ಜಮೀನು, ಪಶ್ಚಿಮಕ್ಕೆ: ರಸ್ತೆ ಉತ್ತರಕ್ಕೆ: ಖಾಸಗಿಯವರ ಜಮೀನು, ದಕ್ಷಿಣಕ್ಕೆ : ಕಾವೇರಿ ನದಿ.
2. ಮೈಸೂರು ಜಿಲ್ಲೆ, ತಿ.ನರಸೀಪುರ ತಾಲ್ಲೂಕು, ಸೋಸಲೆ ಗ್ರಾಮದ ವ್ಯಾಪ್ತಿಗೆ ಸೇರಿದ ಜಮೀನಿನ ಸರ್ವೆ ನಂ.264ರಲ್ಲಿ ವಿಸ್ತೀರ್ಣ 0.3 ಗುಂಟೆ ವಿಸ್ತೀರ್ಣದ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ : ಖಾಸಗಿಯವರ ಜಮೀನು, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಖಾಸಗಿಯವರ ಜಮೀನು, ದಕ್ಷಿಣಕ್ಕೆ : ಖಾಸಗಿಯವರ ಜಮೀನು

ಸಹಿ/– ಎಂ.ಬಿ.ಬಾಲಾಜಿ ಸಿಂಗ್
ಎಂ.ಬಿ.ಬಿ.ಎಸ್.ಲಾ–ಅಸೋಸಿಯೇಟ್ಸ್,
ಮೈಸೂರು, ವಕೀಲರು
18, ಕೆ.ಟಿ. ಸ್ಟ್ರೀಟ್, ಮೈಸೂರು.
984522921, 8660989954,
ದಿ: 31/05/2025 9880196965

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,

ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2474475, ಫ್ಯಾಕ್ಸ್ ನಂ.0821–2474476,
ಇ–ಮೇಲ್ : purmymul@gmail.com

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಅವಶ್ಯವಿರುವ ಈ ಕೆಳಕಂಡ ಸೇವೆ / ಸಾಮಾಗ್ರಿಗಳನ್ನು ಖರೀದಿಸಲು ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಅಡಿ https://kppp.karnataka.gov.in ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರ ಸಂ	ಟೆಂಡರ್ ಪ್ರಕಟಣೆ ಮತ್ತು ದಿನಾಂಕ	ಸೇವೆಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	KMF/2025-26/IND1437	30 ಕೆಎಲ್‌ಪಿಎಚ್ ಹಾಲು ಸಂಸ್ಕರಣ ಘಟಕ, ಸೈಲೊ, ಎಚ್.ಎಂ.ಎಸ್.ಟಿ ಜೊತೆಗೆ ಪರಿಕರಗಳ ಸರಬರಾಜು, ಅಳವಡಿಕೆ ಹಾಗೂ ಕಮಿಷನಿಂಗ್ ಮತ್ತು ಸ್ಕಾಡಾ ಏಕೀಕರಣ ಮತ್ತು ಲಾಜಿಕ್ ಡೆವಲಪ್‌ಮೆಂಟ್ ಕೆಲಸಗಳನ್ನು ಟರ್ನ್ ಕೀ ಆಧಾರದ ಮೇಲೆ ಸೇವೆ ಪಡೆಯುವ ಸಂಬಂಧ	13.06.2025 ಸಂಜೆ 5.00 ಗಂಟೆಯವರೆಗೆ
2	KMF/2025-26/OW/WORK_INDENT270	ಮೆಗಾ ಡೇರಿ ಆವರಣದಲ್ಲಿ ಪ್ರಸ್ತುತ ಕಾರ್ಯಾಚರಣೆಯಲ್ಲಿರುವ ಬೆಣ್ಣೆ ಶೀತಲೀಕರಣ ಕೊಠಡಿಯ ಶೀತಲೀಕರಣ ವ್ಯವಸ್ಥೆಯನ್ನು ಸಿವಿಲ್ ಮತ್ತು ವಿದ್ಯುತ್ ಕೆಲಸಗಳನ್ನು ಒಳಗೊಂಡಂತೆ ಹೆಚ್ಚುವರಿ 500ಮೆ.ಟನ್ ಸಾಮರ್ಥ್ಯಕ್ಕೆ ಟರ್ನ್–ಕೀ ಆಧಾರದಲ್ಲಿ ವಿಸ್ತರಿಸುವ ಕೆಲಸ	21.06.2025 ಸಂಜೆ 5.00 ಗಂಟೆಯವರೆಗೆ
3	KMF/2025-26/SE3542	ಮೈಸೂರು ಜಿಲ್ಲಾ ಹಾಲು ಒಕ್ಕೂಟದಲ್ಲಿ ಅಳವಡಿಸಿರುವ ಹಾಲು ಪ್ಯಾಕಿಂಗ್ ಯಂತ್ರಗಳ ನಿರ್ವಹಣೆ , ಹಾಲು ಪ್ಯಾಕಿಂಗ್ ; ಮೊಸರು/ಹಾಲು/ಲಸ್ಸಿ/ಮಜ್ಜಿಗೆ/ ಪ್ರೋಬಯೋಟಿಕ್ ಮೊಸರು / ಮಜ್ಜಿಗೆ ಪ್ಯಾಕಿಂಗ್ ; ತುಪ್ಪ ತಯಾರಿಕೆ/ಪ್ಯಾಕಿಂಗ್ ಮತ್ತು ಸಂಬಂಧಿಸಿದ ಕೆಲಸಗಳು ಕೆ.ಜಿ/ಲೀ ಗಳಲ್ಲಿ. ಗುತ್ತಿಗೆದಾರರನ್ನು ನೇಮಕ ಮಾಡುವ ಸಂಬಂಧ	21.06.2025 ಸಂಜೆ 5.00 ಗಂಟೆಯವರೆಗೆ
4	KMF/2025-26/SE3541	ಮೈಸೂರು ಜಿಲ್ಲಾ ಹಾಲು ಒಕ್ಕೂಟದ ಮೆಗಾ ಡೇರಿಯಲ್ಲಿ ಹಾಲು ಸ್ವೀಕರಣೆ, ಸಂಸ್ಕರಣೆ ಹಾಗೂ ಹಾಲು ಮತ್ತು ಹಾಲಿನ ಉತ್ಪನ್ನಗಳ ತಯಾರಿಕೆ, ಪ್ಯಾಕಿಂಗ್, ರವಾನೆ ಕೆಲಸಗಳಿಗೆ ಕೆ.ಜಿ/ಲೀ ಆಧಾರದಲ್ಲಿ ಮತ್ತು ಮೆಗಾ ಡೈರಿ, ಪ್ರಧಾನ ಡೈರಿ,(ಸಿದ್ದಾರ್ಥನಗರ), ಹುಣಸೂರು ಶೀಥಲೀಕರಣ ಕೇಂದ್ರ, ಐ.ಎಂ.ಸಿಘಟಕ, ಉಪ ಕಛೇರಿಗಳು ಹಾಗೂ ಇನ್ನಿತರೆ ಸ್ಥಳಗಳಲ್ಲಿ ಒಳಾಂಗಣ ಹಾಗೂ ಹೊರಾಂಗಣ ಸ್ವಚ್ಛತೆಗಾಗಿ, ಡೇರಿಯ ಇನ್ನಿತರೆ ಕೆಲಸ ಕಾರ್ಯಗಳಿಗೆ ಮಾನವ ದಿನಗಳ ಆಧಾರದಲ್ಲಿ ಮಾನವ ಸಂಪನ್ಮೂಲವನ್ನು ಒದಗಿಸುವ ಮತ್ತು ಕಛೇರಿ ಕೆಲಸಗಳಿಗೆ ಹೊರ ಸಂಪನ್ಮೂಲದ ಆಧಾರದಲ್ಲಿ ಸಿಬ್ಬಂದಿಗಳನ್ನು ಒದಗಿಸುವ ಗುತ್ತಿಗೆದಾರರನ್ನು ನಿಯೋಜಿಸಿಕೊಳ್ಳುವ ಬಗ್ಗೆ	21.06.2025 ಸಂಜೆ 5.00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ನಂಬರ್‌ಗಳನ್ನು ಸಂಪರ್ಕಿಸಬಹುದಾಗಿದೆ.
ಕ್ರಮ ಸಂಖ್ಯೆ 01 & 02 : ವ್ಯವಸ್ಥಾಪಕರು (ಇಂಜಿನಿಯರಿಂಗ್) – 7411654264,
ಕ್ರಮ ಸಂಖ್ಯೆ 03 & 04: ವ್ಯವಸ್ಥಾಪಕರು (ಆಡಳಿತ) 9845284700 / 6366430822

ಸಹಿ/–, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

ಮೈಸೂರು ಮಿತ್ರ ಭಾನುವಾರ 1 ಜೂನ್ 2025

ಬಸವ ಭಾರತ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಕಟಿಬದ್ಧರಾಗಬೇಕು

ಬಸವಣ್ಣನವರ ಆದರ್ಶ ಇಡೀ ವಿಶ್ವಕ್ಕೆ ಮಾದರಿಯಾಗಿವೆ. ಅದನ್ನು ಎಲ್ಲೆಡೆ ಪಸರಿಸುವ ಕೆಲಸವನ್ನು ನಾವು ಮಾಡಬೇಕಿದೆ. ಬಸವಣ್ಣನವರ ಆದರ್ಶದಲ್ಲೇ ತುಮಕೂರಿನ ಸಿದ್ಧಗಂಗಾ ಹಾಗೂ ಮೈಸೂರಿನ ಸುತ್ತೂರು ಮಠಗಳು ನಡೆಯುತ್ತಿದ್ದು, ಶಿಕ್ಷಣ, ದಾಸೋಹ ಎಲ್ಲವನ್ನು ನೀಡುತ್ತಿವೆ. ವೀರಶೈವ ಲಿಂಗಾಯಿತ ಸಮುದಾಯ ಎಲ್ಲರನ್ನು ನಮ್ಮವರೆಂದು ಹೇಳುತ್ತಾ, ಎಲ್ಲ ಸಮಾಜದವರನ್ನು ಒಂದೇ ರೀತಿ ನೋಡುತ್ತದೆ. ಇದಕ್ಕೆ ಸಿದ್ಧಗಂಗಾ ಮಠವೇ ಶಿಕ್ಷಣ ಹಾಗೂ ದಾಸೋಹದ ಮೂಲಕ ಸಾಕ್ಷಿಯಾಗಿದೆ. - ಎಂ.ಬಿ.ಪಾಟೀಲ್

ಮಂಡ್ಯದಲ್ಲಿ ಅದ್ದೂರಿಯಾಗಿ ನಡೆದ ವಿಶ್ವಗುರು ಬಸವೇಶ್ವರ ಜಯಂತಿ



ಮಂಡ್ಯದಲ್ಲಿ ಶನಿವಾರ ನಡೆದ ಬಸವೇಶ್ವರರ 892ನೇ ಜಯಂತಿ ಮಹೋತ್ಸವವನ್ನು ಉದ್ಘಾಟಿಸುತ್ತಿರುವ ಗಣ್ಯರು.

ಸಮುದಾಯದಲ್ಲಿ ಕಲ್ಯಾಣ ಕ್ರಾಂತಿಯಾಗಿದ್ದರೆ, ರಾಜ್ಯದಲ್ಲಿ ನಾವು ಇನ್ನೂ ದೊಡ್ಡ ಸಮುದಾಯವಾಗಿ ಬೆಳೆಯುತ್ತಿದ್ದೆವು. ಚುನಾವಣೆ ಸಂದರ್ಭದಲ್ಲಷ್ಟೇ ಸಮುದಾಯದ ಮುಖಂಡರು ರಾಜಕಾರಣ ಮಾಡಬೇಕು. ಬೇರೆ ಸಂದರ್ಭದಲ್ಲಿ ಸಮಾಜದ ಏಳಿಗೆಗೆ ಎಲ್ಲ ಪಕ್ಷದವರು ಶ್ರಮಿಸಬೇಕು. ಸಮಾಜದ ಅಭಿವೃದ್ಧಿಗಾಗಿ ನಾನು ಮತ್ತು ವಿಜಯೇಂದ್ರ ಒಗ್ಗಟ್ಟಾಗಿ ಹೋಗಲು ಸಿದ್ಧರಿದ್ದೇವೆ. ಸಮಾಜ ಅಂತ ಬಂದಾಗ ನಾನು ಹಲವು ಬಾರಿ ರಾಜಕೀಯ ಬದಿಗೊತ್ತಿ ಸಮುದಾಯದ ಏಳಿಗೆಗೆ ಶ್ರಮಿಸಿದ್ದೇನೆ.- ಎಂ.ಬಿ.ಪಾಟೀಲ್

ಮಂಡ್ಯ, ಮೇ 31– ಮಹಾನ್ ಮಾನವತಾವಾದಿ ಜಗಜ್ಯೋತಿ ಬಸವೇಶ್ವರರು ಕೇವಲ ಕರ್ನಾಟಕ ಮತ್ತು ಮಹಾರಾಷ್ಟ್ರಕ್ಕೆ ಸೀಮಿತವಾಗಿಲ್ಲ. ಅವರ ತತ್ವಗಳು ಭಾರತ ಮತ್ತು ವಿಶ್ವದೆಲ್ಲೆಡೆ ಪಸರಿಸಿ ಬಸವ ಭಾರತ ನಿರ್ಮಾಣವಾಗಬೇಕು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಅಭಿಪ್ರಾಯಪಟ್ಟರು.

ಶನಿವಾರ ನಗರದ ಮೈಷುಗರ್ ಮೈದಾನದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ಹಾಗೂ ವೀರಶೈವ ಲಿಂಗಾಯಿತ ಸೌಹಾರ್ದ ಮತ್ತು ಸಹಕಾರಿ ಸಂಘಟನೆಗಳ ಸಹಕಾರದೊಂದಿಗೆ ನಡೆದ ವಿಶ್ವಗುರು ಬಸವೇಶ್ವರ 892ನೇ ಜಯಂತಿ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, 12ನೇ ಶತಮಾನದಲ್ಲಿ ಬಸವಣ್ಣನವರು ಶ್ರೇಷ್ಠ ಸಿದ್ಧಾಂತವನ್ನು ಪ್ರತಿಪಾದಿಸಿದರು. ಬಸವ ಕಲ್ಯಾಣದಲ್ಲಿ ಅನುಭವ ಮಂಟಪವನ್ನು ರಚಿಸಿ ಈ ಸಮಾಜದಲ್ಲಿ ಅಸಮಾನತೆ, ಮೇಲು–ಕೀಳು, ಮೌಢ್ಯ, ಮೂಢನಂಬಿಕೆಗಳನ್ನು ಹೋಗಲಾಡಿಸಲು ನಿರಂತರ ಹೋರಾಟ ನಡೆಸಿದ ಮಹಾನ್ ಮಾನವತಾವಾದಿ ಎಂದು ಶ್ಲಾಘಿಸಿದರು.

ಬಸವ ಧರ್ಮವು ಶಾಶ್ವತ ಧರ್ಮ ರೂಪಿತ ಸಮಾಜವಾಗಿದೆ. ಆದರೆ 21ನೇ ಶತಮಾನದಲ್ಲೂ ಮರ್ಯಾದೆ ಹತ್ಯೆಯಂತಹ ಪ್ರಕರಣಗಳು ಮಾನವಸಮಾಜ ನಾಚುವಂತೆ ಮಾಡುತ್ತಿವೆ. ಸಮಾಜ ಶುದ್ಧೀಕರಣಕ್ಕೆ 12ನೇ ಶತಮಾನದಲ್ಲೇ ಬಸವಣ್ಣ ಹೋರಾಟ ಮಾಡಿದ್ದರು. ಈ ಸಮಾಜದಲ್ಲಿ ಬಸವಣ್ಣನವರ ಸಿದ್ಧಾಂತಗಳು ಪ್ರಸ್ತುತವಾಗಿವೆ ಎಂದು ವಿಶ್ಲೇಷಿಸಿದರು.

ಲಿಂಗಾಯಿತ ಧರ್ಮವು ಸಂಘಟನೆಯಾಗಬೇಕು. ಉತ್ತರ ಕರ್ನಾಟಕ, ಮಧ್ಯ ಕರ್ನಾಟಕ ಹಾಗೂ ಹಳೇ ಮೈಸೂರು ಭಾಗದ ಲಿಂಗಾಯಿತ ಸಮುದಾಯದವರು ಒಗ್ಗೂಡಿ ಸಂಘಟಿತರಾಗಿ ಲಿಂಗಾಯಿತ ಸಮಾಜದಲ್ಲಿ ಉಪ ಪಂಗಡಗಳಾಗಿ ಒಡೆದು ಹೋಗಿರುವ ಎಲ್ಲರನ್ನು ಒಗ್ಗೂಡಿಸಿಕೊಂಡು ಸಂಘಟನಾತ್ಮಕವಾಗಿ ಸಮಾಜವನ್ನು ಕಟ್ಟಬೇಕೆಂದು ಸಮುದಾಯದ ಮುಖಂಡರಿಗೆ ಅವರು ಕರೆ ನೀಡಿದರು.

ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, 12ನೇ ಶತಮಾನದಲ್ಲಿ ಬಸವಣ್ಣನವರ ತತ್ವ ಸಿದ್ಧಾಂತಗಳನ್ನು ಸಮಾಜದ ಮೂಲೆ ಮೂಲೆಗೆ ಪಸರಿಸಿದ್ದು, ಸಿದ್ಧಗಂಗಾ ಮಠದ ನಡೆದಾಡುವ ದೇವರೆಂದೇ ಖ್ಯಾತರಾಗಿದ್ದ ಶ್ರೀ ಶಿವಕುಮಾರಸ್ವಾಮೀಜಿಯವರು. ಕಾಯಕ ತತ್ವ ಹಾಗೂ ಸಮಸಮಾಜದ ನಿರ್ಮಾಣಕ್ಕಾಗಿ ಶ್ರೀಗಳು ತಮ್ಮ ಜೀವಿತಾವಧಿಯಲ್ಲಿ ಸಾಕಷ್ಟು ಹೋರಾಡಿದ್ದಾರೆ. ಸಿದ್ಧಗಂಗಾ ಮಠ ಹಾಗೂ ಸುತ್ತೂರು ಮಠಗಳು ಶಿಕ್ಷಣ, ಆಶ್ರಯ, ದಾಸೋಹ ಸೇರಿದಂತೆ ತ್ರಿವಿಧ ದಾಸೋಹಕ್ಕೆ ಹೆಸರು ಮಾಡಿವೆ ಎಂದು ಶ್ಲಾಘಿಸಿದರು.

ವೀರಶೈವ ಲಿಂಗಾಯಿತ ಸಮುದಾಯ ಆಲದ ಮರವಿದ್ದಂತೆ. ನಮ್ಮ ಸಮುದಾಯ ಎಲ್ಲ ಸಮಾಜಕ್ಕೂ ಸಹಾಯವನ್ನು ಮಾಡಿದೆ. ಶ್ರೀಮಠಗಳು ಯಾವುದೇ ಸಮುದಾಯದವರು ಬಂದರೂ ದಾಸೋಹ, ಶಿಕ್ಷಣ, ಆಶ್ರಯ ನೀಡಿವೆ. ಇದು ಲಿಂಗಾಯಿತ ಧರ್ಮದ ಶಕ್ತಿ. ಒಳಪಂಗಡಗಳಿಗೆ ಬಲಿಯಾಗಿ ಲಿಂಗಾಯಿತ ಸಮಾಜ ನಲುಗುತ್ತಿದೆ. ರಾಜಕಾರಣಿಗಳು ತಮ್ಮ ಸ್ವಾರ್ಥಕ್ಕೆ ಒಳಪಂಗಡಗಳಿಗೆ ಬೆಂಬಲವಾಗಿ ನಿಂತಿದ್ದಾರೆ. ಪ್ರತ್ಯೇಕ ಲಿಂಗಾಯಿತ ಧರ್ಮ ಮಾಡಲು ರಾಜಕೀಯ ಶಕ್ತಿಗಳು ಹುನ್ನಾರ ನಡೆಸಿವೆ. ಇವೆಲ್ಲವನ್ನು ಮೆಟ್ಟಿ ನಿಂತು ಎಲ್ಲ ಪಂಗಡಗಳು ಒಗ್ಗೂಡಿ ಸಮಾಜ ಇನ್ನಷ್ಟು ಗಟ್ಟಿಯಾಗಬೇಕು ಎಂದು ಕರೆ ನೀಡಿದರು.

ಸಮುದಾಯದ ಶ್ರೇಯೋಭಿವೃದ್ಧಿಗಾಗಿ ಬಿ.ಎಸ್.ಯಡಿಯೂರಪ್ಪ ಅವರು ಸಿಎಂ ಆಗಿದ್ದಾಗ ಲಿಂಗಾಯಿತ ಮಠಗಳಿಗೆ ಸಾಕಷ್ಟು ಅನುದಾನ ನೀಡಿದ್ದಾರೆ. ಇದಷ್ಟೇ ಅಲ್ಲದೆ, ಒಕ್ಕಲಿಗ, ಹಿಂದುಳಿದ, ದಲಿತ ಸಮುದಾಯದ ಮಠಗಳಿಗೂ ಬಿಎಸ್‌ವೈ ಅನುದಾನ ನೀಡುವ ಮೂಲಕ ಬಸವಣ್ಣನವರ ಸಮ ಸಮಾಜದ ಕ್ರಾಂತಿಗೆ ನಾಂದಿಯಾಡಿದ್ದಾರೆ ಎಂದು ಬಣ್ಣಿಸಿದರು.

ಶಾಸಕ ಪಿ.ರವಿಕುಮಾರ್ ಗಣಿಗ ಮಾತನಾಡಿದರು. ಕಾರ್ಯಕ್ರಮದಲ್ಲಿ ಸುತ್ತೂರು ವೀರಸಿಂಹಾಸನ ಮಠದ ಪೀಠಾಧಿಪತಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ತುಮಕೂರಿನ ಸಿದ್ಧಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ, ಕನಕಪುರ ದೇಗುಲ ಮಠದ ಚನ್ನಬಸವಸ್ವಾಮೀಜಿ, ಚಂದ್ರ ವನ ಆಶ್ರಮದ ತ್ರಿನೇತ್ರ ಮಹಾಂತ ಶಿವಯೋಗಿ ದಿವ್ಯ ಸಾನಿಧ್ಯ ವಹಿಸಿದ್ದರು. ವೇದಿಕೆಯಲ್ಲಿ ಬಸವಧರ್ಮದ ಬಸವೇಶ್ವರಿ ಮಾತಾಜಿ, ವೀರಶೈವ ಮಹಾಸಭಾ ರಾಜ್ಯಾಧ್ಯಕ್ಷ ಶಂಕರ್ ಬಿದರಿ, ಮಾಜಿ ಸಚಿವ ಸಿ.ಎಸ್. ಪುಟ್ಟರಾಜು, ಮಾಜಿ ಶಾಸಕ ಡಾ.ಕೆ.ಅನ್ನದಾನಿ, ಮೈಷುಗರ್ ಕಾರ್ಖಾನೆ ಅಧ್ಯಕ್ಷ ಸಿ.ಡಿ.ಗಂಗಾಧರ್, ಮುಖಂಡರಾದ ಸಚ್ಚಿದಾನಂದ, ಬಿ.ಆರ್.ರಾಮಚಂದ್ರು, ಡಾ. ಇಂದ್ರೇಶ್, ಅಶೋಕ್‌ಜಯರಾಂ, ವೀರಶೈವ ಮಹಾಸಭಾದ ಜಿಲ್ಲಾಧ್ಯಕ್ಷ ಆನಂದ್ ತಾಳಶಾಸನ, ಜಿಲ್ಲಾ ಬಸವ ಸಮಿತಿ ಅಧ್ಯಕ್ಷ ಎಂ.ಬಿ.ರಾಜಶೇಖರ್ ಸೇರಿದಂತೆ ಸಮುದಾಯ ಮುಖಂಡರಿದ್ದರು.

ಸರ್ಕಾರಿ ಶಾಲೆ ಮುಚ್ಚಿದರೆ ಕಠಿಣ ಕ್ರಮ



ಶ್ರೀರಂಗಪಟ್ಟಣ, ಮೇ 31– ವಿಧಾನ ಸಭಾ ಕ್ಷೇತ್ರದ ಯಾವುದೇ ಗ್ರಾಮದಲ್ಲಿ ಈ ಬಾರಿ ಸರ್ಕಾರಿ ಶಾಲೆಗಳು ಮುಚ್ಚಿದರೆ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಶಾಸಕ ರಮೇಶ ಬಂಡಿಸಿದ್ದೇಗೌಡ ಎಚ್ಚರಿಸಿದರು.

ಪಟ್ಟಣದ ಶ್ರೀರಂಗನಾಥಸ್ವಾಮಿ ದೇವಾಲಯದ ಮೈದಾನದಲ್ಲಿ, ಮಾಜಿ ಸಚಿವ ಎ.ಎಸ್.ಬಂಡಿಸಿದ್ದೇಗೌಡ ಪ್ರತಿಷ್ಠಾನದ ವತಿಯಿಂದ ಪಟ್ಟಣದ ವಿವಿಧ ಸರ್ಕಾರಿ ಶಾಲೆಗಳ ನೂರಾರು ವಿದ್ಯಾರ್ಥಿಗಳಿಗೆ ಶನಿವಾರ ಶಾಲಾ ಬ್ಯಾಗ್ ಮತ್ತು ನೋಟ್ ಪುಸ್ತಕಗಳನ್ನು ವಿತರಿಸಿ ಮಾತನಾಡಿದ ಅವರು, ಸರ್ಕಾರಿ ಶಾಲೆಗಳಿಗೆ ಸರ್ಕಾರ ಎಲ್ಲ ಸೌಲಭ್ಯಗಳನ್ನು ಕಲ್ಪಿಸಿದೆ. ಪ್ರತಿಭಾವಂತ ಶಿಕ್ಷಕರಿದ್ದಾರೆ. ಉಚಿತವಾಗಿ ಬಿಸಿಯೂಟ, ಸಮವಸ್ತ್ರ, ಪಠ್ಯ ಪುಸ್ತಕಗಳನ್ನು ಕೊಡಲಾಗುತ್ತಿದೆ. ವಿದ್ಯಾರ್ಥಿ ವೇತನವೂ ಸಿಗುತ್ತಿದೆ. ಆದರೂ ಸರ್ಕಾರಿ ಶಾಲೆಗಳ ದಾಖಲಾತಿ ಪ್ರಮಾಣ ಕುಸಿಯುತ್ತಿದೆ. ಇದಕ್ಕೆ ಯಾರು ಕಾರಣ? ಎಂದು ಅವರು ಪ್ರಶ್ನಿಸಿದರು.

ಖಾಸಗಿ ಶಾಲೆಗಳನ್ನು ಮೀರಿಸಿ ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಸಿಗುವಂತೆ ಕ್ರಮ ವಹಿಸಬೇಕು. ಶಿಕ್ಷಕರು ತಮ್ಮ ವೃತ್ತಿ ಘನತೆಗೆ ತಕ್ಕಂತೆ ಕೆಲಸ ಮಾಡಬೇಕು. ಮಕ್ಕಳ ಶ್ರೇಯೋಭಿವೃದ್ಧಿಗೆ ಶ್ರಮಿಸಬೇಕು. ಕ್ರೀಡೆ, ಕಲೆ, ಸಾಹಿತ್ಯ ಇತರ ಕಾರ್ಯಕ್ರಮಗಳಿಗೂ ಒತ್ತು ನೀಡಬೇಕು ಎಂದು ಅವರು ಸಲಹೆ ನೀಡಿದರು. ಸೇವೆಯಿಂದ ಶನಿವಾರ ನಿವೃತ್ತರಾದ ಗಂಜಾಂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕಿ ಲಲಿತಾ ಕುಮಾರಿ ಅವರನ್ನು ಸನ್ಮಾನಿಸಿದರು.

ಪರಿಹಾರ ವಿತರಣೆ: ಟೌನ್ ವ್ಯಾಪ್ತಿಯ ಗಂಜಾಂನಲ್ಲಿ, ಮಳೆಯಿಂದಾಗಿ ಮನೆಗಳು ಕುಸಿದಿರುವ ಸ್ಥಳಕ್ಕೆ ಶಾಸಕ ರಮೇಶ ಬಂಡಿಸಿದ್ದೇಗೌಡ ಶನಿವಾರ ಅಧಿಕಾರಿಗಳ ಜತೆ ಭೇಟಿ ನೀಡಿ ಪರಿಶೀಲನೆ ನಡೆಸಿ ಸಂತ್ರಸ್ತರಿಗೆ ವಯಕ್ತಿಕ ಪರಿಹಾರ ನೀಡಿದರು.

ಜನೌಷಧಿ ಕೇಂದ್ರ ಸ್ಥಗಿತಕ್ಕೆ ವಿಜಯಕುಮಾರ್ ಆಕ್ರೋಶ



ಮಂಡ್ಯ, ಮೇ 31– ಬಡವರು, ದೀನ ದಲಿತರಿಗೆ ಅನುಕೂಲವಾಗಲೆಂಬ ಉದ್ದೇಶದಿಂದ ಅಸ್ತಿತ್ವಕ್ಕೆ ತಂದ ಜನೌಷಧಿ ಕೇಂದ್ರಗಳನ್ನು ರಾಜ್ಯದ ಕಾಂಗ್ರೆಸ್ ಸರ್ಕಾರ ಸ್ಥಗಿತಗೊಳಿಸುವಂತೆ ಆದೇಶ ನೀಡಿರುವುದನ್ನು ಬಿಜೆಪಿ ಮಾಜಿ ಅಧ್ಯಕ್ಷ ಕೆ.ಎಸ್. ವಿಜಯಕುಮಾರ್ ಖಂಡಿಸಿದ್ದಾರೆ.

ದೇಶಾದ್ಯಂತ ಯಶಸ್ವಿ ಮಾದರಿಯಾಗಿ ಹೊರಹೊಮ್ಮಿರುವ ಪ್ರಧಾನಮಂತ್ರಿ ಜನೌಷಧಿ ಕೇಂದ್ರಗಳು ಕಡಿಮೆ ವೆಚ್ಚದಲ್ಲಿ ಲಕ್ಷಾಂತರ ಜನರಿಗೆ ಉತ್ತಮ ಗುಣಮಟ್ಟದ ಔಷಧ ಒದಗಿಸುತ್ತಿವೆ. ಕರ್ನಾಟಕದಲ್ಲಿಯೂ ನೂರಾರು ಜನೌಷಧಿ ಕೇಂದ್ರಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ಆದರೆ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರ ಇಲಾಖೆಯು ಕುಂಟು ನೆಪ ಹೇಳಿ ರಾಜ್ಯದ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು, ತಾಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಾರು 200ಕ್ಕೂ ಹೆಚ್ಚು ಜನೌಷಧಿ ಕೇಂದ್ರಗಳನ್ನು ಮುಚ್ಚಿಸುವ ಮೂಲಕ ಬಡವರ ಬದುಕಿನೊಂದಿಗೆ ಚೆಲ್ಲಾಟವಾಡುತ್ತಿದೆ ಎಂದು ಪತ್ರಿಕಾ ಹೇಳಿಕೆಯಲ್ಲಿ ಆರೋಪಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿಯುಳ್ಳ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಒಂದಾಗಿರುವ ಜನೌಷಧಿ ಕೇಂದ್ರಗಳಲ್ಲಿ ಶೇ.70 ರಿಂದ 90 ರಷ್ಟು ಕಡಿಮೆ ಬೆಲೆಯಲ್ಲಿ ಜೆನೆರಿಕ್ ಔಷಧಿಗಳು ದೊರಕುತ್ತಿದೆ. ಸಾರ್ವಜನಿಕರಿಗೆ ಕೈಗೆಟುಕುವ ದರದಲ್ಲಿ ಅತ್ಯುತ್ತಮ ಔಷಧ ಒದಗಿಸುತ್ತಿರುವ ಈ ಕೇಂದ್ರಗಳನ್ನು ಮುಚ್ಚುವ ಅಗತ್ಯವೇನಿದೆ? ರಾಜ್ಯ ಸರ್ಕಾರ ಕಾರ್ಪೊರೇಟ್ ಔಷಧ ಕಂಪನಿಗಳು ಮತ್ತು ಖಾಸಗಿ ಮೆಡಿಕಲ್ ಶಾಪ್‌ಗಳ ಲಾಬಿಗೆ ಮಣಿದು ಈ ನಿರ್ಧಾರ ಕೈಗೊಂಡಿದೆ ಎಂದು ಆರೋಪಿಸಿದರು.

ಜನೌಷಧಿ ಕೇಂದ್ರಗಳು ಬಡವರ ಪಾಲಿನ ವರದಾನವಾಗಿವೆ. ಆದರೆ ಬಡವರ ಆರೋಗ್ಯದಲ್ಲೂ ರಾಜಕೀಯ ಮಾಡುವ ಈ ಭ್ರಷ್ಟ ಕರ್ನಾಟಕ ಕಾಂಗ್ರೆಸ್ ಸರ್ಕಾರಕ್ಕೆ ಜನರೇ ಬುದ್ಧಿ ಕಲಿಸುವ ದಿನ ದೂರವಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಈ ಆದೇಶವನ್ನು ತಕ್ಷಣವೇ ಹಿಂಪಡೆಯಬೇಕು ಎಂದು ಒತ್ತಾಯಿಸಿದರು.

ಕೋಡಾಲ ಡೇರಿ ಅಧ್ಯಕ್ಷರಾಗಿ ರಾಮೇಗೌಡ ಆಯ್ಕೆ



ಕೋಡಾಲ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಅಧ್ಯಕ್ಷ ರಾಮೇಗೌಡ, ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್, ಸೊಸೈಟಿ ಅಧ್ಯಕ್ಷ ಸಿ.ಎಸ್.ಗೋಪಾಲಗೌಡ ಅವರನ್ನು ಸಂಘದ ವತಿಯಿಂದ ಅಭಿನಂದಿಸಲಾಯಿತು.

ಚಿನಕುರಳಿ, ಮೇ 31– ಕೋಡಾಲ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ರಾಮೇಗೌಡ ಅವಿರೋಧವಾಗಿ ಆಯ್ಕೆಯಾದರು.

ಸಂಘದ ಹಿಂದಿನ ಅಧ್ಯಕ್ಷ ದೇವರಾಜು ಅವರ ರಾಜೀನಾಮೆಯಿಂದ ತೆರವಾದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಜೆಡಿಎಸ್ ರಾಮೇಗೌಡ ಹೊರತುಪಡಿಸಿ ಯಾವೊಬ್ಬ ನಿರ್ದೇಶಕರು ನಾಮಪತ್ರವನ್ನು ಸಲ್ಲಿಸದ ಹಿನ್ನೆಲೆಯಲ್ಲಿ ರಾಮೇಗೌಡ ಅವರನ್ನು ಸಂಘದ ನೂತನ ಅಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಆರ್.ನಿರ್ಮಲಾ ಅವರು ಘೋಷಿಸಿದರು.

ಸಂಘದ ನೂತನ ಅಧ್ಯಕ್ಷ ರಾಮೇಗೌಡ ಅವರನ್ನು ಎಲ್ಲಾ ನಿರ್ದೇಶಕರು, ಮುಖಂಡರು ಅಭಿನಂಧಿಸಿದರು. ಇದೇ ವೇಳೆ ಮನ್‌ಮುಲ್ ನಿರ್ದೇಶಕರಾದ ಸಿ.ಶಿವಕುಮಾರ್, ಚಿನಕುರಳಿ ಸೊಸೈಟಿ ಅಧ್ಯಕ್ಷ ಸಿ.ಎಸ್.ಗೋಪಾಲ ಗೌಡ, ಪಿಎಲ್‌ಡಿ ನಿರ್ದೇಶಕ ಕುಮಾರ್ ಅವರನ್ನು ಕೋಡಾಲ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ವತಿಯಿಂದ ಅಭಿನಂಧಿಸಲಾಯಿತು. ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷ ಕೆಕೆಪ್ರಕಾಶ್, ಉಪಾಧ್ಯಕ್ಷ ನವೀನ ಯೋಗ ಶೆಟ್ಟಿ, ಗ್ರಾಪಂ ಮಾಜಿ ಅಧ್ಯಕ್ಷ ರಾಧಾ ಕೃಷ್ಣ, ಡೇರಿ ಉಪಾಧ್ಯಕ್ಷೆ ಸುಜಾತ, ನಿರ್ದೇಶಕರಾದ ಕೆ.ಕುಮಾರ್, ಕೆ.ಎನ್.ಲೋಕೇಶ್ ಹಾಗೂ ಇತರ ಮುಖಂಡರು ಹಾಜರಿದ್ದರು.

ಸಿದ್ದಲಿಂಗೇಗೌಡ ನಿಧನ



ಕೆ.ಆರ್.ಪೇಟೆ, ಮೇ 31– ತಾಲೂಕಿನ ಚಿಕ್ಕೋಸಹಳ್ಳಿ ಗ್ರಾಮದ ಹಿರಿಯ ಮುಖಂಡರಾದ ಸಿದ್ದಲಿಂಗೇಗೌಡ (90) ಶನಿವಾರ ನಿಧನರಾಗಿದ್ದಾರೆ.

ಮೃತರು ಓರ್ವ ಪುತ್ರ ಕೆಎಸ್‌ಆರ್‌ಟಿಸಿ ಬಸ್ ಕಂಡಕ್ಟರ್ ಸಿದ್ದೇಗೌಡ ಹಾಗೂ ಐವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆಯು ಸ್ವಗ್ರಾಮ ಚಿಕ್ಕೋಸಹಳ್ಳಿ ಗ್ರಾಮದಲ್ಲಿ ಜೂ.1ರಂದು ಭಾನುವಾರ ಬೆಳಗ್ಗೆ 9 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಪ್ರಭಾರ ಆಯುಕ್ತ ಕೆ.ಆರ್.ರಕ್ಷಿತ್ ಅವರನ್ನು ಬಿಜೆಪಿ ಮುಖಂಡ ಎನ್.ಅರುಣ್ ಕುಮಾರ್‌ಗೌಡ ಅಭಿನಂದಿಸಿದರು. ಈ ವೇಳೆ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಪೈಲ್ವಾನ್ ರವಿ, ಜೆಡಿಎಸ್ ಮುಖಂಡ ವೆಂಕಟೇಶ್, ಎಪಿಎಂಸಿ ಮಾಜಿ ಸದಸ್ಯ ಕೋಟೆಹುಂಡಿ ಮಹದೇವ, ರವಿ, ಭೂನ್ಯಾಯ ಮಂಡಳಿ ಮಾಜಿ ಸದಸ್ಯ ಗೋಪಾಲಗೌಡ, ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ಮುಖಂಡರಾದ ಮಾದಳ್ಳಿ ನಂಜುಂಡ ಸ್ವಾಮಿ, ಯಶವಂತ, ಗಣೇಶ್, ಸುನಿಲ್, ನಾಗೇಶ್ ಇದ್ದರು.

ಇಂದು ಯಕ್ಷಗಾನ

ಮೈಸೂರು: ಮೈಸೂರಿನ ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘದ ವತಿಯಿಂದ ಭಾನುವಾರ ಪೌರಾಣಿಕ ಯಕ್ಷಗಾನ ಪ್ರದರ್ಶನ ಏರ್ಪಡಿಸಲಾಗಿದೆ. ಕುವೆಂಪು ನಗರದ ಲವ–ಕುಶ ಉದ್ಯಾನದ ಬಳಿಯಿರುವ ಸಂಘದ ಆವರಣದಲ್ಲಿ ಸಂಜೆ 5.30ಕ್ಕೆ ಶಿವಮೊಗ್ಗದ ವಿದ್ವಾನ್ ದತ್ತಮೂರ್ತಿ ಭಟ್ ನೇತೃತ್ವದ ನಾಟ್ಯಶ್ರೀ ಕಲಾ ತಂಡವು 'ಯಕ್ಷಗಾನ–ಬ್ರಹ್ಮಕಪಾಲ' ಪ್ರಸ್ತುತಪಡಿಸಲಿದೆ.

ಸಂತಕವಿ ಕನಕದಾಸರ ಕುರಿತ ಯಕ್ಷಗಾನ ಪ್ರದರ್ಶನ

ಕನಕದಾಸರ ಜೀವನ, ಸಾಧನೆ, ಭಕ್ತಿ, ಸಾಮಾಜಿಕ ಚಿಂತನೆ, ಸಂದೇಶ ಅನಾವರಣ



ಮೈಸೂರು ರಂಗಾಯಣದ ಭೂಮಿಗೀತದಲ್ಲಿ ಶಿವಮೊಗ್ಗದ ನಾಟ್ಯಶ್ರೀ ಕಲಾ ತಂಡದಿಂದ ಸಂತ ಕವಿ ಕನಕದಾಸರ ಕುರಿತ ಯಕ್ಷಗಾನ ಪ್ರದರ್ಶನ ಶನಿವಾರ ನಡೆಯಿತು.

ಮೈಸೂರು,ಮೇ 31(ಪಿಎಂ)– ಬೆಂಗಳೂರಿನ ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ವತಿಯಿಂದ 'ಸಂತಕವಿ ಕನಕದಾಸರು' ಶೀರ್ಷಿಕೆಯ ಯಕ್ಷಗಾನ ಪ್ರದರ್ಶನದ ಪ್ರಥಮ ಪ್ರಯೋಗ ಶನಿವಾರ ನಡೆಯಿತು.

ಮೈಸೂರು ರಂಗಾಯಣದ ಸಹಕಾರದೊಂದಿಗೆ ಸದರಿ ಕೇಂದ್ರದ ವತಿಯಿಂದ ರಂಗಾಯಣದ ಭೂಮಿಗೀತದಲ್ಲಿ ಶಿವಮೊಗ್ಗದ ನಾಟ್ಯಶ್ರೀ ಕಲಾತಂಡವು ಯಕ್ಷಗಾನ ಪ್ರದರ್ಶನ ನೀಡಿತು. ಪಂಡಿತ್ ವಿ.ದತ್ತಮೂರ್ತಿ ಭಟ್ ಮಾರ್ಗದರ್ಶನ ಹಾಗೂ ಸುಜಾತ ಡಿ.ಭಟ್ಟ ಅವರ ನಿರ್ದೇಶನದಲ್ಲಿ ಯಕ್ಷಗಾನ ಪ್ರದರ್ಶನ ಕಂಡಿತು.

ಇದಕ್ಕೂ ಮುನ್ನ ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಮಾತನಾಡಿ, ವಿವಿಧ ರಂಗ ಪ್ರಕಾರಗಳ ಪ್ರದರ್ಶಿಸುವ ಮೂಲಕ ಅವುಗಳಲ್ಲಿರುವ ವಿವೇಕವನ್ನು ಕಂಡುಕೊಳ್ಳುವ ಕೆಲಸವನ್ನು ರಂಗಾಯಣ ಮಾಡುತ್ತಿದೆ. ಕೇವಲ ಆಧುನಿಕ ರಂಗ ಪ್ರಯೋಗಗಳಿಗೆ ಮಾತ್ರವೇ ರಂಗಾಯಣ ಸೀಮಿತವಾಗಿಲ್ಲ. ಅವುಗಳ ಜೊತೆಗೆ ಕಲಾ ಮಾಧ್ಯಮದ ಬೇರೆ ಬೇರೆ ಪ್ರಕಾರಗಳಾದ ಬಯಲಾಟ, ಮೂಡಲಪಾಯ ಯಕ್ಷಗಾನ, ಜನಪದದ ಮಂಟೇಸ್ವಾಮಿ ಮಹಾಕಾವ್ಯ ಸೇರಿದಂತೆ ಮೊದಲಾದ ಪ್ರಯೋಗಗಳಿಗೂ ಆದ್ಯತೆ ನೀಡಲಾಗಿದೆ. ಆ ಮೂಲಕ ಅವುಗಳಲ್ಲಿರುವ ವಿವೇಕಗಳನ್ನು ಅರಿತುಕೊಂಡು ರಂಗಾಯಣವನ್ನು ಮರುಕಟ್ಟುವ ಕೆಲಸ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ಅಧ್ಯಕ್ಷ ಕಾ.ತ.ಚಿಕ್ಕಣ್ಣ ಮಾತನಾಡಿ, ಕನಕದಾಸರು, ಹರಿದಾಸರು ಸೇರಿದಂತೆ ದಾಸ ಸಾಹಿತ್ಯ, ತತ್ವಪದ ಹಾಗೂ ಭಕ್ತಿ ಸಾಹಿತ್ಯ ಸಂಬಂಧ ಅಧ್ಯಯನ, ಕಾರ್ಯಕ್ರಮ ಆಯೋಜನೆ ಹಾಗೂ ಪ್ರಚಾರ ಮಾಡುವುದು ನಮ್ಮ ಕೇಂದ್ರದ ಮುಖ್ಯ ಉದ್ದೇಶವಾಗಿದೆ. ಈ ಎಲ್ಲಾ ಸಾಹಿತ್ಯವನ್ನು, ವಿದ್ಯಾರ್ಥಿಗಳು–ಯುವ ಸಮುದಾಯ, ಸಾರ್ವಜನಿಕರು, ವಿದ್ವಾಂಸರಿಗೆ ತಲುಪಿಸಲು ಅಗತ್ಯ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ ಎಂದು ಹೇಳಿದರು.

ಆ ಪೈಕಿ ಸಾರ್ವಜನಿಕರನ್ನು ತಲುಪಲು ಇಂದು ಯಕ್ಷಗಾನದ ಪ್ರಥಮ ಪ್ರಯೋಗದ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಈಗಾಗಲೇ ಬೊಂಬೆಯಾಟದಲ್ಲಿ ಕನಕದಾಸರನ್ನು ಪರಿಚಯಿಸುವ ಕಾರ್ಯಕ್ರಮ ಮಾಡಿದ್ದೇವೆ. ತಾಳಮದ್ದಳೆಯಲ್ಲಿ ಅವರ ಕೃತಿಗಳನ್ನು ಪರಿಚಯಿಸಿದ್ದೇವೆ. ಹಾಗೆಯೇ ಮಕ್ಕಳಿಗಾಗಿ ಸಚಿತ್ರ ಕೋಶ ಪ್ರಕಟಣೆ ಮಾಡಿದ್ದು, ಇದು ಪಂಚತಂತ್ರ ಮಾದರಿಯಲ್ಲಿ ಚಿತ್ರಗಳನ್ನು ನೋಡಿಕೊಂಡು ಮಕ್ಕಳು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಸಹಕಾರಿಯಾಗಲಿದೆ ಎಂದರು.

ಇಂದಿನ ಯಕ್ಷಗಾನದಲ್ಲಿ ದತ್ತಮೂರ್ತಿ ಅವರ ತಂಡದ 12 ಮಂದಿ ಕಲಾವಿದರು ಪ್ರದರ್ಶನ ನೀಡುತ್ತಿದ್ದಾರೆ. 90 ನಿಮಿಷದ ಅವಧಿಯನ್ನು ಪ್ರದರ್ಶನ ಒಳಗೊಂಡಿದೆ. ಕನಕದಾಸರ ಜೀವನ, ಸಾಧನೆ, ಭಕ್ತಿ ಮತ್ತು ಸಾಮಾಜಿಕ ಚಿಂತನೆಯನ್ನು ಈ ಯಕ್ಷಗಾನ ಪ್ರದರ್ಶನ ಅನಾವರಣಗೊಳಿಸಲಿದೆ. ಈ ಪ್ರದರ್ಶನದ ನಂತರ ಅಗತ್ಯ ಸುಧಾರಣೆಗಳೊಂದಿಗೆ ರಾಜ್ಯದ ವಿವಿಧೆಡೆ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಿಕೊಳ್ಳಲಾಗುವುದು ಎಂದು ಹೇಳಿದರು.

ಪರಮರ್ಶನಾ ಗ್ರಂಥಾಲಯ ಸ್ಥಾಪನೆ: ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿರುವ ನಮ್ಮ ಅಧ್ಯಯನ ಕೇಂದ್ರದಲ್ಲಿ ಪರಮರ್ಶನಾ ಗ್ರಂಥಾಲಯವನ್ನು ತೆರೆಯಲಾಗಿದ್ದು, ಇಲ್ಲಿ ತತ್ವಪದ ಸಾಹಿತ್ಯ, ಭಕ್ತಿ ಸಾಹಿತ್ಯ, ಹರಿದಾಸರು ಹಾಗೂ ಕನಕದಾಸರ ಸಾಹಿತ್ಯದ ಗ್ರಂಥಗಳನ್ನು ಮಾತ್ರವೇ ಶೇಖರಣೆ ಮಾಡಲಾಗಿದೆ. ಸಾರ್ವಜನಿಕರು ತಮ್ಮ ಬಳಿ ಈ ಸಾಹಿತ್ಯಕ್ಕೆ ಸಂಬಂಧಿಸಿದ ಗ್ರಂಥಗಳು, ತಾಳೇಗರಿಗಳು ಇದ್ದರೆ ನಮ್ಮ ಈ ಗ್ರಂಥಾಲಯಕ್ಕೆ ನೀಡಬಹುದು. 'ಸಾಂಸ್ಕೃತಿಕ ಪದ ವಿವರಣಾ ಕೋಶ' ಶೀರ್ಷಿಕೆಯಡಿ ತತ್ವಪದ ಸಾಹಿತ್ಯ ಸಂಬಂಧ ತಾಂತ್ರಿಕ ಪದಕೋಶ ಸಹ ಮಾಡುತ್ತಿದ್ದೇವೆ. ಇದು ಸಂಶೋಧಕರಿಗೆ ಅನುಕೂಲವಾಗಲಿದೆ ಎಂದು ಕಾ.ತ.ಚಿಕ್ಕಣ್ಣ ತಿಳಿಸಿದರು.

ಮೂರನೇ ಪುಟದಿಂದ

ಡಿಡಿಪಿಐ ವಿರುದ್ಧ ಕ್ರಮ

ಸುಧಾರಿಸಬಹುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ನೀಡಿದರು.

ಅನರ್ಹ ಬಿಪಿಎಲ್ ಪಡಿತರ ಚೀಟಿದಾರರ ಸಂಖ್ಯೆ ವಿಪರೀತ ಹೆಚ್ಚುತ್ತಿರುವುದಕ್ಕೆ ಕಾರಣವೇನು, ವೈಜ್ಞಾನಿಕ ಅಂಕಿ–ಅಂಶಗಳು ಬೇರೆಯೇ ಹೇಳುತ್ತಿವೆ, ಯಾವುದೇ ಜಿಲ್ಲೆಯಲ್ಲೂ ಶೇ.60ಕ್ಕಿಂತ ಹೆಚ್ಚು ಅರ್ಹರು ಇರಲು ಸಾಧ್ಯವಿಲ್ಲ. ಸ್ವಲ್ಪ ಪ್ರಮಾಣದ ವ್ಯತ್ಯಾಸ ಇರಬಹುದು, ಆದರೆ ಶೇ.80, ಶೇ.90 ಇದ್ದರೆ ಹೇಗೆ, ಇದನ್ನು ಯಾವುದೇ ಮಾನದಂಡದಲ್ಲೂ ಒಪ್ಪಲು ಸಾಧ್ಯವಿಲ್ಲ. ಇದರಿಂದ ನಿಜವಾದ ಅರ್ಹರಿಗೆ ದೊಡ್ಡ ಅನ್ಯಾಯ ಆಗಲಿದೆ, ಅರ್ಹರಿಗೆ ಅನ್ಯಾಯ ಆಗುವುದನ್ನು ತಡೆಯಲು ನಕಲಿ ಮತ್ತು ಅನರ್ಹ ಕಾರ್ಡ್‌ಗಳನ್ನು ತಡೆಯಬೇಕು ಎಂದು ಕಟ್ಟುನಿಟ್ಟಾಗಿ ಸೂಚಿಸಿದರು.

ಶಿಕ್ಷಕರು, ಸರ್ಕಾರಿ ನೌಕರರ ಬಳಿಯೂ ಬಿಪಿಎಲ್ ಪಡಿತರ ಚೀಟಿಗಳಿವೆ, ಇವರಲ್ಲಿ ಹಲವರು ಪಡಿತರ ಪಡೆಯುವುದಿಲ್ಲ, ಆದರೆ ಆಸ್ಪತ್ರೆಗಳಿಗೆ ಹೋಗಲು ಮತ್ತು ಇನ್ನಿತರೆ ಅಗತ್ಯಗಳಿಗೆ ಕಾರ್ಡ್‌ಗಳನ್ನು ಬಳಸುತ್ತಿದ್ದಾರೆ, ಅರ್ಹರಿಗೆ ಸಮಸ್ಯೆ ಆಗದಂತೆ ಅನರ್ಹ ಕಾರ್ಡ್‌ಗಳನ್ನು ರದ್ದುಪಡಿಸಿ ಎಂದು ಅಧಿಕಾರಿಗಳಿಗೆ ತಿಳಿಸಿದರು.

ಕೊರೊನಾ ಸಕ್ರಿಯ ಪ್ರಕರಣಗಳ ಏರಿಕೆ

ಜನರು ಆತಂಕಪಡಬಾರದು. ಆರೋಗ್ಯ ಇಲಾಖೆ ಕೋವಿಡ್ ಪರಿಸ್ಥಿತಿಯ ನಿಗಾ ವಹಿಸಿದ್ದು, ಹತೋಟಿಗೆ ತರಲು ಕ್ರಮಗಳನ್ನು ಕೈಗೊಳ್ಳುತ್ತಿದೆ. ರಾಜ್ಯದಲ್ಲಿ ಆತಂಕ ಪಡುವ ಪರಿಸ್ಥಿತಿ ಇಲ್ಲವಾದರೂ, ಸಾರ್ವಜನಿಕರು ಮುನ್ನೆಚ್ಚರಿಕೆ ವಹಿಸಬೇಕು ಎಂದು ತಿಳಿಸಿರುವ ಆರೋಗ್ಯ ಇಲಾಖೆ ಸಾರ್ವಜನಿಕರಿಗೆ ಮುಂಜಾಗ್ರತಾ ಕ್ರಮವಾಗಿ ಸುತ್ತೋಲೆ ಹೊರಡಿಸುವ ಮೂಲಕ ಕೆಲವು ಪ್ರಮುಖ ಸೂಚನೆಗಳನ್ನು ನೀಡಿದೆ. ವಿದೇಶದಿಂದ ಬರುವ ಪ್ರಯಾಣಿಕರ ಮಾಹಿತಿಯನ್ನು ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ತಿಳಿಸಿ ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿಕೊಂಡಿದೆ.

ಸಾರ್ವಜನಿಕರಿಗೆ ಪ್ರಮುಖ ಸಲಹೆ

● ಅಗತ್ಯ ಮುಂಜಾಗ್ರತಾ ಕ್ರಮಕ್ಕಾಗಿ ವಿದೇಶಗಳಿಂದ ಬರುವ ಪ್ರಯಾಣಿಕರ ಬಗ್ಗೆ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ತಿಳಿಸಿ. ● ಜನದಟ್ಟಣೆಯ ಸ್ಥಳಗಳಲ್ಲಿ ಮಾಸ್ಕ್ ಧರಿಸಿ, ದೈಹಿಕ ಅಂತರವನ್ನು ಕಾಪಾಡಿಕೊಳ್ಳಿ. ● ಜ್ವರ, ಕೆಮ್ಮು, ಎದೆನೋವು ಅಥವಾ ಉಸಿರಾಟದ ತೊಂದರೆ ಮುಂತಾದ ರೋಗಲಕ್ಷಣಗಳು ಕಂಡುಬಂದರೆ ತಕ್ಷಣ ವೈದ್ಯಕೀಯ ಸಲಹೆ ಪಡೆಯಿರಿ. ● ರ‍್ಯಾಂಡಮ್ ಮಾದರಿಗಳ ಪರೀಕ್ಷೆಗೆ ಸಹಕರಿಸಿ. ● IHIP ಪೋರ್ಟಲ್‌ನ ಸಮುದಾಯ ಮೇಲ್ವಿಚಾರಣಾ ಉಪಕರಣದ ಮೂಲಕ ಕೋವಿಡ್–19 ತರಹದ ರೋಗಲಕ್ಷಣಗಳಲ್ಲಿ ಅಸಾಮಾನ್ಯ ಹೆಚ್ಚಳ ಕಂಡುಬಂದರೆ ತಕ್ಷಣ ಆರೋಗ್ಯ ಇಲಾಖೆಗೆ ತಿಳಿಸಿ. ● ಅನಾರೋಗ್ಯ ಪೀಡಿತ ಮಕ್ಕಳನ್ನು ಮನೆಯಲ್ಲಿಯೇ ಇರಿಸಿ, ರೋಗಲಕ್ಷಣವಿರುವ ವಿದ್ಯಾರ್ಥಿಗಳನ್ನು ಮೇಲ್ವಿಚಾರಣೆ ಮಾಡಿ, ನೈರ್ಮಲ್ಯವನ್ನು ಕಾಪಾಡಿಕೊಳ್ಳಿ. ● ತಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಉತ್ತಮ ನೈರ್ಮಲ್ಯವನ್ನು ಕಾಪಾಡಿಕೊಳ್ಳಿ. ತ್ಯಾಜ್ಯವನ್ನು ಸರಿಯಾಗಿ ವಿಲೇವಾರಿ ಮಾಡಿ, ಸಾರ್ವಜನಿಕ ಪ್ರದೇಶಗಳನ್ನು ಸ್ವಚ್ಛವಾಗಿಡಿ. ● ಆರೋಗ್ಯ ಸಲಹೆಗಾಗಿ ಉಚಿತ ಸಹಾಯವಾಣಿ ಸಂಖ್ಯೆ 1800 425 8330ಗೆ ಕರೆ ಮಾಡಿ ಹಾಗೂ ರೋಗಿಗಳ ತುರ್ತು ಸಾಗಣೆಗೆ 108ಗೆ ಕರೆ ಮಾಡಿ.

ಜ್ವರ ಇದ್ದರೆ ಮಕ್ಕಳಿಗೆ ರಜೆ

ಈ ನಿರ್ಧಾರ ಕೈಗೊಂಡಿರುವುದಲ್ಲದೆ, ಶಾಲಾ ಮಕ್ಕಳು ಹಾಗೂ ಶಿಕ್ಷಕರಿಗೂ ಇಂತಹ ಯಾವುದೇ ಕುರುಹು ಇದ್ದರೂ ಅವರಿಗೂ ರಜೆ ನೀಡ ಬೇಕು. ಶೀತ, ಕೆಮ್ಮು ಇರುವ ಮಕ್ಕಳು ಒಂದು ವೇಳೆ ಶಾಲೆಗೆ ಬಂದರೆ, ಅಂತಹವರನ್ನು ಗುರುತಿಸಿ, ಪ್ರತ್ಯೇಕವಾಗಿ ಕೂರಿಸಿ, ಅವರ ಪೋಷಕರನ್ನು ಕರೆಸಿ ಮನೆಗೆ ಕಳುಹಿಸಿಕೊಡಬೇಕು. ನೆಗಡಿ, ಕೆಮ್ಮು ಇರುವ ಮಕ್ಕಳಿಗೆ ಪೋಷಕರು ತಕ್ಷಣವೇ ಚಿಕಿತ್ಸೆ ಕೊಡಿಸಬೇಕು, ಗುಣಮುಖರಾಗುವವರೆಗೂ ಶಾಲೆಗೆ ಕಳುಹಿಸಬಾರದು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಮಕ್ಕಳ ಆರೋಗ್ಯ ದೃಷ್ಟಿಯಿಂದ ಶಾಲೆಗಳಲ್ಲಿ ಕೋವಿಡ್–19 ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕೆಂದು ಆರೋಗ್ಯ ಇಲಾಖೆ ಹೇಳಿದೆ.

ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಫ್ಯೂಚರ್ ಸ್ಕಿಲ್ಸ್ ಕೇಂದ್ರ ಉದ್ಘಾಟನೆ

ಹಳೆಯ ದಿನಗಳಲ್ಲಿ ತಾವು ನಿರ್ವಹಿಸಿದ ಕಾರ್ಯವೈಖರಿ ಮೆಲುಕು ಹಾಕಿದರು.

ಇಂದು ಭಾರತದ ಒಟ್ಟಾರೆ ಅಭಿವೃದ್ಧಿ ಮತ್ತು ಸ್ವಾವಲಂಬನೆಗೆ ಕೌಶಲ ಶಿಕ್ಷಣವು ಮೂಲಭೂತ ಅವಶ್ಯಕತೆಯಾಗಿದೆ. ಪ್ರತಿಯೊಬ್ಬ ಯುವಕರು ಜ್ಞಾನದ ಜೊತೆಗೆ ಪ್ರಾಯೋಗಿಕ ಕೌಶಲಗಳನ್ನು ಹೊಂದಿದಾಗ ಮಾತ್ರ ಕೌಶಲಯುತ ಭಾರತ, ಸಮರ್ಥ ಭಾರತದ ಕನಸು ನನಸಾಗುತ್ತದೆ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ, ಯುವಕರಿಗೆ ತಾಂತ್ರಿಕ ಕೌಶಲ, ಸಾಮಾಜಿಕ ಕೌಶಲ ಮತ್ತು ವೃತ್ತಿಪರ ಕೌಶಲಗಳನ್ನು ಒದಗಿಸುವ ಮೂಲಕ, ನಾವು ಕೌಶಲ ಪೂರ್ಣ ವ್ಯಕ್ತಿ–ಸದೃಢ ರಾಷ್ಟ್ರವನ್ನು ನಿರ್ಮಿಸಲು ಸಹಾಯ ಮಾಡಬಹುದು. ಇದಲ್ಲದೆ, ಕೌಶಲ ಶಿಕ್ಷಣವು ಗ್ರಾಮೀಣ, ಹಿಂದುಳಿದ ಮತ್ತು ವಂಚಿತ ವರ್ಗಗಳಿಗೆ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣದ ಮಾಧ್ಯಮವಾಗುತ್ತಿದೆ ಎಂದು ತಿಳಿಸಿದರು.

ಎನ್‌ಎಸ್‌ಡಿಎಸ್ ಭಾರತ ಸರ್ಕಾರದ ಪ್ರವರ್ತಕ ಸಂಸ್ಥೆಯಾಗಿದ್ದು, ಕೌಶಲ ಅಭಿವೃದ್ಧಿಯನ್ನು ಉತ್ತೇಜಿಸುವುದು, ಯುವಕರನ್ನು ಉದ್ಯೋಗಕ್ಕೆ ಅರ್ಹರನ್ನಾಗಿ ಮಾಡುವುದು, ಕೈಗಾರಿಕೆಗಳ ಅವಶ್ಯಕತೆಗಳನ್ನು ಪೂರೈಸುವುದು ಮತ್ತು ಭಾರತವನ್ನು ಜಾಗತಿಕ ಕಾರ್ಯಪಡೆಯ ಕೇಂದ್ರವನ್ನಾಗಿ ಮಾಡುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಕೌಶಲಪೂರ್ಣ ಭಾರತ–ಬಲಿಷ್ಠ ಭಾರತ ಎಂಬ ಪರಿಕಲ್ಪನೆಯನ್ನು ಸಾಕಾರಗೊಳಿಸುವಲ್ಲಿ ಇದರ ಪ್ರಯತ್ನಗಳು ಪ್ರಮುಖ ಪಾತ್ರ ವಹಿಸುತ್ತಿವೆ. ಪ್ರಸ್ತುತ ನಾವು ತಾಂತ್ರಿಕ ಪ್ರಗತಿಯ ಅನುಕೂಲ ಮತ್ತು ಅವಶ್ಯಕತೆಯಾಗಿ ಮಾರ್ಪಟ್ಟಿರುವ ಯುಗದಲ್ಲಿದ್ದೇವೆ. ಕೃತಕ ಬುದ್ಧಿಮತ್ತೆ, ದತ್ತಾಂಶ ವಿಜ್ಞಾನ, ಸೈಬರ್ ಭದ್ರತೆ ಮತ್ತು ಡಿಜಿಟಲ್ ಮಾರ್ಕೆಟಿಂಗ್‌ನಂತಹ ವಲಯಗಳು ನಮ್ಮ ಆರ್ಥಿಕತೆಯನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುತ್ತಿವೆ ಮತ್ತು ಅಪಾರ ಉದ್ಯೋಗ ಮತ್ತು ನಾವೀನ್ಯತೆ ಅವಕಾಶಗಳನ್ನು ಒದಗಿಸುತ್ತಿವೆ ಎಂದು ತಿಳಿಸಿದರು.

ನಂತರ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರಾದ ಡಾ.ನಿರ್ಮಲಾನಂದ ಸ್ವಾಮೀಜಿ ಮಾತನಾಡಿ, ಪ್ರಾಚೀನ ಕಾಲದಲ್ಲಿ 64 ವಿದ್ಯೆಗಳು ನಮ್ಮ ಕಲಿಕೆಯ ಭಾಗವಾಗಿದ್ದವು. ಅದನ್ನೇ ಮುಂದುವರಿಸಿದ್ದರೆ ನಾವು ಜಾಗತಿಕವಾಗಿ ಮುಂದೆ ಇರುತ್ತಿದ್ದೆವು. ಆದರೆ ನಂತರದಲ್ಲಿ ಈ ಪದ್ಧತಿ ನಶಿಸಿತು. ನಮ್ಮ ಶಿಕ್ಷಣ ಪದ್ಧತಿಗಳು ಬದಲಾದವು. 18ನೇ ಶತಮಾನದಲ್ಲಿ ಕೈಗಾರಿಕಾ ಕ್ರಾಂತಿ ಆರಂಭಗೊಂಡು ಹಲವು ಅನ್ವೇಷಣೆ ನಡೆದವು. ಇಂದು ನಾಲ್ಕನೇ ಕೈಗಾರಿಕಾ ಕ್ರಾಂತಿ ಕಾಲದಲ್ಲಿದ್ದು, ಕೌಶಲ ವೃದ್ಧಿಸಿಕೊಂಡರೆ ನಾವು ಜಾಗತಿಕವಾಗಿ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಲು ಸಾಧ್ಯವಿದೆ ಎಂದರು.

ಕೇಂದ್ರ ಸರ್ಕಾರ ಸಹ ಕೌಶಲಾವೃದ್ಧಿಗೆ ಆದ್ಯತೆ ನೀಡುತ್ತಿದೆ. ಭಾರತವು ಕೌಶಲ್ಯ ರಾಜಧಾನಿಯಾಗಿ ಬೆಳೆಯುವ ಅಗತ್ಯ ಇದೆ. ನಮ್ಮ ಯುವಜನರು ಉತ್ತಮ ಕೌಶಲ, ಜ್ಞಾನ ಬೆಳೆಸಿಕೊಂಡಾಗ ಅಭಿವೃದ್ಧಿ ಸಾಧ್ಯವಾಗಲಿದೆ ಎಂದು ತಿಳಿಸಿದರು.

ಜಾಗತಿಕ ಪರಿಕಲ್ಪನೆಯೊಂದಿಗೆ ನಾವು ಮುನ್ನಡೆಯಬೇಕಿದೆ. ವಿವಿಗಳಲ್ಲಿ ಪದವಿ ಪಡೆದ ನಂತರವೂ ಹೆಚ್ಚಿನ ಕೌಶಲದ ಅಗತ್ಯ ಇದೆ. ಉದ್ಯೋಗ ಕೌಶಲ್ಯದ ಪ್ರಮಾಣ ಶೇ.4ರಷ್ಟು ಜನರಲ್ಲಿ ಮಾತ್ರವೇ ಇದೆ. ಕೌಶಲ್ಯಾವದ್ಧಿಯಿಂದ ನಾವು ಸಮಾಜಕ್ಕೆ ಉಪಯುಕ್ತ ಕಾಣಿಕೆ ನೀಡಬೇಕು. ದೇಶದ ಬೆಳವಣಿಗೆಗೆ ಪೂರಕವಾಗಿ ಬಳಸಬೇಕು. ಸಾಮಾನ್ಯ ಶಿಕ್ಷಣದ ಜೊತೆಗೆ ನೈತಿಕ ಮೌಲ್ಯಗಳನ್ನು ಯುವಜನರಲ್ಲಿ ಬೆಳೆಸಬೇಕು ಎಂದು ಅಭಿಪ್ರಾಯಪಟ್ಟರು.

ಎಸ್‌ಜೆಬಿ, ಬಿಜಿಎಸ್ ಸಮೂಹದ ವ್ಯವಸ್ಥಾಪಕ ನಿರ್ದೇಶಕ ಡಾ.ಪ್ರಕಾಶನಾಥ ಸ್ವಾಮೀಜಿ, ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕೆಎಸ್‌ಡಿಸಿ ಎಂಡಿ ಎನ್.ಎಂ.ನಾಗರಾಜ್, ಎನ್‌ಎಸ್‌ಡಿಸಿ ಸಲಹೆಗಾರ ಡಾ.ಕಿರಣ್ ಕೆ.ರಾಜಣ್ಣ, ಕುಲಸಚಿವ ಪ್ರೊ.ಎಸ್.ಕೆ.ನವೀನ್‌ಕುಮಾರ್, ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಸೋಮನಾಥ ಸ್ವಾಮೀಜಿ ಉಪಸ್ಥಿತರಿದ್ದರು.

ಹಿಂಬದಿ ಸವಾರನ ಹಿಡಿದೆಳೆಯಬೇಡಿ; ಗಾಡಿ ಕೀಲಿಕೈ ಮುಟ್ಟಬೇಡಿ!

ಗುರುತು ಮಾಡಿಕೊಂಡು ಜಿಲ್ಲಾ ಪೊಲೀಸ್ ಠಾಣಾ ಸರಹದ್ದುಗಳ ವಿವಿಧ ನಿಯಂತ್ರಣ ಕೋಣೆಗಳಿಗೆ ಮಾಹಿತಿ ರವಾನಿಸಿ, ಸದರಿ ವಾಹನ ಸವಾರರನ್ನು ಪತ್ತೆಹಚ್ಚಿ ಪ್ರಕರಣ ದಾಖಲಿಸಬೇಕು.

● ಸಂಚಾರ ನಿಯಮ ಉಲ್ಲಂಘನೆದಾರರ ವಿರುದ್ಧ ಭೌತಿಕವಾಗಿ ಪ್ರಕರಣ ದಾಖಲಿಸುವಾಗ ಅಥವಾ ವಾಹನಗಳ ತಪಾಸಣೆ ಮಾಡುವ ಸಂದರ್ಭದಲ್ಲಿ ಪೊಲೀಸರು ತಮ್ಮ ಸುರಕ್ಷತೆಗಾಗಿ Reflective Jacket ಗಳನ್ನು ಧರಿಸಬೇಕು. ಸಂಜೆ ವೇಳೆಯಲ್ಲಿ ಕಡ್ಡಾಯವಾಗಿ ಎಲ್‌ಇಡಿ ಬಟನ್‌ಗಳನ್ನು ಉಪಯೋಗಿಸಬೇಕು ಹಾಗೂ ವಾಹನಗಳನ್ನು ತಪಾಸಣೆ ಮಾಡುವ ಸಂದರ್ಭದಲ್ಲಿ ಕಡ್ಡಾಯವಾಗಿ ಬಾಡಿವೋರ್ನ್ ಕ್ಯಾಮರಾ ಧರಿಸಬೇಕು.

● ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸೆಂಟರ್ (ಟಿಎಂಸಿ) ಅಥವಾ ಇಂಟಲಿಜೆಂಟ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಂ (ಐಟಿಎಂಎಸ್) ಹೊಂದಿರುವ ಘಟಕಗಳಲ್ಲಿ ಆದಷ್ಟು ಸಂಪರ್ಕ ರಹಿತ ಪ್ರಕರಣಗಳನ್ನು ದಾಖಲಿಸಬೇಕು.

● ಅನಾಹುತಗಳನ್ನು ತಪ್ಪಿಸಲು ಎಲ್ಲಾ ಘಟಕಗಳಲ್ಲೂ ಸಂಚಾರ ನಿಯಮಗಳನ್ನು ಕಡ್ಡಾಯವಾಗಿ ಪಾಲನೆ ಮಾಡುವ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಕಾಲಕಾಲಕ್ಕೆ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕು.

● ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಹಾಗೂ ಇತರೆ ರಸ್ತೆಗಳಲ್ಲಿ ಯಾವುದೇ ಕಾರಣಕ್ಕೂ ಅತಿ ವೇಗವಾಗಿ ಚಲಿಸುವ ವಾಹನಗಳನ್ನು ತಡೆಯುವ ಪ್ರಯತ್ನ ಮಾಡಬಾರದು ಹಾಗೂ ಇಂತಹ ವಾಹನಗಳ ವಿರುದ್ಧ ಎಫ್.ಟಿ.ವಿ.ಆರ್ ದಾಖಲಿಸಲು ತಂತ್ರಜ್ಞಾನ ಅನುಸರಿಸಬೇಕು.

● ವಾಹನಗಳ ವೇಗವನ್ನು ಇಳಿಸುವ ಸಲುವಾಗಿ, ತಪಾಸಣೆಯ ಸ್ಥಳದ ಸುಮಾರು 100ರಿಂದ 150 ಮೀಟರ್ ಮೊದಲೇ ರಿಫ್ಲೆಕ್ಟಿವ್ ರಬ್ಬರ್ ಕೋನ್‌ಗಳನ್ನು ಹಾಗೂ ಸುರಕ್ಷತಾ ಸಲಕರಣೆಗಳ ಅಳವಡಿಕೆ, ರಾತ್ರಿ ಮತ್ತು ತಡರಾತ್ರಿಯ ಸಂದರ್ಭದಲ್ಲಿ ಸಂಚಾರ ಸಿಗ್ನಲ್ ದೀಪಗಳಿರುವ ಅಥವಾ ಜಂಕ್ಷನ್‌ಗಳ ಬದಿಯಲ್ಲೇ ವಾಹನಗಳನ್ನು ತಪಾಸಣೆ ಮಾಡಬೇಕೆಂದು ಆದೇಶದಲ್ಲಿ ನಮೂದಿಸಲಾಗಿದೆ.

● ಕಾನೂನು ಮತ್ತು ಸುವ್ಯವಸ್ಥೆ ಪೊಲೀಸರು ನಡೆಸುವ ನಾಕಾಬಂಧಿ ಪ್ರಕ್ರಿಯೆಗಳನ್ನು ಸಾಧ್ಯವಾದಷ್ಟು ಹೆದ್ದಾರಿಗಳಲ್ಲಿ ನಡೆಸಬಾರದು. ತಪಾಸಣೆಯ ಸಂದರ್ಭದಲ್ಲಿ ಇಂತಹ ಕಾನೂನು ಸುವ್ಯವಸ್ಥೆ ಪೊಲೀಸರ ನೆರವು ಪಡೆಯಬೇಕು ಎಂದು ರಾಜ್ಯದ ಎಲ್ಲಾ ಜಿಲ್ಲಾ ಘಟಕಗಳ ಪೊಲೀಸರಿಗೆ ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಸಲೀಂ ತಾಕೀತು ಮಾಡಿದ್ದಾರೆ.

ಎನ್‌ಜೆ ಆಸ್ಪತ್ರೆ ಪಡುವಾರಹಳ್ಳಿ ಘಟಕದಲ್ಲಿ ಆರೋಗ್ಯ ತಪಾಸಣೆ



ಎನ್‌ಜೆ ಆಸ್ಪತ್ರೆಯಿಂದ ಪಡುವಾರಹಳ್ಳಿ ಘಟಕದಲ್ಲಿ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಮೇ 31– ಮೈಸೂರಿನ ಎನ್‌ಜೆ ಆಸ್ಪತ್ರೆಯು ಪಡುವಾರಹಳ್ಳಿ ಘಟಕದಲ್ಲಿ ಶನಿವಾರ ಉಚಿತ ಆರೋಗ್ಯ ಶಿಬಿರ ಆಯೋಜಿಸಲಾಗಿತ್ತು. ಶಿಬಿರದಲ್ಲಿ 250ಕ್ಕೂ ಹೆಚ್ಚು ಜನ ಪಾಲ್ಗೊಂಡು ತಜ್ಞ ವೈದ್ಯರ ಸಮಾಲೋಚನೆ ಹಾಗೂ ಆರೋಗ್ಯ ತಪಾಸಣೆಯ ಪ್ರಯೋಜನ ಪಡೆದರು.

ಬೋನ್ ಮಿನರಲ್ ಡೆನ್ಸಿಟಿ, ಜಿಇಆರ್‌ಡಿ, ನರವಿಜ್ಞಾನ ಮೌಲ್ಯಮಾಪನ, ಬಾಡಿ ಮಾಸ್ ಇಂಡೆಕ್ಸ್, ಪಲ್ಸ್, ಎಸ್‌ಪಿಓ2, ಜಿಆರ್‌ಬಿಎಸ್, ಮಕ್ಕಳ ಆಂಥ್ರೊಪೊಮೆಟ್ರಿ ಪರೀಕ್ಷೆ ಇನ್ನಿತರ ಸೇವೆಗಳನ್ನು ನೀಡಲಾಗಿತ್ತು.

ಈ ವೇಳೆ ಆಸ್ಪತ್ರೆಯ ತಜ್ಞ ವೈದ್ಯ ಡಾ.ಮನು ಪ್ರಕಾಶ್ ಮಾತನಾಡಿ, ಜನ ಸಮುದಾಯದಿಂದ ದೊರೆತ ಉತ್ತಮ ಸ್ಪಂದನೆಯಿಂದ ನಮ್ಮ ಉತ್ಸಾಹ ಹೆಚ್ಚಿದೆ. ಸಮಾಜಕ್ಕೆ ಗುಣಮಟ್ಟದ ಆರೋಗ್ಯ ಸೇವೆಗಳನ್ನು ಒದಗಿಸುವ ತನ್ನ ನಿರಂತರ ಬದ್ಧತೆಯ ಭಾಗವಾಗಿ ಎನ್‌ಜೆ ಆಸ್ಪತ್ರೆಯು ಏರ್ಪಡಿಸಿದ್ದ ಈ ಶಿಬಿರದಲ್ಲಿ ಜನರಿಗೆ ವಿವಿಧ ತಪಾಸಣೆ ಹಾಗೂ ಮೌಲ್ಯಮಾಪನ ಉಚಿತವಾಗಿ ದೊರೆತಿದೆ. ಶಿಬಿರ ದಿಂದಾಗಿ ಹಲವರಿಗೆ ತಮ್ಮ ಆರೋಗ್ಯ ಸಮಸ್ಯೆಗಳನ್ನು ಮೊದಲ ಬಾರಿಗೆ ಗುರುತಿಸಲು ಸಾಧ್ಯವಾಗಿದೆ. ಪಡುವಾರಹಳ್ಳಿ ನಿವಾಸಿಗಳು ಸೇರಿದಂತೆ ಶಿಬಿರದ ಪ್ರಯೋಜನ ಪಡೆದವರೆಲ್ಲರೂ ಆಸ್ಪತ್ರೆಯ ಸಮಾಜ ಮುಖಿ ಕಾರ್ಯವನ್ನು ಪ್ರಶಂಸಿಸಿದ್ದು, ಮುಂಬರುವ ದಿನಗಳಲ್ಲೂ ಈ ರೀತಿಯ ಆರೋಗ್ಯ ಶಿಬಿರಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಎಸ್‌ಜೆಸಿಯಲ್ಲಿ ಜೆಎಸ್‌ಎಸ್ ಓಪನ್ ಡೇ: ತಮ್ಮ ಆವಿಷ್ಕಾರದ ಯಂತ್ರೋಪಕರಣ ಅನಾವರಣಗೊಳಿಸಿದ ವಿದ್ಯಾರ್ಥಿಗಳು

ಮೈಸೂರು, ಮೇ 31(ಎಂಟಿವೈ)– ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿ(ಎಸ್‌ಜೆಸಿ) ಆವರಣದಲ್ಲಿ ಶನಿವಾರ ಆಯೋಜಿಸಿದ್ದ 'ಜೆಎಸ್‌ಎಸ್ ಓಪನ್ ಡೇ' ಕಾರ್ಯಕ್ರಮದಲ್ಲಿ ಕಾಲೇಜಿನ ವಿದ್ಯಾರ್ಥಿಗಳು ಆವಿಷ್ಕರಿಸಿದ ತಂತ್ರಜ್ಞಾನ ಹಾಗೂ ಯಂತ್ರೋಪಕರಣಗಳು ಗಮನ ಸೆಳೆದವು.

ಮೈಸೂರು ಮಾನಸ ಗಂಗೋತ್ರಿಯಲ್ಲಿರುವ ಜೆಎಸ್‌ಎಸ್(ಎಸ್‌ಜೆಸಿ) ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಾಲೇಜಿನ ವಿವಿಧ ವಿಭಾಗಗಳ ವಿದ್ಯಾರ್ಥಿಗಳು ವಿಜ್ಞಾನ, ತಂತ್ರಜ್ಞಾನ ಮತ್ತು ಆಟೊಮೊಬೈಲ್ ಕ್ಷೇತ್ರದಲ್ಲಿ ಆವಿಷ್ಕರಿಸಿರುವ ಯಂತ್ರೋಪಕರಣಗಳ ಮಾದರಿಯನ್ನು ಪ್ರದರ್ಶಿಸಿ ಪ್ರಾತ್ಯಕ್ಷಿಕೆ ನೀಡುವ ಮೂಲಕ ತಮ್ಮಲ್ಲಿರುವ ಪ್ರತಿಭೆಯನ್ನು ಅನಾವರಣಗೊಳಿಸಿದರು.

ಓಪನ್ ಡೇ ಅಂಗವಾಗಿ ಎಸ್‌ಜೆಸಿ ಆವರಣವನ್ನು ಬಣ್ಣ ಬಣ್ಣದ ತಳಿರು, ತೋರಣಗಳಿಂದ ಅಲಂಕರಿಸಲಾಗಿತ್ತು. ಎಸ್‌ಜೆಸಿ ಕಾಲೇಜಿನ ಮೆಕ್ಯಾನಿಕಲ್ ಡಿಪಾರ್ಟ್‌ಮೆಂಟ್ ಇಂಜಿನಿಯರಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಮಹೇಶ್ ವಿ.ಎಂ ಅವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳಾದ ಪ್ರಜ್ವಲ್, ರಮೇಶ್, ರಶ್ಮಿ, ದರ್ಶನ್ ಎಂಬುವರು ಸಾಂಬರ್ ತಯಾರಿಸುವ ಯಂತ್ರ ಆವಿಷ್ಕರಿಸಿ ಪ್ರದರ್ಶನಕ್ಕಿಟ್ಟಿದ್ದಾರೆ. 'ಫ್ಯಾಬ್ರಿಕೇಷನ್ ಅಂಡ್ ಡೆವಲಪ್‌ಮೆಂಟ್ ಆಫ್ ಆಟೋಮೆಟಿಕ್ ಕರಿ ಮೇಕಿಂಗ್ ಮೆಷಿನ್' ಹೆಸರಿನಲ್ಲಿ, ಪೈಥಾನ್ ಕೋಡಿಂಗ್ ಅಥವಾ ಸಿ ಪ್ರೋಗ್ರಾಂ ಬಳಸಿ ತಯಾರಿಸಿರುವ ಈ ಯಂತ್ರ ಸ್ವಯಂ ಚಾಲನೆಯಿಂದ ತರಕಾರಿ ಕತ್ತರಿಸಿ, ಒಗ್ಗರಣೆ ಮಾಡಿ, ಸಾಂಬರ್ ಪೌಡರ್ ಹಾಗೂ ರುಚಿಗೆ ತಕ್ಕಂತೆ ಉಪ್ಪು ಹಾಕಿ ಸಾಂಬರ್ ತಯಾರಿಸುತ್ತದೆ. ಅದಕ್ಕಾಗಿ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ. ಹೋಟೆಲ್ ಹಾಗೂ ಮಠ ಸೇರಿದಂತೆ ಧಾರ್ಮಿಕ ಸಂಸ್ಥೆಗಳಲ್ಲಿ ಅನ್ನ ದಾಸೋಹ ಮಾಡುವ ವೇಳೆ ಈ ಯಂತ್ರವನ್ನು ಬಳಸಿಕೊಳ್ಳಬಹುದಾಗಿದೆ.



ಸಾಂಬರ್ ತಯಾರಿಸುವ ಯಂತ್ರ ಆವಿಷ್ಕರಿಸಿರುವ ವಿದ್ಯಾರ್ಥಿಗಳು.



ಕಬ್ಬು ಕತ್ತರಿಸುವ ಯಂತ್ರ.

ಕಬ್ಬು ಕಟಾವು ಯಂತ್ರ: ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಎ.ಎಸ್.ಬಿಂದು ಅವರ ಮಾರ್ಗದರ್ಶನದಲ್ಲಿ ವಿಭಾಗದ ವಿದ್ಯಾರ್ಥಿಗಳಾದ ಸಲ್ಮಾನ್ ಎಫ್., ಕಿರಣ್ ಎನ್., ರೋಶನ್ ಸಿಂಗ್, ಚಂದನ್ ಜೆ. ತಂಡ 'ಡಿಸೈನ್ ಅಂಡ್ ಫ್ಯಾಬ್ರಿಕೇಷನ್ ಆಫ್ ಶುಗರ್ ಕೇನ್ ಹಾರ್ವೆಸ್ಟಿಂಗ್ ಮಿಷನ್ ಟೂಲ್' ಹೆಸರಿನ ಕಬ್ಬು ಕತ್ತರಿಸುವ ಯಂತ್ರ ಆವಿಷ್ಕರಿಸಿದ್ದಾರೆ. ಈ ಯಂತ್ರದಿಂದ ಕಬ್ಬಿನ ಗದ್ದೆಯಲ್ಲಿ ಬೆಳೆದಿರುವ ಕಬ್ಬನ್ನು ಕತ್ತರಿಸುವಾಗ ಕಬ್ಬಿನ ಮೇಲ್ಭಾಗದಲ್ಲಿ ಬೆಳೆದಿರುವ ಸೋಗು(ಎಲೆ)ವನ್ನು ಬೇರ್ಪಡಿಸಿ, ಕೇವಲ ಕಬ್ಬನ್ನು ಮಾತ್ರ ಪ್ರತ್ಯೇಕಿಸುವ ಸಾಮರ್ಥ್ಯ ಹೊಂದಿದೆ.

ಬೆಳೆ ಹಾನಿ ಮಾಡುವ ಪಕ್ಷಿ ಓಡಿಸುವ ಯಂತ್ರ: ರೈತರು ಹೊಲ–ಗದ್ದೆಯಲ್ಲಿ ಬೆಳೆದ ಬೆಳೆಗಳನ್ನು ತಿನ್ನಲು ಬರುವ ಪಕ್ಷಿ ಹಾಗೂ ಪ್ರಾಣಿಗಳು ಓಡಿಸುವುದಕ್ಕಾಗಿ ಇಂಡಸ್ಟ್ರಿಯಲ್ ಪ್ರೊಡಕ್ಷನ್ ವಿಭಾಗದ ವಿದ್ಯಾರ್ಥಿನಿಯರಾದ ಸಹನ, ಅನನ್ಯ ಆರ್., ನಿಶ್ಚಿತ ಎಂ.ಎಸ್., ವರ್ಷ ಡಿ. ಅವರ ತಂಡ 'ಡೆವಲಪ್ಡ್ ಕ್ಯಾಮರಾ ಸ್ಕೇರ್‌ಕ್ರೌ' ಯಂತ್ರ ತಯಾರಿಸಿದೆ. ಈ ಯಂತ್ರವನ್ನು ಹೊಲ–ಗದ್ದೆಯಲ್ಲಿ ಅಳವಡಿಸಿದರೆ, ಕ್ಯಾಮರಾದಲ್ಲಿ ಪಕ್ಷಿ ಅಥವಾ ಪ್ರಾಣಿ ಬಂದಾಗ ಮಾತ್ರ ಶಬ್ದ ಮಾಡಿ, ಓಡಿಸುತ್ತದೆ. ಪ್ರಸ್ತುತ ರೈತರು ಮೈಕ್ ಅಳವಡಿಸಿ ರಾತ್ರಿಯಿಡೀ ಶಬ್ದ ಬರುತ್ತದೆ. ಇದರಿಂದ ಕೆಲವು ಸಂದರ್ಭದಲ್ಲಿ ಬ್ಯಾಟರಿ ಡೌನ್ ಆಗುವ ಸಾಧ್ಯತೆಯೂ ಇರುತ್ತದೆ. ಆದರೆ, ವಿದ್ಯಾರ್ಥಿನಿಯರು ತಯಾರಿಸಿರುವ ಈ ಯಂತ್ರ ಪಕ್ಷಿ–ಪ್ರಾಣಿ ಬಂದಾಗ ಮಾತ್ರ ಶಬ್ದ ಮಾಡುವುದರಿಂದ ಬ್ಯಾಟರಿ ವೀಕ್ ಆಗುವುದನ್ನು ತಪ್ಪಿಸಬಹುದು.

ಓಪನ್ ಡೇ ಅಂಗವಾಗಿ ಎಸ್‌ಜೆಸಿ ವಿವಿಧ ವಿಭಾಗಗಳ ವಿದ್ಯಾರ್ಥಿಗಳು ಆವಿಷ್ಕರಿಸಿದ ಬ್ಲೂಟೂತ್ ಗ್ರಾಸ್ ಕಟರ್, ರೋಬೋಟ್, ಮಲ್ಟಿಪಲ್ ಅಗ್ರಿಕಲ್ಚರಲ್ ಎಕ್ಯೂಪ್‌ಮೆಂಟ್ ಸೇರಿದಂತೆ ಸುಮಾರು 90ಕ್ಕೂ ಹೆಚ್ಚು ವಿವಿಧ ಆವಿಷ್ಕಾರಗಳ ಪ್ರದರ್ಶನ ಏರ್ಪಡಿಸಿ ಗಮನ ಸೆಳೆದರು.

ಪುಟ್ಟ ವಿಮಾನ ಹಾರಾಟ: ಓಪನ್ ಡೇ ಅಂಗವಾಗಿ ಕಾಲೇಜಿನ ಮೈದಾನದಲ್ಲಿ ವಿದ್ಯಾರ್ಥಿಗಳೇ ತಯಾರಿಸಿ ಚಿಕ್ಕ ಚಿಕ್ಕ ವಿಮಾನಗಳ ಹಾರಾಟ ಪ್ರದರ್ಶನ ಏರ್ಪಡಿಸಲಾಗಿತ್ತು. ರಿಮೋಟ್ ಕಂಟ್ರೋಲರ್ ಬಳಸಿ ವಿದ್ಯಾರ್ಥಿಗಳು ಏರ್ ಶೋ ನಡೆಸುವ ಮೂಲಕ ಅಪಾರ ಸಂಖ್ಯೆಯ ವಿದ್ಯಾರ್ಥಿಗಳನ್ನು ರಂಜಿಸಿದರು. ಲೋಹದ ಹಕ್ಕಿಗಳಂತೆ ಆಗಸದಲ್ಲಿ ಪುಟ್ಟ ವಿಮಾನಗಳು ಸಾಹಸ ಪ್ರದರ್ಶಿಸಿದವು.

ಎಸ್.ಬಸವರಾಜು ಅವರಿಗೆ ಹುಟ್ಟುಹಬ್ಬದ ಶುಭಾಶಯ...



ಬಸವಮಾರ್ಗ ಫೌಂಡೇಶನ್ ಸಂಸ್ಥಾಪಕರೂ ಆದ ಇಂಡಿಯನ್ ಟಿವಿಯ ಛೇರ್ಮನ್ ಎಸ್.ಬಸವರಾಜು ಅವರಿಗೆ ಬಿಜೆಪಿ ಯುವ ಘಟಕದ ನಿಕಟ ಪೂರ್ವ ಅಧ್ಯಕ್ಷರಾದ ಎಂ.ಜೆ.ಕಿರಣ್ ಗೌಡ, ಹೆಬ್ಬಾಳು ಸ್ನೇಹಿತರು ಬೃಹತ್ ಹಾರ ಹಾಕಿ ಅಭಿನಂದಿಸಿ, ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ಮುಖಂಡರಾದ ಶ್ರೀಧರ್, ಮಾಯಪ್ಪ, ಪ್ರವೀಣ್, ಆದರ್ಶ, ಹರೀಶ, ಅವಿನಾಶ್, ಶ್ರೀಕಾಂತ್, ದಿನೇಶ್, ಶ್ರೀಧರ್ ಇನ್ನಿತರರು ಉಪಸ್ಥಿತರಿದ್ದರು.

ಏಕಲವ್ಯನಗರದ ನಿರ್ಗತಿಕ ಮಹಿಳೆಯರಿಗೆ ಮಾಸಾಶನ ವಿತರಣೆ



ಏಕಲವ್ಯನಗರದ ನಿರ್ಗತಿಕ ಮಹಿಳೆಯರಿಗೆ ಶಾಸಕ ಜಿ.ಟಿ.ದೇವೇಗೌಡರು ಮಾಸಾಶನಗಳ ಮಂಜೂರಾತಿ ಪತ್ರ ವಿತರಿಸಿದರು.

ಮೈಸೂರು: ಮೈಸೂರಿನ ಏಕಲವ್ಯನಗರದ ನಿರ್ಗತಿಕ ಮಹಿಳೆಯರಿಗೆ ನಾಗನಹಳ್ಳಿ ಸರ್ಕಾರಿ ಸ್ಕೂಲ್ ಆವರಣದಲ್ಲಿ ಶಾಸಕ ಜಿ.ಟಿ.ದೇವೇಗೌಡರು ಮಾಸಾಶನಗಳ ಮಂಜೂರಾತಿ ಪತ್ರ ವಿತರಿಸಿದರು.

ಬಳಿಕ ಮಾತನಾಡಿದ ಅವರು, ಏಕಲವ್ಯನಗರದಲ್ಲಿ ಅಲೆಮಾರಿ ಸಮುದಾಯಗಳಿಗೆ ಸೇರಿದ ಕುಟುಂಬಗಳು ಹೆಚ್ಚು ವಾಸ ಮಾಡುತ್ತಿದ್ದು, ಇವರಿಗೆ ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ವಾಸಿಸಲು ಮನೆ ಇತರೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗಿದೆ. ನಿರ್ಗತಿಕ ಅಲೆಮಾರಿ ಕುಟುಂಬಗಳು ಜೀವನ ಸಾಗಿಸಲು ಇವರ ಪುರಾತನ ಕಲೆಗಳಾದ ಗೊಂಬೆಯಾಡಿಸುವುದು, ಬೀದಿ ನಾಟಕ, ಹಗಲು ವೇಷ, ಕೋಲೆಬಸವ, ತಂಬೂರಿ ಮುಂತಾದ ಕಲೆಗಳನ್ನು ಸಮಾಜದಲ್ಲಿ ಪ್ರದರ್ಶನ ಮಾಡಿ ಜೀವನ ಕಟ್ಟಿಕೊಳ್ಳುವ ಸ್ಥಿತಿಯಲ್ಲಿ ಇರುವಾಗಲೇ ಟಿ.ವಿ. ಮೊಬೈಲ್ ಮಾಧ್ಯಮಗಳಿಂದ ಇವರ ಪುರಾತನ ಕಲೆಗಳು ನಶಿಸಿ ಹೋಗುತ್ತಿವೆ. ಇವರು ಜೀವನ ಸಾಗಿಸಲು ಕಷ್ಟಪಡುವ ಸ್ಥಿತಿಯಲ್ಲಿದ್ದಾರೆ. ಇಂತಹ ನಿರ್ಗತಿಕ ಕುಟುಂಬಗಳಲ್ಲಿ ಕೆಲವು ಕುಟುಂಬಗಳು ಕೈ ಹಿಡಿದ ಗಂಡನಿಂದಲೇ ಮೋಸಕ್ಕೆ ಒಳಗಾಗಿ ಚಿಕ್ಕಮಕ್ಕಳನ್ನು ಕೂಲಿ ನಾಲಿ ಮಾಡಿ ಸಾಕುತ್ತಾ ತಮ್ಮ ದಿನನಿತ್ಯದ ಜೀವನಕ್ಕೆ ಕಷ್ಟಪಡುವ ಸ್ಥಿತಿಯಲ್ಲಿದ್ದರು.

ಇವರಿಗೆ ಕಂದಾಯ ಇಲಾಖೆ ವತಿಯಿಂದ ಮಾಸಾಶನಗಳನ್ನು ಮಂಜೂರು ಮಾಡಿಸಿಕೊಡುವಂತೆ ದಸಂಸದ ನಿಂಗರಾಜ್ ಮಲ್ಲಾಡಿ ಮತ್ತು ಅವರ ತಂಡ ಮನವಿ ಮಾಡಿದ್ದು, ತಕ್ಷಣವೇ ತಹಸೀಲ್ದಾರ್ ಮಹೇಶ್ ಅವರೊಂದಿಗೆ ಮಾತನಾಡಿ ಸ್ಥಳ ತನಿಖೆ ಮಾಡಿಸಿ ನಿರ್ಗತಿಕ ಮಹಿಳೆಯರಿಗೆ ಮಾಸಾಶನ ಮಂಜೂರು ಮಾಡಿಸಿಕೊಡುವಂತೆ ನಿರ್ದೇಶಿಸಿದ್ದೇನೆ. ಇದರ ಪರಿಣಾಮವಾಗಿ ಮೊದಲನೇ ಹಂತದಲ್ಲಿ 12 ಮಂದಿ ನಿರ್ಗತಿಕ ಮಹಿಳೆಯರಿಗೆ ಮನಸ್ವಿನಿ ಯೋಜನೆಯಡಿ ಮಾಸಾಶನದ ಮಂಜೂರಾತಿ ಪತ್ರವನ್ನು ಮಾಡಿಕೊಡಲಾಗಿದೆ. ಹಂತ ಹಂತವಾಗಿ ಉಳಿದ ನಿರ್ಗತಿಕರಿಗೆ ಮಾಸಾಶನ ಮಂಜೂರು ಮಾಡಿಕೊಡಲಾಗುವುದು ಎಂದರು.

ದಸಂಸ ಜಿಲ್ಲಾ ಸಂಚಾಲಕರಾದ ನಿಂಗರಾಜ್ ಮಲ್ಲಾಡಿ ಮಾತನಾಡಿ, ಹುಟ್ಟು ಸಾವುಗಳಿಗೆ ದಾಖಲೆಗಳೇ ಇಲ್ಲದೆ ಮರದ ಕೆಳಗೆ, ಪಾಳು ಮಂಟಪಗಳಲ್ಲಿ, ಶಾಲೆ ಜಗುಲಿಗಳ ಮೇಲೆ ನೆಲೆಯಿಲ್ಲದೆ ಮಲಗುತ್ತಿದ್ದ ಈ ನಿರ್ಗತಿಕ ಅಲೆಮಾರಿ ಕುಟುಂಬಗಳಿಗೆ ದಸಂಸ ಹೋರಾಡಿ ಶಾಶ್ವತವಾದ ನೆಲೆ ಕಲ್ಪಿಸಿಕೊಡಲಾಗಿದೆ ಎಂದು ತಿಳಿಸಿದರು. ಈ ವೇಳೆ ಮಾಜಿ ಜಿಲ್ಲಾ ಪಂಚಾಯ್ತಿ ಸದಸ್ಯರಾದ ನಾಗನಹಳ್ಳಿ ದಿನೇಶ್, ಗ್ರಾಮ ಪಂಚಾಯ್ತಿ ಅಧ್ಯಕ್ಷರಾದ ಶ್ರೀಮತಿ ರಶ್ಮಿ ಮಂಜುನಾಥ್, ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷ ಭಾಸ್ಕರ್, ಪಿ.ಡಿ.ಓ ಭವ್ಯಾ, ಅಲೆಮಾರಿ ಸಂಘಗಳ ರಾಜ್ಯ ಯುವ ಅಧ್ಯಕ್ಷ ವೈ.ಕುಮಾರ್, ಏಕಲವ್ಯ ನಗರದ ಮುಖಂಡರಾದ ಶ್ರೀಧರ್, ನಂದನ್ ಕುಮಾರ್, ಅಂಗವಿಕಲರ ಸಂಘದ ಶಿವಶೆಟ್ಟಿ ಕೆರೆಯೂರು, ಕುಮಾರ, 12 ಮಂದಿ ನಿರ್ಗತಿಕ ಮಹಿಳೆಯರು ಈ ಸಂದರ್ಭದಲ್ಲಿ ಹಾಜರಿದ್ದು, ಮಂಜೂರಾತಿ ಪತ್ರವನ್ನು ಪಡೆದುಕೊಂಡರು.

ಹೊಲೆಯ, ಮಾದಿಗ ಸಮುದಾಯದ ವಿರುದ್ಧ ಒಡಕುಂಟು ಮಾಡುತ್ತಿರುವ ಭಾಸ್ಕರ್ ಪ್ರಸಾದ್ ವಿರುದ್ಧ ಪ್ರತಿಭಟನೆ

ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ವತಿಯಿಂದ ವಾಗ್ದಾಳಿ

ಮೈಸೂರು, ಮೇ31(ಜಿಎ)–ಹೊಲೆಯ ಮತ್ತು ಮಾದಿಗ ಸಮುದಾಯದ ನಡುವೆ ಒಡಕುಂಟು ಮಾಡುತ್ತಿರುವ ಮಾದಿಗ ದಂಡೂರ್ ಸಮಿತಿ ಮುಖಂಡ ಬಿ.ಆರ್. ಭಾಸ್ಕರ್ ಪ್ರಸಾದ್ ವಿರುದ್ಧ ಪ್ರತಿಭಟನಾತ್ಮಕವಾಗಿ ಹೊಲೆಯ, ಮಾದಿಗರ ಸಮಾವೇಶ ಮಾಡುವುದಾಗಿ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಹೊಲೆಯ, ಮಾದಿಗ ಮುಖಂಡರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಪೋಸ್ಟರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಸಮಾವೇಶದ ಮೂಲಕ ಅಣ್ಣ ತಮ್ಮಂದಿರಾದ ಹೊಲೆಯ, ಮಾದಿಗರ ಬಾಂಧವ್ಯ ಪ್ರದರ್ಶನ ಮಾಡುತ್ತೇವೆ. ಒಳ ಮೀಸಲಾತಿಗೆ ಆಗ್ರಹಿಸಿ ನಡೆಸುತ್ತಿರುವ ಪಾದಯಾತ್ರೆಯನ್ನು ಭಾಸ್ಕರ್ ಪ್ರಸಾದ್ ಹಣ ಮಾಡುವ ದಂಧೆ ಮಾಡಿಕೊಂಡಿದ್ದಾರೆ. ಆರ್‌ಎಸ್‌ಎಸ್, ಬಿಜೆಪಿಯಿಂದ ಹಣ ಪಡೆದಿದ್ದಾರೆ. ಆದರೆ, ಸಮುದಾಯದ ಮುಂದೆ ಭಿಕ್ಷೆ ಬೇಡುವ ನಾಟಕವಾಡಿ ಬಡ, ಮುಗ್ಧ ಮಾದಿಗ ಜನರನ್ನು ವಂಚನೆ ಮಾಡುತ್ತಿದ್ದಾರೆ ಎಂದು ಹೇಳಿದರು.



ಎನ್.ಭಾಸ್ಕರ್

ವಕೀಲ ಶಿವಪ್ರಸಾದ್ ಮಾತನಾಡಿ, ಭಾಸ್ಕರ್‌ಪ್ರಸಾದ್ ಅವರನ್ನು ಮೈಸೂರಿಗೆ ಕರೆದವರು ಯಾರು? ಐತಿಹಾಸಿಕವಾಗಿ ಚಾರಿತ್ರಿಕವಾದ ಮೈಸೂರಲ್ಲಿ ಅಸಂಬದ್ಧವಾದ ಅರೆಬೆತ್ತಲೆ ಪ್ರತಿಭಟನೆ ಯಾಕೇ ಮಾಡಿದಿರಿ? ನಾವೆಲ್ಲಾ ಸುಮ್ಮನಿದ್ದೇವೆ ಎಂದು ನೀತಿಪಾಠ ಮಾಡಲು ಬಂದೀರ? ನಿಮ್ಮಿಂದ ನಾವು ಪಾಠ ಕಲಿಯಬೇಕಾದ ಅಗತ್ಯವಿಲ್ಲ ಎಂದು ಕಿಡಿಕಾರಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಟೀಕಿಸುವ ಭಾಸ್ಕರ್ ಪ್ರಸಾದ್ ಅವರು ಕೇಂದ್ರ ಸಚಿವರಾಗಿದ್ದ ಎ.ನಾರಾಯಣಸ್ವಾಮಿ ಅವರು ಒಳ ಮೀಸಲು ಸಾಧ್ಯವಿಲ್ಲ ಎಂದಾಗ ಏನು ಮಾಡುತ್ತಿದ್ದೀರಿ? ಎಂದು ಪ್ರಶ್ನಿಸಿದರು.

ಮಾಜಿ ಉಪಮೇಯರ್ ಶ್ರೀಧರ್ ಮಾತನಾಡಿ, ಹೊಲೆಯ, ಮಾದಿಗ ಸಮುದಾಯದ ನಡುವೆ ವಿಭಜನೆಯ ಕೆಲಸವನ್ನೂ ಯಾರು ಮಾಡಬಾರದು. ಹಿರಿಯರಾದ ಹೆಚ್.ಸಿ.ಮಹದೇವಪ್ಪ, ಕೆ.ಎಚ್.ಮುನಿಯಪ್ಪ ಅವರನ್ನು ಬೈದರೆ ತಾನು ನಾಯಕನಾಗುತ್ತೇನೆ ಎನ್ನುವುದು ಭ್ರಮೆ ಎಂದರು.

ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಹುಣಸೂರು ಬಸವಣ್ಣ ಮಾತನಾಡಿ, ದಲಿತರಿಗೆ ಸಾಮಾಜಿಕ ನ್ಯಾಯ ಕೊಟ್ಟ ಕಾಂಗ್ರೆಸ್ ಸರ್ಕಾರ ಟೀಕಿಸುವುದು ಖಂಡನೀಯ. ಹೊಲೆಯ, ಮಾದಿಗರು ಅನ್ಯೋನ್ಯವಾಗಿದ್ದೇವೆ. ಮೀಸಲಾತಿ ಸವಲತ್ತು ಸಮಾನ ಹಂಚಿಕೆಗಾಗಿ ಬದ್ಧರಾಗಿದ್ದೇವೆ. ನಿಮ್ಮ ಸ್ವಾರ್ಥಕ್ಕೆ ಸಮಾಜವನ್ನು ಬಲಿಕೊಡಬೇಡಿ ಎಂದು ಹೇಳಿದರು.

ಸಿಎಂ ಸಿದ್ದರಾಮಯ್ಯ, ಸಚಿವರಾದ ಹೆಚ್.ಸಿ.ಮಹದೇವಪ್ಪ, ಕೆ.ಎಚ್.ಮುನಿಯಪ್ಪ ಅವರ ಬಗ್ಗೆ ಅಸಭ್ಯವಾಗಿ ಮಾತಾಡುವುದು ಖಂಡನೀಯ. ನಿಮ್ಮ ಹೋರಾಟದಿಂದ ಒಳ ಮೀಸಲು ಜಾರಿಯಾಗುತ್ತದೆ ಎಂಬುದು ಭ್ರಮೆ. ಅದನ್ನು ಬಂಡವಾಳ ಮಾಡಿಕೊಂಡು ಪ್ರತಿಭಟನೆ ಮಾಡುವುದು ಶೋಭೆಯಲ್ಲ ಎಂದರು.

ಸುದ್ದಿಗೋಷ್ಠಿಯಲ್ಲಿ ಪಾಲಿಕೆ ಮಾಜಿ ಸದಸ್ಯರಾದ ಸುನಂದಕುಮಾರ್, ಸತ್ಯರಾಜ್, ಶ್ರೀಧರ್, ವಕೀಲರಾದ ಪುಟ್ಟರಸ, ಗಂಗಾಧರ, ಮಹದೇವ ಉಪಸ್ಥಿತರಿದ್ದರು.

ಕಮಲ್‌ಹಾಸನ್ ಹೇಳಿಕೆಗೆ ಆಕ್ಷೇಪ



ಮೈಸೂರು, ಮೇ 31(ಆರ್‌ಕೆ)–'ಕನ್ನಡ ಭಾಷೆ ಹುಟ್ಟಿದ್ದು ತಮಿಳಿನಿಂದ' ಎಂಬ ಹೇಳಿಕೆ ನೀಡಿರುವ ನಟ ಕಮಲ್‌ಹಾಸನ್ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ರೀತ್ಯಾ ಕ್ರಮ ಕೈಗೊಳ್ಳಬೇಕೆಂದು ಮಾಜಿ ಮೇಯರ್ ಆರ್.ಲಿಂಗಪ್ಪ ಒತ್ತಾಯಿಸಿದ್ದಾರೆ. ಕನ್ನಡ ಭಾಷೆಯ ಇತಿಹಾಸ, ಪರಂಪರೆ, ಬೆಳೆದು ಬಂದ ದಾರಿ ತಿಳಿಯದೇ ಪ್ರಬುದ್ಧ ನಾಯಕ ನಟರೆನಿಸಿಕೊಂಡಿರುವ ಕಮಲ್‌ಹಾಸನ್ ನಮ್ಮ ಮಾತೃಭಾಷೆ ಬಗ್ಗೆ ಹಗುರವಾಗಿ ಮಾತನಾಡಿ, ಕನ್ನಡಿಗರ ಭಾವನೆಗೆ ಧಕ್ಕೆ ತಂದಿದ್ದಾರಲ್ಲದೆ, ಎರಡು ರಾಜ್ಯಗಳ ನಡುವೆ ಭಾಷಾ ಸಂಘರ್ಷ ಉಂಟು ಮಾಡಿದ್ದಾರೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅವರು, ತಕ್ಷಣವೇ ಬಹಿರಂಗ ಸಭೆಯಲ್ಲಿ ಕನ್ನಡಿಗರ ಕ್ಷಮೆ ಕೇಳಬೇಕಿತ್ತು. ರಾಜ್ಯಾದ್ಯಂತ ತೀವ್ರ ಆಕ್ರೋಶ ವ್ಯಕ್ತವಾಗುತ್ತಿದ್ದರೂ 'ನಾನು ಕ್ಷಮೆ ಕೇಳುವುದಿಲ್ಲ' ಎನ್ನುತ್ತಿರುವುದು ಉದ್ಧಟತನದ ಪರಮಾವಧಿಯಾಗಿದೆ ಎಂದು ಹೇಳಿದ್ದಾರೆ.



ಮೈಸೂರು ವಿವಿ ನಡೆಸಿದ ಬಿಸಿಎ ಪದವಿಯಲ್ಲಿ ಅತೀ ಹೆಚ್ಚು ಅಂಕ ಪಡೆದು ಚಿನ್ನದ ಪದಕ ಪಡೆದ ಸಂದೀಪ್ ಎಸ್.ವಿ. ಅವರನ್ನು ಮಾಜಿ ಕಾರ್ಪೋರೇಟರ್ ವಿ.ಲೋಕೇಶ್‌ಪಿಯಾ ಅಭಿನಂದಿಸಿ, 25 ಸಾವಿರ ನಗದು ಪ್ರೋತ್ಸಾಹಧನ ನೀಡಿದರು. ಈ ವೇಳೆ ಎಸ್.ಸಿ.ಬಸವರಾಜು, ರಾಮಚಂದ್ರ, ಅಪ್ಪಣ್ಣ, ವಿನೋದ್, ಮಹಾದೇವಸ್ವಾಮಿ, ಕೃಷ್ಣ, ಕಡಕೊಳ ಕುಮಾರಸ್ವಾಮಿ, ಜಗದೀಶ್‌ಮೂರ್ತಿ, ರಾಘವ, ರಂಗಸ್ವಾಮಿ ಇತರರು ಉಪಸ್ಥಿತರಿದ್ದರು.

ಸಿಂಚನಾಗೆ ಪ್ರಶಸ್ತಿ



ಮೈಸೂರು: ಬಳ್ಳಾರಿ ಜಿಲ್ಲೆ ತಾಲೂರಿನ ನಕ್ಷತ್ರ ಸಾಹಿತ್ಯ, ಶೈಕ್ಷಣಿಕ, ಸಾಂಸ್ಕೃತಿಕ ಟ್ರಸ್ಟ್‌ನಿಂದ ನಡೆದ ಕಾರ್ಯಕ್ರಮದಲ್ಲಿ ಪಿರಿಯಾಪಟ್ಟಣ ತಾಲೂಕಿನ ಎನ್.ಗೊರವಳ್ಳಿಯ ಯುವ ಲೇಖಕಿ ಜಿ. ಸಿಂಚನಾ ಅವರ ಕನ್ನಡ ಸಾಹಿತ್ಯ ಕ್ಷೇತ್ರದ ಸಾಧನೆಗೆ "ಸಾಹಿತ್ಯ ನವ ಚೇತನ ರಾಷ್ಟ್ರ ಪ್ರಶಸ್ತಿ" ನೀಡಿ ಗೌರವಿಸಲಾಯಿತು.

ಮೈಸೂರಲ್ಲಿ ಪಿಜಿಸಿಇಟಿ, ಡಿಸಿಇಪಿ

ಮೈಸೂರು, ಮೇ 31(ಆರ್‌ಕೆ)–ಮೈಸೂರಿನ 12 ಕೇಂದ್ರಗಳಲ್ಲಿ ಇಂದು ಮಧ್ಯಾಹ್ನ ಪಿಜಿಸಿಇಟಿ, ಡಿಸಿಇಪಿ ಹಾಗೂ ಸಮಾಜ ಕಲ್ಯಾಣ ಇಲಾಖೆ ಪರೀಕ್ಷೆಗಳು ನಡೆದವು.

ಮಧ್ಯಾಹ್ನ 2ರಿಂದ 5 ಗಂಟೆವರೆಗೆ 6 ಕೇಂದ್ರಗಳಲ್ಲಿ ಪಿಜಿಸಿಇಟಿ ಹಾಗೂ 1 ಕೇಂದ್ರದಲ್ಲಿ ಡಿಸಿಇಪಿ ಯಾವುದೇ ಗೊಂದಲಗಳಿಲ್ಲದೇ ಮುಕ್ತಾಯಗೊಂಡವು. ಮಧ್ಯಾಹ್ನ 2.30 ರಿಂದ 4.30 ಗಂಟೆವರೆಗೆ ಸಮಾಜ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳಿಗಾಗಿ 5 ಕೇಂದ್ರಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆದವು. ಪದವಿ ಪೂರ್ವ ಮತ್ತು ವೃತ್ತಿ ಶಿಕ್ಷಣ ಇಲಾಖೆ ಮೈಸೂರು ಜಿಲ್ಲಾ ಉಪ ನಿರ್ದೇಶಕ ಎಂ.ಮರಿಸ್ವಾಮಿ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಶಿಸ್ತುಬದ್ಧವಾಗಿ ಪರೀಕ್ಷಾ ಪ್ರಕ್ರಿಯೆ ಕುರಿತು ಪರಿಶೀಲಿಸಿದರು. ಪ್ರತೀ ಕೇಂದ್ರದಲ್ಲೂ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿತ್ತು.


ಸಾಹಿತಿ ಎಚ್.ಎಸ್.ವೆಂಕಟೇಶಮೂರ್ತಿ ಅವರಿಗೆ ಕನ್ನಡ ಲೇಖಕಿಯರ ಟ್ರಸ್ಟ್ ವತಿಯಿಂದ ಸಂತಾಪ



ಮೈಸೂರು: ಸಾಹಿತಿ ಎಚ್.ಎಸ್.ವೆಂಕಟೇಶಮೂರ್ತಿ ಅವರ ನಿಧನಕ್ಕೆ ಕನ್ನಡ ಲೇಖಕಿಯರ ಟ್ರಸ್ಟ್ ವತಿಯಿಂದ ಸಂತಾಪ ಸೂಚಿಸಲಾಯಿತು. ಈ ವೇಳೆ ಟ್ರಸ್ಟ್‌ನ ಅಧ್ಯಕ್ಷೆ ಡಾ.ಪದ್ಮಾಶೇಖರ್ ಮಾತನಾಡಿ, ಇರಬೇಕು ಇರುವಂತೆ ತೊರೆದು ಸಾವಿರ ಚಿಂತೆ ಮಳೆಸುರಿಸಿ ಹಗುರಾದ ಮುಗಿಲಿನಂತೆ ಎಂದು ಬದುಕ ಪಾಠ ಕಲಿಸಿದ ಸಾಹಿತಿ ವೆಂಕಟೇಶಮೂರ್ತಿ ಅವರು ನಾಡು ಕಂಡ ಅಪರೂಪದ ಹೃದಯವಂತ ಸಾಹಿತಿ. ಭಾವಗೀತೆ ಪ್ರಕಾರಕ್ಕೆ ಧ್ವನಿರಮ್ಯತೆ ತಂದಿಕೊಟ್ಟ ಸ್ವಾಸ್ಥ್ಯ ಮನಸ್ಸಿನ ಸಾಂತ್ವನದ ಕವಿ. ಅವರ ಅಗಲಿಕೆ ನಿಜದರ್ಥದಲ್ಲಿ ಕನ್ನಡ ಸಾಹಿತ್ಯ ಕನ್ನಡ ಕ್ಷೇತ್ರ ಕಾದ ಬಹುದೊಡ್ಡ ನಷ್ಟ ಎಂದರು.


ದೇಶ - ವಿದೇಶ

ಪಾಕ್‌ನ ಮತ್ತೊಂದು ನಗರ ವಶಪಡಿಸಿಕೊಂಡ ಬಲೂಚ್ ಆರ್ಮಿ



ಇಸ್ಲಾಮಾಬಾದ್: ಪಾಕಿಸ್ತಾನದಲ್ಲಿರುವ ಬಲೂಚ್ ಲಿಬರೇಶನ್ ಆರ್ಮಿ ಬಲೂಚಿಸ್ತಾನದಲ್ಲಿರುವ ಪ್ರಮುಖ ನಗರವಾದ ಸುರಬ್ ಅನ್ನು ಸಂಪೂರ್ಣವಾಗಿ ತನ್ನ ವಶಕ್ಕೆ ಪಡೆದುಕೊಂಡಿದೆ. ಶುಕ್ರವಾರ ಬಿಎಲ್‌ಎ ವಕ್ತಾರ ಜಯಂದ್, ಬಲೂಚ್ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ಇದನ್ನು ದೃಢಪಡಿಸಲಾಗಿದೆ. ಬಲೂಚ್ ಆರ್ಮಿ ಸುರಬ್ ನಗರದ ಸಂಪೂರ್ಣ ನಿಯಂತ್ರಣವನ್ನು ತೆಗೆದುಕೊಂಡಿದ್ದಾರೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ. ನಗರದಲ್ಲಿನ ಬ್ಯಾಂಕ್‌ಗಳು, ಲೆವಿ ಸ್ಟೇಷನ್‌ಗಳು ಮತ್ತು ಪೊಲೀಸ್ ಠಾಣೆಗಳು ಸೇರಿದಂತೆ ಪ್ರಮುಖ ಸರ್ಕಾರಿ ಸಂಸ್ಥೆಗಳನ್ನು ಭಯೋತ್ಪಾದಕರು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದಾರೆ ಎಂದು ಜಯಂದ್ ಹೇಳಿದರು. ಕ್ವೆಟ್ಟಾ–ಕರಾಚಿ ಹೆದ್ದಾರಿ ಮತ್ತು ಸುರಬ್–ಗದರ್ ರಸ್ತೆಯಲ್ಲಿಯೂ ತನಿಖೆ ಮತ್ತು ಗಸ್ತು ನಡೆಯುತ್ತಿದೆ. ಸಂಜೆ ವೇಳೆಗೆ ಹೆಚ್ಚಿನ ಸಂಖ್ಯೆಯ ಶಸ್ತ್ರಸಜ್ಜಿತ ಜನರು ನಗರದಲ್ಲಿನ ಸರ್ಕಾರಿ ಕಟ್ಟಡಗಳ ಮೇಲೆ ದಾಳಿ ಮಾಡಿದ್ದಾರೆ ಎಂದು ಸ್ಥಳೀಯ ಮೂಲಗಳು ತಿಳಿಸಿವೆ. ಬಿಎಲ್‌ಎ ಕಮಾಂಡರ್‌ಗಳು ನಗರದ ಎಲ್ಲಾ ಸರ್ಕಾರಿ ಸಂಸ್ಥೆಗಳನ್ನು ವಶಪಡಿಸಿಕೊಂಡಿದ್ದಾರೆ ಮತ್ತು ಪಾಕಿಸ್ತಾನಿ ಸೈನ್ಯವನ್ನು ಅನೇಕ ಸ್ಥಳಗಳಿಂದ ಓಡಿಸಿದ್ದಾರೆ ಎಂದು ಹೇಳಿಕೊಂಡಿದ್ದಾರೆ.

ಮೂವರು ಸಚಿವರು ಇದ್ದ ಹೋಟೆಲ್‌ಗೆ ಬಾಂಬ್ ಬೆದರಿಕೆ



ಜೈಪುರ: ರಾಜಸ್ಥಾನದ ಮೂವರು ಸಚಿವರಿದ್ದ ಹೋಟೆಲ್ ಸೇರಿದಂತೆ ಜೈಪುರದ ಎರಡು ಉನ್ನತ ದರ್ಜೆಯ ಹೋಟೆಲ್‌ಗಳಿಗೆ ಶನಿವಾರ ಇಮೇಲ್ ಮೂಲಕ ಬಾಂಬ್ ಬೆದರಿಕೆ ಬಂದಿದ್ದು, ತಕ್ಷಣವೇ ಹೋಟೆಲ್‌ಗಳಲ್ಲಿದ್ದ ಎಲ್ಲಾ ಗ್ರಾಹಕರನ್ನು ಸ್ಥಳಾಂತರಿಸಲಾಯಿತು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ರಫೆಲ್ಸ್ ಹೋಟೆಲ್ ಮತ್ತು ಹಾಲಿಡೇ ಇನ್ ಹೋಟೆಲ್‌ಗೆ ಬಾಂಬ್ ಬೆದರಿಕೆ ಬಂದಿದ್ದು, ಭದ್ರತಾ ಸಿಬ್ಬಂದಿ ಪರಿಶೀಲಿಸಿ, ಇದು ಹುಸಿ ಬಾಂಬ್ ಬೆದರಿಕೆ ಎಂದು ತಿಳಿದುಬಂದಿದೆ. ರಾಜಸ್ಥಾನ ಗೃಹ ಸಚಿವ ಜವಾಹರ್ ಸಿಂಗ್ ಬೆಧಮ್, ಕೌಶಲ, ಉದ್ಯೋಗ ಮತ್ತು ಉದ್ಯಮಶೀಲತೆ ಸಚಿವ ಕೆ.ಕೆ.ವಿಷ್ಣೋಯ್ ಹಾಗೂ ಸಹಕಾರಿ ಖಾತೆ ರಾಜ್ಯ ಸಚಿವ ಗೌತಮ್ ಡಾಕ್ ಅವರು ಹಾಲಿಡೇ ಇನ್ ಹೋಟೆಲ್‌ನಲ್ಲಿ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದಾಗ ಬಾಂಬ್ ಬೆದರಿಕೆ ಬಂದಿದೆ. ರಫೆಲ್‌ಗೆ ಬಾಂಬ್ ಬೆದರಿಕೆ ಬಗ್ಗೆ ತಿಳಿಸಲಾಯಿತು ಮತ್ತು ತಕ್ಷಣ ಜನರನ್ನು ಹೋಟೆಲ್‌ನಿಂದ ಸ್ಥಳಾಂತರಿಸುವಂತೆ ಸೂಚಿಸಲಾಯಿತು ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಹಾಲಿಡೇ ಇನ್ ಹೋಟೆಲ್‌ನಲ್ಲಿದ್ದ ಮೂವರು ಸಚಿವರು ಸಹ ತಕ್ಷಣ ಆವರಣವನ್ನು ತೊರೆದರು ಎಂದು ಅವರು ಹೇಳಿದ್ದಾರೆ.

ಥೈಲ್ಯಾಂಡ್ ಝೂನಲ್ಲಿ ಭಾರತೀಯ ಪ್ರವಾಸಿಗನ ಮೇಲೆ ಹುಲಿ ದಾಳಿ



ಥೈಲ್ಯಾಂಡ್: ಥೈಲ್ಯಾಂಡ್‌ನ ಫುಕೆಟ್‌ನಲ್ಲಿ ಹುಲಿಯೊಂದಿಗೆ ಫೋಟೋ ತೆಗೆಯಲು ಹೋದ ಭಾರತೀಯ ಪ್ರವಾಸಿಗರೊಬ್ಬರ ಮೇಲೆ ಹುಲಿ ದಾಳಿ ಮಾಡಿದೆ. ಟೈಗರ್ ಕಿಂಗ್‌ಡಂನಲ್ಲಿ ನಡೆದ ಈ ಘಟನೆಯ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಹುಲಿಯ ತರಬೇತುದಾರ ಕೋಲಿನಿಂದ ಹೊಡೆದಾಗ ಹುಲಿ ಆಕ್ರಮಣಕಾರಿಯಾಗಿ ವರ್ತಿಸಿ ಪ್ರವಾಸಿಗರ ಮೇಲೆ ದಾಳಿ ಮಾಡಿದೆ ಎಂದು ವರದಿಯಾಗಿದೆ. ಈ ಘಟನೆಯಲ್ಲಿ ಪ್ರವಾಸಿಗರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ವೈರಲ್ ಆದ 25 ಸೆಕೆಂಡುಗಳ ವಿಡಿಯೋದಲ್ಲಿ ಭಾರತ ಮೂಲದ ಗುರುತು ಸಿಗದ ವ್ಯಕ್ತಿಯೊಬ್ಬ ಹುಲಿಯ ಪಕ್ಕದಲ್ಲಿ ನಡೆಯುತ್ತಿದ್ದಾನೆ. ನಂತರ ಆತ ಹುಲಿಯೊಂದಿಗೆ ಫೋಟೊ ತೆಗೆದುಕೊಳ್ಳಲು ಮುಂದಾಗಿದ್ದಾರೆ. ಆ ಸಮಯದಲ್ಲಿ ಆ ಹುಲಿಯ ತರಬೇತುದಾರ ಪಕ್ಕದಲ್ಲಿಯೇ ನಿಂತು ಹುಲಿಗೆ ಕುಳಿತುಕೊಳ್ಳಲು ಹೇಳುತ್ತಾನೆ. ಆ ಹುಲಿ ಮಾತು ಕೇಳದಿದ್ದಾಗ ಕೋಲನ್ನು ಬಳಸುತ್ತಾನೆ. ಆಗ ಹುಲಿ ಆಕ್ರಮಣಕಾರಿಯಾಗಿ ವರ್ತಿಸಿ ಪ್ರವಾಸಿಗನ ಮೇಲೆ ದಾಳಿ ಮಾಡುತ್ತದೆ. ದಾಳಿ ಬಳಿಕ ಆಗ ಪ್ರವಾಸಿಗ ಭಯಗೊಂಡು ಜೋರಾಗಿ ಕಿರುಚುತ್ತಾನೆ. ವ್ಯಕ್ತಿ ಹುಲಿಯ ದೇಹದ ಕೆಳಭಾಗದಲ್ಲಿ ಸತತವಾಗಿ ಸವರಿದ್ದು, ಇದರಿಂದ ಹುಲಿಗೆ ಕಿರಿಕಿರಿ ಉಂಟಾಗಿದೆ ಎಂದಿದ್ದಾರೆ ನೆಟ್ಟಿಗರು.

ಕೇದಾರನಾಥ ರಾಷ್ಟ್ರೀಯ ಹೆದ್ದಾರಿಯಲ್ಲಿ ಭೂಕುಸಿತ; ಓರ್ವ ಸಾವು, ಐವರಿಗೆ ಗಾಯ



ರುದ್ರಪ್ರಯಾಗ: ರುದ್ರಪ್ರಯಾಗ ಜಿಲ್ಲೆಯ ಕೇದಾರನಾಥ ರಾಷ್ಟ್ರೀಯ ಹೆದ್ದಾರಿಯಲ್ಲಿ ಭೂಕುಸಿತ ಸಂಭವಿಸಿದ್ದು, ಘಟನೆಯಲ್ಲಿ ಓರ್ವ ಸಾವನ್ನಪ್ಪಿ, ಐವರು ಗಾಯಗೊಂಡಿರುವ ಘಟನೆ ಶುಕ್ರವಾರ ನಡೆದಿದೆ. ಭಕ್ತರನ್ನು ಛತ್ತೀಸಗಢದಿಂದ ಕೇದಾರನಾಥ ದೇವಾಲಯಕ್ಕೆ ವಾಹನದಲ್ಲಿ ಕರೆದೊಯ್ಯುತ್ತಿದ್ದ ವೇಳೆ ಭೂಕುಸಿತ ಹಿನ್ನೆಲೆಯಲ್ಲಿ ಗುಪ್ತಕಾಶಿ ಬಳಿಯ ಕುಂಡ್ ಬಳಿ ವಾಹನ ಸಿಲುಕಿ ದುರ್ಘಟನೆ ಸಂಭವಿಸಿದೆ. ಘಟನೆಯ ಬಗ್ಗೆ ಮಾಹಿತಿ ಪಡೆದ ರಾಜ್ಯ ವಿಪತ್ತು ನಿರ್ವಹಣಾ ಪಡೆ ತಂಡಗಳು ಸ್ಥಳಕ್ಕೆ ತಲುಪಿ ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಗಳನ್ನು ಪ್ರಾರಂಭಿಸಿದವು. ಇದೀಗ ಗಾಯಾಳುಗಳನ್ನು ಹೊರತೆಗೆದು ಹತ್ತಿರದ ಅಗಸ್ತಮುನಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಐವರ ಪೈಕಿ ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದರೆ, ಇತರ ಮೂವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಐವರೂ ಛತ್ತೀಸ್‌ಗಢದ ದುರ್ಗ್ ಜಿಲ್ಲೆಗೆ ಸೇರಿದವರು ಎಂದು ಮಾಹಿತಿ ನೀಡಿದ್ದಾರೆ. ಮೃತ ವ್ಯಕ್ತಿ ವಾಹನದ ಚಾಲಕನನ್ನು ತೆಹ್ರಿ ಗರ್ವಾಲ್ ಜಿಲ್ಲೆಯ ಲಂಬಗಾಂವ್ ನಿವಾಸಿ ರಾಜೇಶ್ ಸಿಂಗ್ ರಾವತ್ (38) ಎಂದು ಗುರುತಿಸಲಾಗಿದೆ.

ಉಕ್ಕು, ಅಲ್ಯೂಮಿನಿಯಂ ಸುಂಕ ಶೇ.50ಕ್ಕೆ ದ್ವಿಗುಣ: ಟ್ರಂಪ್



ವಾಷಿಂಗ್ಟನ್: ದೇಶೀಯ ಕೈಗಾರಿಕೆಗಳನ್ನು ರಕ್ಷಿಸುವ ಗುರಿಯನ್ನು ಹೊಂದಿರುವ ಡೊನಾಲ್ಡ್ ಟ್ರಂಪ್, ವ್ಯಾಪಾರ ಕದನದಲ್ಲಿ ಮುಂದಿನ ವಾರದಿಂದ ಉಕ್ಕು ಮತ್ತು ಅಲ್ಯೂಮಿನಿಯಂ ಆಮದು ಸುಂಕವನ್ನು ಶೇ.50ಕ್ಕೆ ದ್ವಿಗುಣಗೊಳಿಸುವುದಾಗಿ ಘೋಷಿಸಿದ್ದಾರೆ.

ನಾವು ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ಉಕ್ಕಿನ ಮೇಲಿನ ಸುಂಕವನ್ನು ಶೇ.25ರಿಂದ ಶೇ.50ಕ್ಕೆ ತರಲಿದ್ದೇವೆ ಎಂದು ಅವರು ಪೆನ್ಸಿಲ್ವೇನಿಯಾದ ಯುಎಸ್ ಸ್ಟೀಲ್ ಪ್ಲಾಂಟ್‌ನಲ್ಲಿ ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡುತ್ತಾ ಡೊನಾಲ್ಡ್ ಟ್ರಂಪ್ ಹೇಳಿದರು.

ಸುಂಕವನ್ನು ಯಾರೂ ತಪ್ಪಿಸಲು ಹೋಗುವುದಿಲ್ಲ ಎಂದ ಅವರು, ಕಳೆದ ವರ್ಷ ತಮ್ಮ ಚುನಾವಣಾ ವಿಜಯವನ್ನು ಸಾಧಿಸಲು ಸಹಾಯ ಮಾಡಿದ ಯುದ್ಧಭೂಮಿ ರಾಜ್ಯದ ಬ್ಲೂ–ಕಾಲರ್ ಕಾರ್ಮಿಕರ ಮುಂದೆ ಮಾಡಿದ ಭಾಷಣದಲ್ಲಿ ಹೇಳಿದರು. ನಂತರ ಟ್ರೂತ್ ಸೋಶಿಯಲ್ ಪೋಸ್ಟ್‌ನಲ್ಲಿ ಬರೆದಿರುವ ಟ್ರಂಪ್, ಹೆಚ್ಚಿದ ದರ ಅಲ್ಯೂಮಿನಿಯಂಗೂ ಅನ್ವಯಿಸುತ್ತದೆ. ಹೊಸ ಸುಂಕಗಳು ಜೂನ್ 4 ರಿಂದ ಜಾರಿಗೆ ಬರುತ್ತವೆ ಎಂದರು. ಸುಂಕಗಳು ಅಮೆರಿಕದ ಉದ್ಯಮವನ್ನು ರಕ್ಷಿಸಲು ಸಹಾಯ ಮಾಡಿದೆ ಎಂದು ವಾದಿಸಿದರು.

ಬೂಕರ್ ಪ್ರಶಸ್ತಿ ಪುರಸ್ಕೃತ ಕೊಡಗಿನ ಲೇಖಕಿ ದೀಪಾಭಾಸ್ತಿ ಅಭಿನಂದಿಸಿದ ಶಾಸಕ ಮಂತರ್‌ಗೌಡ

ಲೇಖಕಿಯ ಸಾಹಿತ್ಯ ಚಟುವಟಿಕೆಗಳಿಗೆ ಸರ್ಕಾರದಿಂದ ಅಗತ್ಯ ನೆರವು

ಮಡಿಕೇರಿ, ಮೇ 31– ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿಗೆ ಭಾಜನರಾದ ಮಡಿಕೇರಿಯ ಲೇಖಕಿ ದೀಪಾಭಾಸ್ತಿ ಅವರ ಸಾಹಿತ್ಯ ಸಾಧನೆ ಕೊಡಗಿನ ಜನತೆಗೇ ಹೆಮ್ಮೆ ತಂದಿದ್ದು, ಭವಿಷ್ಯದಲ್ಲಿಯೂ ಲೇಖಕಿಯ ಯಾವುದೇ ಸಾಹಿತ್ಯ ಪರ ಚಟುವಟಿಕೆಗಳಿಗೆ ಸರ್ಕಾರದ ವತಿಯಿಂದ ಅಗತ್ಯ ನೆರವು ನೀಡಲಾಗುವುದು ಎಂದು ಶಾಸಕ ಡಾ.ಮಂತರ್ ಗೌಡ ಬೂಕರ್ ಪ್ರಶಸ್ತಿಯು ಅನುವಾದ ಸಾಹಿತ್ಯದ ನಿಜವಾದ ಶಕ್ತಿಯನ್ನು ನಿರೂಪಿಸಿದೆ ಎಂದರು.

ನಗರದಲ್ಲಿರುವ ದೀಪಾಭಾಸ್ತಿ ಅವರ ಮನೆಗೆ ತೆರಳಿದ ಡಾ.ಮಂತರ್ ಗೌಡ, ಕಾಫಿ ಹಾರದ ಮೂಲಕ ಗೌರವ ಸನ್ಮಾನವನ್ನು ನೆರವೇರಿಸಿದ್ದಲ್ಲದೇ ದೀಪಾಭಾಸ್ತಿ ಅವರು ಈ ಸಂದರ್ಭ ನೀಡಿದ ಪ್ರಶಸ್ತಿ ವಿಜೇತ ಕೃತಿ 'ಹಾರ್ಟ್ ಲ್ಯಾಂಪ್' ಅನ್ನು ಗೌರವ ಪೂರ್ವಕವಾಗಿ ಸ್ವೀಕರಿಸಿದರು.

ದೀಪಾಭಾಸ್ತಿ ಅವರ ಸಾಹಿತ್ಯ ಸಾಧನೆಯನ್ನು ಶ್ಲಾಘಿಸಿದ ಶಾಸಕ ಡಾ.ಮಂತರ್ ಗೌಡ, ಬೂಕರ್ ಪ್ರಶಸ್ತಿಯಂತಹ ಜಗತ್ತಿನಲ್ಲಿ ಸಾಹಿತ್ಯಕ್ಕಾಗಿನ ಶ್ರೇಷ್ಠ ಪ್ರಶಸ್ತಿಯನ್ನು ಮಡಿಕೇರಿಯ ಲೇಖಕಿ ಪಡೆದುಕೊಳ್ಳುವ ಮೂಲಕ ಕೊಡಗು, ಕರ್ನಾಟಕ ಮಾತ್ರವಲ್ಲದೇ ಭಾರತವೇ ಮಡಿಕೇರಿಯತ್ತ ಗಮನ ಹರಿಸುವಂತೆ ಮಾಡಿದ್ದಾರೆ. ಈ ಸಾಹಿತ್ಯ ಸಾಧನೆ ಜಗತ್ತಿನ ಸಾಹಿತ್ಯ ಲೋಕದ ಇತಿಹಾಸದಲ್ಲಿ ಅಚ್ಚಳಿಯದೇ ದಾಖಲಾಗಿದೆ. ಮುಂದಿನ ದಿನಗಳಲ್ಲಿ ಸರ್ಕಾರದ ವತಿಯಿಂದ ಎಲ್ಲಾ ರೀತಿಯ ನೆರವನ್ನು ನೀಡಲು ಸಿದ್ಧವಿರುವುದಾಗಿ ತಿಳಿಸಿದರು.



ಲೇಖಕಿ ದೀಪಾಭಾಸ್ತಿ ಅವರನ್ನು ಸನ್ಮಾನಿಸಿದ ಶಾಸಕ ಡಾ.ಮಂತರ್ ಗೌಡ.

ಬಾನುಮುಷ್ತಾಕ್ ಅವರ ಹಸಿನಾ ಮತ್ತು ಇತರ ಕಥೆಗಳು ಕೃತಿಯನ್ನು ಹಾರ್ಟ್ ಲ್ಯಾಂಪ್ ಎಂಬ ಆಂಗ್ಲ ಭಾಷಾ ಕೃತಿಗೆ ಅನುವಾದಿಸಲು ಪಟ್ಟಿರಬಹುದಾದ ಶ್ರಮ ಊಹೆಗೂ ನಿಲುಕದ್ದು. ಮಡಿಕೇರಿಯ ಪರಿಸರದ ನಡುವಿನ ಮನೆಯಲ್ಲಿಯೇ ಇಂತಹ ಪ್ರಯತ್ನವನ್ನು ದೀಪಾಭಾಸ್ತಿ ಮಾಡಿರುವುದು ಹೆಮ್ಮೆ ಪಡುವ ವಿಚಾರ, ಮಡಿಕೇರಿಯ ನಿಸರ್ಗ ಕೂಡ ಇಂತಹ ಸಾಹಿತ್ಯಕ್ಕೆ ಸ್ಫೂರ್ತಿಯಾಗಿರುವುದು ಗಮನಾರ್ಹ ಎಂದು ಡಾ.ಮಂತರ್ ಗೌಡ ಹೇಳಿದರು.

ಸಾಹಿತ್ಯ ಲೋಕದಲ್ಲಿ ಅನುವಾದಿತ ಕೃತಿಯ ನಿಜವಾದ ಶಕ್ತಿಯೇನೆಂದು ಹಾರ್ಟ್ ಲ್ಯಾಂಪ್ ನಿರೂಪಿಸಿದೆ ಎಂದು ನುಡಿದರಲ್ಲದೇ, ವಿದ್ಯಾರ್ಥಿಗಳು ಮತ್ತು ಯುವ ಪೀಳಿಗೆಗೆ ದೀಪಾಭಾಸ್ತಿ ಆದರ್ಶವಾಗಿದ್ದು ಈ ನಿಟ್ಟಿನಲ್ಲಿ ಕೊಡಗಿನ ವಿವಿಧ ಶಿಕ್ಷಣ ಸಂಸ್ಥೆಗಳ ಆಸಕ್ತ ವಿದ್ಯಾರ್ಥಿಗಳೊಂದಿಗೆ ಲೇಖಕಿಯ ಸಂವಾದ ಏರ್ಪಡಿಸಿ, ಸಾಹಿತ್ಯ, ಲೇಖನ ಬರೆಯುವ ನಿಟ್ಟಿನಲ್ಲಿ ಪ್ರೋತ್ಸಾಹ ನೀಡುವ ಪ್ರಯತ್ನ ಮಾಡಲಾಗುತ್ತದೆ ಎಂದೂ ಡಾ.ಮಂತರ್ ಗೌಡ ಹೇಳಿದರು.

ದೀಪಾಭಾಸ್ತಿಯ ಬರವಣಿಗೆಗೆ ಬಾಲ್ಯದಿಂದಲೇ ಪ್ರೋತ್ಸಾಹ ನೀಡಿದ ಪೋಷಕರನ್ನೂ ಡಾ.ಮಂತರ್ ಗೌಡ ಈ ಸಂದರ್ಭ ಅಭಿನಂದಿಸಿದರು. ಬೆಂಗಳೂರಿನಲ್ಲಿ ಸೋಮವಾರ ಆಯೋಜಿತ ಸರ್ಕಾರದಿಂದ ಅಭಿನಂದನಾ ಕಾರ್ಯಕ್ರಮದಲ್ಲಿ ಮಡಿಕೇರಿ ಶಾಸಕನಾಗಿ ತಾನೂ ಪಾಲ್ಗೊಂಡು ದೀಪಾಭಾಸ್ತಿ ಮತ್ತು ಭಾನು ಮುಷ್ತಾಕ್ ಅವರಿಗೆ ಗೌರವ ಸಲ್ಲಿಸುವುದಾಗಿಯೂ ಡಾ.ಮಂತರ್ ಗೌಡ ಹೇಳಿದರು.

ಈ ಸಂದರ್ಭ ಮಾತನಾಡಿದ ದೀಪಾಭಾಸ್ತಿ, ತಾನು ಭಾನುಮುಷ್ತಾಕ್ ಅವರು ಬರೆದ ಹಸಿನಾ ಮತ್ತು ಇತರ ಕಥೆಗಳು ಸೇರಿದಂತೆ ಇತರ ಕೃತಿಗಳಲ್ಲಿನ 12 ಆಯ್ದ ಕಥೆಗಳನ್ನು ಹಾರ್ಟ್ ಲ್ಯಾಂಪ್ ಮೂಲಕ ಅನುವಾದಿಸಿದ್ದು, ಬೂಕರ್ ಪ್ರಶಸ್ತಿಯು ಅನುವಾದಕ್ಕಾಗಿ ಸಂದದ್ದು ಸಂತೋಷ ತಂದಿದೆ ಎಂದರು.

ಸುಮಾರು 3 ವರ್ಷಗಳ ಅವಿರತ ಶ್ರಮ ಈ ಸಾಧನೆಯ ಹಿಂದಿದೆ ಎಂದು ಹೇಳಿದ ದೀಪಾಭಾಸ್ತಿ, ಸದ್ಯದಲ್ಲಿಯೇ ಲಂಡನ್‌ಗೆ ಮತ್ತೆ ತೆರಳಿ ಅಲ್ಲಿಂದ ಜಗತ್ತಿನ ಬೇರೆ ಬೇರೆ ದೇಶಗಳಿಗೆ ಸಂಚರಿಸಿ ಅಲ್ಲಿ ಹಾರ್ಟ್ ಲ್ಯಾಂಪ್ ಕೃತಿಯ ಸಂವಾದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿರುವುದಾಗಿ ತಿಳಿಸಿದರು.

ಮಡಿಕೇರಿಯ ನಿಸರ್ಗ ರಮಣೀಯತೆಯಿಂದಾಗಿ ಪತಿಯೊಂದಿಗೆ ತಾನು ಬೆಂಗಳೂರಿನಿಂದ ಇಲ್ಲೇ ಬಂದು ನೆಲೆಸಿದ್ದಾಗಿ ಹೇಳಿದ ದೀಪಾಭಾಸ್ತಿ, ಕೊಡಗಿನ ಪ್ರಕೃತಿ ಸಿರಿ ಲೇಖಕರಿಗೆ ನಿಜವಾದ ಸ್ಫೂರ್ತಿಯಾಗಿದೆ ಎಂದು ಹರ್ಷದಿಂದ ನುಡಿದರು. ಈ ಸಂದರ್ಭ ದೀಪಾಭಾಸ್ತಿ ಪತಿ ಚೆಟ್ಟೀರ ನಾಣಯ್ಯ, ಪೋಷಕರಾದ ಪ್ರಕಾಶ್ ಭಾಸ್ತಿ, ಸುಧಾಭಾಸ್ತಿ, ಪತ್ರಕರ್ತ ಅನಿಲ್ ಹೆಚ್.ಟಿ. ಈ ಸಂದರ್ಭ ಹಾಜರಿದ್ದರು.

ಜೂ.8, ಶ್ರೀ ಕರ್ಕಿ ಕ್ಷೇತ್ರದ ದೈವಜ್ಞ ಸಮಾಜದ ನೂತನ ಕಟ್ಟಡ ಉದ್ಘಾಟನೆ



ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿರುವ ಉಲ್ಲಾಸ್ ಸಿ.ಶೇಟ್

ವಿರಾಜಪೇಟೆ: ಪಟ್ಟಣದ ನಿಸರ್ಗ ಬಡಾವಣೆಯಲ್ಲಿ ನಿರ್ಮಾಣಗೊಂಡಿರುವ ದೈವಜ್ಞ ಸಮಾಜದ ನೂತನ ಕಟ್ಟಡವನ್ನು ಜೂ.8 ರಂದು ಶ್ರೀ ಕರ್ಕಿ ಕ್ಷೇತ್ರದ ದೈವಜ್ಞ ಬ್ರಾಹ್ಮಣರ ಮಠದ ಸಚ್ಚಿದಾನಂದ ಜ್ಞಾನೇಶ್ವರ ಭಾರತಿ ಸ್ವಾಮೀಜಿ ಉದ್ಘಾಟಿಸಲಿದ್ದಾರೆ ಎಂದು ದೈವಜ್ಞ ಸಮಾಜದ ವಿರಾಜಪೇಟೆ ಅಧ್ಯಕ್ಷ ಉಲ್ಲಾಸ್ ಸಿ.ಶೇಟ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅನೇಕ ವರ್ಷಗಳಿಂದ ನಮ್ಮ ಹಿರಿಯರು, ಸಮಾಜ ಬಾಂಧವರು ನಿರೀಕ್ಷಿಸುತ್ತಿದ್ದ ಸಭಾ ಭವನ ಲೋಕಾರ್ಪಣೆ ಮಾಡುವ ಅವಕಾಶ ಇಂದು ಒದಗಿ ಬಂದಿದೆ. ಜೂ.7 ರಂದು ದೇವತಾ ಕಾರ್ಯ ಶ್ರೀ ಗಣಪತಿ ಪೂಜೆ ವಾಸ್ತು ರಾಕ್ಷೋಘ್ನ ಹೋಮ, ನವಗ್ರಹ ಹೋಮ ನಡೆಯಲಿದೆ. ಜೂ. 8 ರಂದು ಬೆಳಗ್ಗೆ 9.30ಕ್ಕೆ ಶ್ರೀ ಸಚ್ಚಿದಾನಂದ ಜ್ಞಾನಶ್ರೀ ಭಾರತಿ ಮಹಾಸ್ವಾಮಿಗಳನ್ನು ಮುಖ್ಯ ರಸ್ತೆಯಿಂದ ಪ್ರವೇಶ ಪೂರ್ಣ ಕುಂಭದೊಂದಿಗೆ ಸ್ವಾಗತ ಕೋರಿ ಕರೆತರಲಾಗುವುದು. ನಂತರ ದೈವಜ್ಞ ಸಮಾಜದ ಕಟ್ಟಡ ಉದ್ಘಾಟನೆ ಬಳಿಕ ಸತ್ಯನಾರಾಯಣ ಪೂಜೆ, ಪ್ರಸಾದ ವಿತರಣೆ ಕಾರ್ಯ ನಡೆಯಲಿದೆ ಎಂದರು.

ದೈವಜ್ಞ ಸಮಾಜದ ಆಡಳಿತ ಮಂಡಳಿಯ ಖಜಾಂಚಿ ರಾಜೇಶ್ ಆರ್.ಶೇಟ್ ಮಾತನಾಡಿ ಮಧ್ಯಾಹ್ನ 3 ಗಂಟೆಗೆ ಸಮಾಜದ ಅಧ್ಯಕ್ಷ ಉಲ್ಲಾಸ್ ಸಿ.ಶೇಟ್ ಅವರ ಅಧ್ಯಕ್ಷತೆಯಲ್ಲಿ ಸಭಾ ಕಾರ್ಯಕ್ರಮ ನಡೆಯಲಿದೆ, ಸಚ್ಚಿದಾನಂದ ಜ್ಞಾನೇಶ್ವರ ಭಾರತಿ ಮಹಾಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಎ.ಎಸ್.ಪೊನ್ನಣ್ಣ, ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ, ಪುರಸಭೆ ಅಧ್ಯಕ್ಷೆ ದೇಚಮ್ಮ ಕಾಳಪ್ಪ, ಸ್ಥಳಿಯ ವಾರ್ಡ್ ಸದಸ್ಯೆ ಅನಿತಾ ಕುಮಾರ, ಅಖಿಲ ಕರ್ನಾಟಕ ದೈವಜ್ಞ ಸಮಾಜ ಧಾರವಾಡದ ರವಿ ಎಸ್.ಗಾಂವ್ಕರ್ ಮತ್ತು ಶಿವಮೊಗ್ಗದ ದೈವಜ್ಞ ಮಹಿಳಾ ಸಮಾಜದ ವಿನಯ ಆರ್.ರಾಯ್ಕರ್, ಮಂಗಳೂರು ದೈವಜ್ಞ ಸೌರಭ ಪತ್ರಿಕೆ ಸಂಪಾದಕ ಪ್ರಶಾಂತ್ ಅವರುಗಳು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಡೆತ್‌ನೋಟ್ ಬರೆದಿಟ್ಟು ವ್ಯಕ್ತಿ ಆತ್ಮಹತ್ಯೆ

ಮಡಿಕೇರಿ: ಅನಾರೋಗ್ಯದಿಂದ ಬಳಲುತ್ತಿದ ವಯೋವೃದ್ದರೊಬ್ಬರು ಡೆತ್‌ನೋಟ್ ಬರೆದಿಟ್ಟು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಪೊನ್ನಂಪೇಟೆ ತಾಲೂಕಿನ ಹಳ್ಳಿಗಟ್ಟು ಗ್ರಾಮದ ಪ್ರಕೃತಿ ನಗರದಲ್ಲಿ ನಡೆದಿದೆ. ಮೂಲತಃ ತೂಚಮಕೇರಿ ಗ್ರಾಮದ ಪೆಮ್ಮಂಡ ಕಾಶಿ(78) ಆತ್ಮಹತ್ಯೆ ಮಾಡಿಕೊಂಡವರಾಗಿದ್ದಾರೆ.

ಶನಿವಾರ ಮುಂಜಾನೆ 2.30 ಸಮಯದಲ್ಲಿ ಡೆತ್‌ನೋಟ್ ಬರೆದು ತಮ್ಮ ಮನೆಯ ಮುಂಭಾಗದಲ್ಲಿರುವ ಶೆಡ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡು ಸಾವಿಗೆ ಶರಣಾಗಿದ್ದಾರೆ. ಘಟನಾ ಸ್ಥಳಕ್ಕೆ ಪೊನ್ನಂಪೇಟೆ ಪೊಲೀಸ್ ಠಾಣಾಧಿಕಾರಿ ನವೀನ್ ಕುಮಾರ್, ಸಿಬ್ಬಂದಿಗಳಾದ ಶೋಭಾ, ಮಹಮ್ಮದ್ ಅಲೀ, ಸಂತೋಷ್ ದೊಡ್ಡಮನಿ ಅವರುಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಹಸುಗಳ ಮೇಲೆ ದಾಳಿ ಹಿನ್ನೆಲೆ

ಹುಲಿ ಸೆರೆಗೆ ಕಾರ್ಯಾಚರಣೆ ಆರಂಭ



ಹುಲಿ ಸೆರೆಗೆ ಕಾರ್ಯಾಚರಣೆಯನ್ನು ಪರಿಶೀಲಿಸುತ್ತಿರುವ ಸಂಕೇತ್ ಪೂವಯ್ಯ.

ಮಡಿಕೇರಿ, ಮೇ 31– ಪೊನ್ನಂಪೇಟೆ ತಾಲೂಕು ಮಂಚಳ್ಳಿ ಮತ್ತು ಕುರ್ಚಿ ಗ್ರಾಮದ ಅಂಚಿನಲ್ಲಿ ಹಸುಗಳ ಮೇಲೆ ಹುಲಿ ದಾಳಿ ಮಾಡಿರುವುದು ಮತ್ತು ಕಳೆದ ಎರಡು ದಿನಗಳಿಂದ ರಾತ್ರಿ ವೇಳೆ ಹುಲಿ ಘರ್ಜನೆ ಕೇಳಿ ಬರುತ್ತಿರುವ ಹಿನ್ನೆಲೆ ಶ್ರೀಮಂಗಲ ವನ್ಯಜೀವಿ ವಲಯದ ವಿಶೇಷ ತಂಡ ಹುಲಿ ಸೆರೆಗೆ ಕಾರ್ಯಾಚರಣೆ ಆರಂಭಿಸಿದೆ.

ಜಾನುವಾರುಗಳ ಮೇಲೆ ಹುಲಿ ದಾಳಿ ಮಾಡಿರುವ ಹಿನ್ನೆಲೆಯಲ್ಲಿ ಹುಲಿಯ ಚಲನ ವಲನ ಗುರುತಿಸಲು ಬ್ರಹ್ಮಗಿರಿ ಅರಣ್ಯದಂಚಿನ ಗ್ರಾಮಗಳಲ್ಲಿ ಹಲವು ಟ್ರ್ಯಾಕಿಂಗ್ ಕ್ಯಾಮರಾಗಳನ್ನು ಅಳವಡಿಸಲಾಗಿದೆ ಟ್ರ್ಯಾಕಿಂಗ್ ಕ್ಯಾಮರಾದಲ್ಲಿ ಹುಲಿ ಸೆರೆಯಾಗಿರುವ ಹಿನ್ನೆಲೆ ಬೋನ್ ಇಟ್ಟು ಹುಲಿಯನ್ನು ಸೆರೆ ಹಿಡಿಯುವ ಪ್ರಯತ್ನಕ್ಕೆ ಅರಣ್ಯ ಇಲಾಖೆ ಮುಂದಾಗಿದೆ. ಕುರ್ಚಿ ಗ್ರಾಮದ ಕುಂಬಾರ ಮೊಟ್ಟೆಯಲ್ಲಿ ಹುಲಿಯನ್ನು ಸೆರೆ ಹಿಡಿಯಲು ಬೋನ್ ಒಳಗೆ ಮೇಕೆ ಕಟ್ಟಲಾಗಿದ್ದು, ಆ ಮೂಲಕ ಹುಲಿಯನ್ನು ಆಕರ್ಷಿಸಿ ಬೋನಿಗೆ ಬೀಳಿಸುವ ಪ್ರಯತ್ನಕ್ಕೆ ಅರಣ್ಯ ಇಲಾಖೆ ಕೈಹಾಕಿದೆ. ಬೋನು ಅಳವಡಿಸಿರುವ ಸ್ಥಳದ ಸಮೀಪದ ಮರದಲ್ಲಿ ಅಟ್ಟಣಿಗೆ ನಿರ್ಮಿಸಲಾಗಿದ್ದು, ಹುಲಿ ಬಂದ ಸಂದರ್ಭ ಅರವಳಿಕೆ ಮೂಲಕ ಹುಲಿ ಸೆರೆ ಹಿಡಿಯುವ 2ನೇ ಹಂತದ ಯೋಜನೆ ರೂಪಿಸಲಾಗಿದೆ.

ಕಾರ್ಯಾಚರಣೆ ಸ್ಥಳಕ್ಕೆ ಭೇಟಿ ನೀಡಿದ ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ ಹುಲಿ ಸೆರೆಗೆ ಕೈಗೊಳ್ಳಲಾಗಿರುವ ಕ್ರಮಗಳ ಕುರಿತು ಮಾಹಿತಿ ಪಡೆದರು. ಬಳಿಕ ಮಾತನಾಡಿದ ಸಂಕೇತ್ ಪೂವಯ್ಯ, ಈ ವ್ಯಾಪ್ತಿಯಲ್ಲಿ ಹುಲಿಯ ಚಲನವಲನ ಕಂಡುಬಂದ ಹಿನ್ನೆಲೆಯಲ್ಲಿ ಕ್ಯಾಮರವನ್ನು ಅಳವಡಿಸಿದ್ದು, ಹುಲಿ ಚಿತ್ರ ಸೆರೆಯಾಗಿದೆ. ಈಗಾಗಲೇ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಹಾಗೂ ವಿರಾಜಪೇಟೆ ಕ್ಷೇತ್ರ ಶಾಸಕ ಎ.ಎಸ್ ಪೊನ್ನಣ್ಣ ಅವರು ಈ ವ್ಯಾಪ್ತಿಯಲ್ಲಿ ಜಾನುವಾರುಗಳ ಮೇಲೆ ದಾಳಿ ನಡೆಸುತ್ತಿರುವ ಎರಡು ಹುಲಿಗಳನ್ನು ಸೆರೆ ಹಿಡಿಯಲು ಸರ್ಕಾರದಿಂದ ಅನುಮತಿ ಮಂಜೂರು ಮಾಡಿಸಿದ್ದಾರೆ ಎಂದು ಹೇಳಿದರು.

ಇದೀಗ ಹುಲಿ ಸೆರೆಗೆ ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿದ್ದು, ಮೇಕೆ ಬಳಸಿ ಹುಲಿ ಸೆರೆಗೆ ಬೋನು ಇರಿಸಲಾಗಿದೆ. ಅಟ್ಟಣಿಗೆ ನಿರ್ಮಿಸಿ ಎರಡನೇ ಹಂತದಲ್ಲಿ ಹುಲಿ ಸೆರೆಗೆ ಕ್ರಮ ಕೈಗೊಳ್ಳಲಾಗಿದೆ. ಕಾರ್ಯಾಚರಣೆ ತಂಡ ಹುಲಿ ಸೆರೆ ಹಿಡಿಯುವ ವಿಶ್ವಾಸವಿದೆ ಎಂದರು.

ಜನೌಷಧಿ ಕೇಂದ್ರ ಮುಚ್ಚುವ ನಿರ್ಧಾರ ಖಂಡಿಸಿ

ಸೋಮವಾರಪೇಟೆಯಲ್ಲಿ ಬಿಜೆಪಿ ಪ್ರತಿಭಟನೆ



ಸೋಮವಾರಪೇಟೆ ಪಟ್ಟಣದಲ್ಲಿ ಪ್ರತಿಭಟನೆ ನಡೆಸುತ್ತಿರುವ ಬಿಜೆಪಿ ಕಾರ್ಯಕರ್ತರು.

ಮಡಿಕೇರಿ, ಮೇ 31– ಅತ್ಯಂತ ಕಡಿಮೆ ದರದಲ್ಲಿ ಔಷಧಿಗಳನ್ನು ಒದಗಿಸುತ್ತಿರುವ ಜನೌಷಧಿ ಕೇಂದ್ರಗಳನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ತೆರವು ಮಾಡಲು ಮುಂದಾಗಿರುವುದನ್ನು ಖಂಡಿಸಿ ಮಂಡಲ ಬಿಜೆಪಿ ವತಿಯಿಂದ ಸೋಮವಾರಪೇಟೆ ಪಟ್ಟಣದಲ್ಲಿ ಪ್ರತಿಭಟನೆ ನಡೆಸಲಾಯಿತು.

ಇಲ್ಲಿನ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಹಾಗೂ ಜನೌಷಧ ಕೇಂದ್ರದ ಎದುರು ಪ್ರತಿಭಟನೆ ನಡೆಸಿದ ಕಾರ್ಯಕರ್ತರು ನಂತರ ತಾಲೂಕು ಕಚೇರಿ ಎದುರು ಧರಣಿ ನಡೆಸಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು.

ಈ ಸಂದರ್ಭ ಮಾಜಿ ಶಾಸಕ ಎಂ.ಪಿ. ಅಪ್ಪಚ್ಚು ರಂಜನ್ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರದ ಬಿಜೆಪಿ ಸರ್ಕಾರ ಜಾರಿಗೆ ತಂದಿರುವ ಜನೌಷಧಿ ಕೇಂದ್ರಗಳು ಬಡ ಮಂದಿಗೆ ಕಡಿಮೆ ದರದಲ್ಲಿ ಔಷಧಿಗಳನ್ನು ಒದಗಿಸುತ್ತಿವೆ. ಜನರಿಗೆ ಹೆಚ್ಚು ಅನುಕೂಲವಾಗಿರುವ ಇಂತಹ ಕೇಂದ್ರಗಳನ್ನು ಇದೀಗ ತೆರವುಗೊಳಿಸಲು ಜನವಿರೋಧಿ ಕಾಂಗ್ರೆಸ್ ಸರ್ಕಾರ ಮುಂದಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕಾಂಗ್ರೆಸ್‌ನ ಬಡವರು ಹಾಗೂ ಜನ ವಿರೋಧಿ ನೀತಿಗಳ ವಿರುದ್ಧ ಬಿಜೆಪಿ ತೀವ್ರ ಹೋರಾಟ ನಡೆಸಲಿದೆ ಎಂದು ಎಚ್ಚರಿಸಿದರು. ಮಡಿಕೇರಿ ಕ್ಷೇತ್ರದ ಶಾಸಕರು ಈ ಎರಡು ವರ್ಷದಲ್ಲಿ ಸರ್ಕಾರಿ ಆಸ್ಪತ್ರೆಯ ಅವ್ಯವಸ್ಥೆಗಳನ್ನು ಬಗೆಹರಿಸಲು ಯಾವುದೇ ಕ್ರಮವಹಿಸಿಲ್ಲ. ಆಸ್ಪತ್ರೆ ವೈದ್ಯರ ಕೊರತೆಯಿಂದ ನಲುಗುತ್ತಿದ್ದು, ಆರೋಗ್ಯ ಇಲಾಖೆಯೇ ಅನಾರೋಗ್ಯಕ್ಕೀಡಾಗಿದೆ ಎಂದು ಟೀಕಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ ಮಾತನಾಡಿ, ಜನರಿಗೆ ಉಪಯೋಗವಾಗಿರುವ ಜನೌಷಧಿ ಕೇಂದ್ರಗಳನ್ನು ಮೆಡಿಕಲ್ ಲಾಭಿಗೆ ಮಣಿದು ಮುಚ್ಚುವ ಹಂತಕ್ಕೆ ಕಾಂಗ್ರೆಸ್ ಸರ್ಕಾರ ಬಂದಿದೆ ಬಡವರ ಶಾಪ ಸರ್ಕಾರಕ್ಕೆ ತಟ್ಟಲಿದೆ. ಇದೀಗ ಬಿಜೆಪಿ ವತಿಯಿಂದ ಮೌನ ಪ್ರತಿಭಟನೆ ಮಾಡಿದ್ದು, ತನ್ನ ನಿರ್ಧಾರವನ್ನು ಸರ್ಕಾರ ಹಿಂಪಡೆಯದಿದ್ದರೆ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ಬಿಜೆಪಿ ಸೋಮವಾರಪೇಟೆ ಮಂಡಲ ಅಧ್ಯಕ್ಷ ಗೌತಮ್ ಗೌಡ, ವಿಧಾನ ಪರಿಷತ್ ಮಾಜಿ ಸದಸ್ಯ ಎಸ್.ಜಿ.ಮೇದಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಶ್ ಜೈನಿ, ಮಡಿಕೇರಿ ನಗರ ಮಂಡಲ ಅಧ್ಯಕ್ಷ ಉಮೇಶ್ ಸುಬ್ರಮಣಿ, ಪ್ರಧಾನ ಕಾರ್ಯದರ್ಶಿ ಕವನ್ ಕಾರ್ಯಪ್ಪ, ಯುವ ಮೋರ್ಚಾ ಜಿಲ್ಲಾಧ್ಯಕ್ಷ ಮಹೇಶ್ ತಿಮ್ಮಯ್ಯ, ಮಂಡಲ ಬಿಜೆಪಿ ಪ್ರಧಾನ ಕಾರ್ಯದರ್ಶಿ ಎಸ್.ಆರ್. ಸೋಮೇಶ್, ದರ್ಶನ್ ಜೋಯಪ್ಪ, ಯುವ ಮೋರ್ಚಾ ತಾಲೂಕು ಅಧ್ಯಕ್ಷ ಮೋಹಿತ್, ಜಿಲ್ಲಾ ಕಾರ್ಯದರ್ಶಿ ಆರ್.ಕೆ.ಚಂದ್ರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ತೋಟದ ಮನೆಯಲ್ಲಿ ಅಕ್ರಮ ನಾಡ ಬಂದೂಕು ದಾಸ್ತಾನು, ಆರೋಪಿ ಅಂದರ್



ತೆಳ್ಳನೂರು ತೋಟದ ಮನೆಯೊಂದರಲ್ಲಿ ವಶಪಡಿಸಿಕೊಳ್ಳಲಾಗದ ಅಕ್ರಮ ನಾಡ ಬಂದೂಕು, ಗಾಂಜಾ ಜೊತೆ ಗ್ರಾಮಾಂತರ ಪೊಲೀಸರು.



ಕೊಳ್ಳೇಗಾಲ: ತಾಲೂಕಿನ ತೆಳ್ಳನೂರು ಗ್ರಾಮದ ತೋಟದ ಮನೆಯೊಂದರಲ್ಲಿ ಅಕ್ರಮವಾಗಿ ದಾಸ್ತಾನು ಮಾಡಲಾಗಿದ್ದ ಮೂರು ನಾಡ ಬಂದೂಕುಗಳು, ಗುಂಡುಗಳು, ಮದ್ದಿನ ಪೌಡರು ಹಾಗೂ ಗಾಂಜಾವನ್ನು ಡಿವೈಎಸ್ಪಿ ತನಿಖಾ ತಂಡ ಹಾಗೂ ಗ್ರಾಮಾಂತರ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಹಲಗಾಪುರ ಗ್ರಾಮದ ನಿವಾಸಿ ಬಸವರಾಜು ಎಂಬಾತ ಬಂಧಿತ ಆರೋಪಿ. ಈತ ಕಾಡುಪ್ರಾಣಿಗಳ ಬೇಟೆಗಾಗಿ ನಾಡ ಬಂದೂಕುಗಳನ್ನು ಅಕ್ರಮವಾಗಿ ಇಟ್ಟುಕೊಂಡಿದ್ದ ಎನ್ನಲಾಗಿದೆ. ಜೊತೆಗೆ ಗಾಂಜಾ ಶೇಖರಣೆ ಮಾಡಿ ಅಕ್ರಮವಾಗಿ ಮಾರಾಟ ಮಾಡಲೂ ಸಹ ಯತ್ನಿಸಿದ್ದ ಎನ್ನಲಾಗಿದ್ದು, ಈ ಹಿನ್ನೆಲೆ ಖಚಿತ ಮಾಹಿತಿ ಮೇರೆಗೆ, ಕೊಳ್ಳೇಗಾಲ ಡಿವೈಎಸ್ಪಿ ಧರ್ಮೇಂದ್ರ ಅವರ ಮಾರ್ಗದರ್ಶನದಲ್ಲಿ ಅವರ ನೇತೃತ್ವದ ತನಿಖಾ ತಂಡದ ಎಸ್‌ಐ ತಖೀವುಲ್ಲಾ ಹಾಗೂ ಗ್ರಾಮಾಂತರ ಠಾಣೆಯ ಪಿಎಸ್‌ಐ ಸುಪ್ರೀತ್ ನೇತೃತ್ವದಲ್ಲಿ ಸಿಬ್ಬಂದಿಗಳಾದ ಗೋಪಾಲ್, ಮಲ್ಲಿಕಾರ್ಜುನ ಸ್ವಾಮಿ, ವೆಂಕಟೇಶ್, ರವಿ, ಬಿಳಿಗೌಡ ಇನ್ನಿತರರು ಶುಕ್ರವಾರ ರಾತ್ರೋರಾತ್ರಿ ಆ ತೋಟದ ಮನೆ ಮೇಲೆ ದಾಳಿ ನಡೆಸಿದ್ದಾರೆ.

ದಾಳಿಯ ವೇಳೆ, ತೋಟದ ಮನೆಯಲ್ಲಿದ್ದ ಮೂರು ನಾಡಬಂದೂಕುಗಳು, ಸ್ಫೋಟಕಗಳಿಗೆ ಸಂಬಂಧಿಸಿದ ಕೆಲ ಪರಿಕರಗಳು ಮತ್ತು ಸುಮಾರು 220 ಗ್ರಾಂ ಒಣ ಗಾಂಜಾ ಪತ್ತೆಯಾಗಿ ವಶಕ್ಕೆ ಪಡೆಯಲಾಗಿದ್ದು, ಬಂಧಿತನಿಂದ 3 ನಾಡ ಬಂದೂಕು, 2 ತಲೆಗೆ ಹಾಕುವ ಬೇಟೆಗೆ ಬಳಸುವ ಬ್ಯಾಟರಿ, ಇನ್ನೂರ ಇಪ್ಪತ್ತು ಗ್ರಾಂ ಗಾಂಜಾ, ಗನ್ ಪೌಡರ್, 40 ಬಾಲ್ಸ್ (ಗುಂಡು)ಗಳನ್ನು ವಶಕ್ಕೆ ಪಡೆದಿದ್ದಾರೆ,

ಚಾ.ನಗರ ಜಿಲ್ಲೆಯ ಮಣ್ಣಿನಲ್ಲಿ, ಗಾಳಿಯಲ್ಲಿ ಸಾಹಿತ್ಯವಿದೆ

ಅಭಿನಂದನಾ ಗ್ರಂಥ ಬಿಡುಗಡೆ; ಬೀಳ್ಕೊಡುಗೆ ಸಮಾರಂಭದಲ್ಲಿ ಮೂಡ್ನಾಕೂಡು ಅಭಿಪ್ರಾಯ

ಚಾಮರಾಜನಗರ, ಮೇ 31– ಜಿಲ್ಲೆಯ ಮಣ್ಣಿನಲ್ಲಿ, ಗಾಳಿಯಲ್ಲಿ ಸಾಹಿತ್ಯವಿದ್ದು, ಜಗತ್ತಿಗೆ ಮಲೆ ಮಹದೇಶ್ವರ ಮತ್ತು ಮಂಟೇಸ್ವಾಮಿ ಎಂಬ 2 ಮಹಾಕಾವ್ಯಗಳನ್ನು ನೀಡಿದೆ ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ತಿಳಿಸಿದರು.

ನಗರದ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಜಿಲ್ಲಾ ಪ್ರಾಂಶುಪಾಲರ ಸಂಘ, ಉಪನ್ಯಾಸಕರ ಸಂಘ ಹಾಗೂ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), ಚೇತನ ಕಲಾ ವಾಹಿನಿ ಸಂಸ್ಥೆಯ ಸಹಯೋಗದಲ್ಲಿ ಏರ್ಪಡಿಸಿದ್ದ ಕವಿ, ನಿವೃತ್ತ ಪಿಯು ಇಲಾಖೆ ಉಪ ನಿರ್ದೇಶಕ ಸಿ.ಮಂಜುನಾಥ ಪ್ರಸನ್ನ (ಮಂಜು ಕೋಡಿ ಉಗನೆ) ಅವರ ಅಭಿನಂದನಾ ಗ್ರಂಥ ಬಿಡುಗಡೆ ಹಾಗೂ ಬೀಳ್ಕೊಡುಗೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬದುಕಿನ ಅನಾವರಣವೇ ಸಾಹಿತ್ಯ ಇದನ್ನು ಜೀವನದಲ್ಲಿ ಬಳಸಿಕೊಂಡರೆ ಮಾನವೀಯತೆ ಮತ್ತು ಪ್ರಗತಿಪರವಾಗಿ ಇರಲು ಸಾಧ್ಯ. ಕಲೆ ಅಥವಾ ಸಾಹಿತ್ಯ ಪ್ರಕಾರಗಳು ವ್ಯಕ್ತಿಯ ಬದುಕನ್ನು ವಿಶಿಷ್ಟವಾಗಿ ರೂಪಿಸಲಿವೆ. ಸಾಹಿತ್ಯವನ್ನು ಬೆಳವಣಿಗೆಗೆ ಬಳಸಿಕೊಳ್ಳಬೇಕು. ವಿದ್ಯಾರ್ಥಿಗಳು ಪಠ್ಯವನ್ನು ಪರೀಕ್ಷೆಗಾಗಿ ಮಾತ್ರ ಓದಬಾರದು. ಅದರಲ್ಲಿರುವ ಸಾರವನ್ನು ಅರಿತುಕೊಳ್ಳಬೇಕು ಎಂದು ಸಲಹೆ ನೀಡಿದರು.

ಮಂಜು ಕೋಡಿಉಗನೆ ಅವರು ಒಳ್ಳೆಯ ಬರಹಗಾರರು, ವಿಮರ್ಶಕರು ಹೌದು. ಅವರ ಚಪ್ಪೋಡು ಉತ್ತಮ ಕಾದಂಬರಿಯಾಗಿದೆ. ಕವಿತೆ, ನಾಟಕ ಪ್ರಕಾರಗಳಲ್ಲೂ ಕೆಲಸ ಮಾಡಿದ್ದಾರೆ. ಅಧಿಕಾರಿಯಾಗಿ ನಿವೃತ್ತರಾಗಿದ್ದಾರೆ. ಅವರಿಂದ ಮುಂದಿನ ದಿನಗಳಲ್ಲಿ ಉತ್ತಮ ಕೃತಿಗಳು ಹೊರಬರಲಿ ಎಂದು ಹಾರೈಸಿದರು.



ಕವಿ, ನಿವೃತ್ತ ಪಿಯು ಇಲಾಖೆ ಉಪನಿರ್ದೇಶಕ ಸಿ.ಮಂಜುನಾಥ ಪ್ರಸನ್ನ (ಮಂಜು ಕೋಡಿ ಉಗನೆ) ಅಭಿನಂದನಾ ಗ್ರಂಥ ಬಿಡುಗಡೆ ಹಾಗೂ ಬೀಳ್ಕೊಡುಗೆ ಸಮಾರಂಭದಲ್ಲಿ ಸನ್ಮಾನಿಸಿದ ಸಂದರ್ಭ.

ನಮ್ಮ ದೇಶದ ಕಾಶ್ಮೀರದಿಂದ ಕನ್ಯಾಕುಮಾರಿ ತನಕ ಒಂದು ಮಗು ಕಲಿಯಬೇಕಾದ ಶಿಕ್ಷಣ ಸಿಗುತ್ತಿಲ್ಲ. ಮೇಲ್ವರ್ಗದ ಮಕ್ಕಳಿಗೆ ನಮ್ಮಲ್ಲಿನ ಶ್ರೇಣಿಕೃತ ವ್ಯವಸ್ಥೆ ಬಗ್ಗೆ ಪರಿಚಯವೇ ಇಲ್ಲ. ಹಾಗಾಗಿ ಅವರು ಮೀಸಲಾತಿಯನ್ನು ವಿರೋಧಿಸುತ್ತಿದ್ದಾರೆ.

ಜಾತಿಯನ್ನು ಹೇಳದೆ ಯಾವುದೇ ವಿಚಾರವನ್ನು ಮಾತನಾಡಲು ಸಾಧ್ಯವೇ ಇಲ್ಲದಂತಹ ಪರಿಸ್ಥಿತಿಯಿದೆ. ಡಾ.ಬಿ.ಆರ್. ಅಂಬೇಡ್ಕರ್ ಅವರ ಜಾತಿ ವಿನಾಶ ಚಿಂತನೆಯನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ. ಅವರ ಬೋಧನೆಗಳನ್ನು ಜೀವನದಲ್ಲಿ ಆರಾಧಿಸುತ್ತಿಲ್ಲ. ಅವರನ್ನು ಉತ್ಸವ, ಪ್ರತಿಮೆ, ಆಚರಣೆಗೆ ಸೀಮಿತ ಮಾಡಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಉದರ ಮಾನವತಾವಾದಿ ಮಂಜುನಾಥ ಪ್ರಸನ್ನ: ವಿಮರ್ಶಕ ಎಸ್.ಆರ್.ವಿಜಯಶಂಕರ್ ಅಭಿನಂದನಾ ಗ್ರಂಥ ಬಿಡುಗಡೆ ಮಾಡಿ, ಕೃತಿ ಕುರಿತು ಮಾತನಾಡಿ, ಸಿ.ಮಂಜುನಾಥ್ ಪ್ರಸನ್ನ ಅವರು ಉದರ ಮಾನವತಾವಾದಿಯಾಗಿದ್ದರು. ಸಾಮಾಜಿಕ ವ್ಯಕ್ತಿತ್ವ ಹೊಂದಿದ್ದು, ಅನ್ಯಾಯದ ವಿರುದ್ಧ ಧ್ವನಿ ಎತ್ತಬಲ್ಲ ಶಕ್ತಿಯಾಗಿದ್ದಾರೆ ಎಂದರು.

ಮಂಜುನಾಥ್ ಪ್ರಸನ್ನ ನಿವೃತ್ತರಾಗುತ್ತಿರುವುದು ಸೇವೆಯಿಂದ ಮಾತ್ರ. ಅವರಿಂದ ಇನ್ನಷ್ಟು ಆಳವಾದ ಅಧ್ಯಯನ ತೆರೆಯುವ ಮೂಲಕ ಕನ್ನಡಕ್ಕೆ ಮತ್ತಷ್ಟು ಕೊಡುಗೆಗಳನ್ನೂ ನೀಡಬೇಕಿದೆ. ಅವರ ಅಭಿನಂದನಾ ಕಾರುಣ್ಯ ಕಡಲು ಅವರ ಅಕ್ಷರ ಜ್ಞಾನ, ಬುದ್ಧ ತತ್ವ ಅಂಬೇಡ್ಕರ್ ತತ್ವ ಸೇರಿ ಮೂಡಿ ಬಂದಿದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಮಾತನಾಡಿ, ಮಂಜುನಾಥ್ ಪ್ರಸನ್ನ ಅವರ ಬೇರೆ ಹವ್ಯಾಸಗಳಾದ ರಂಗಭೂಮಿ, ಸಾಹಿತ್ಯ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದು ಸಮಾಜ ಸೇವೆಯಲ್ಲಿರುವುದು ಇದು ಅವರ ನಿವೃತ್ತಿಯನ್ನು ತುಂಬಿ ಚಟುವಟಿಕೆಯಿಂದ ಇರಲು ಸಹಾಯ ಮಾಡುತ್ತದೆ ಅವರ ನಿವೃತ್ತಿ ಜೀವನ ಸುಖಕರವಾಗಿರಲಿ ಎಂದು ಆಶಿಸಿದರು.

ಅಭಿನಂದನೆ ಸ್ವೀಕರಿಸಿದ ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಸಿ.ಮಂಜುನಾಥ್ ಪ್ರಸನ್ನ ಮಾತನಾಡಿ, ಇಲಾಖೆಯಲ್ಲಿ ಉತ್ತಮ ರೀತಿಯಲ್ಲಿ ಕೆಲಸ ಮಾಡಿರುತ್ತೇನೆ ಎಂಬ ಆಶಯವಿಟ್ಟು ಇನ್ನೂ ಖುಷಿಯಾಗಿ ನಿವೃತ್ತಿ ಜೀವನ ಅನುಭವಿಸುತ್ತೇನೆ. ಈ ಅಭಿನಂದನಾ ಗ್ರಂಥ ನಮಗೆ ಉತ್ತಮವಾದಂತಹ ನಿವೃತ್ತಿ ಬದುಕಿನಲ್ಲಿ ಒಂದು ಅಂತಿಮವನ್ನು ತಲುಪಿಸಿದೆ ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾಹುಡೇದ, ಕೃತಿ ಸಂಪಾದಕ ಸೋಮಶೇಖರ್ ಬಿಸಲ್ವಾಡಿ ಮಾತನಾಡಿದರು. ಕೃತಿ ಸಹ ಸಂಪಾದಕ ಹರವೆ ಮಹೇಶ್, ಜಿಲ್ಲಾ ಪ್ರಾಂಶುಪಾಲರ ಸಂಘದ ಅಧ್ಯಕ್ಷ ಎಂ.ಸೋಮಣ್ಣ, ಅಧ್ಯಕ್ಷ ಎಸ್.ನರೇಂದ್ರನಾಥ್, ಕನ್ನಡ ಉಪನ್ಯಾಸಕರ ಸಂಘದ ಅಧ್ಯಕ್ಷ ಎಸ್.ಮಹದೇವಪ್ರಭು, ಚೇತನ ಕಲಾವಾಹಿನಿ ಸಂಸ್ಥೆ ಅಧ್ಯಕ್ಷ ಜಿ.ರಾಜಪ್ಪ ಇತರರು ಹಾಜರಿದ್ದರು.

ಸಂತೇಮರಹಳ್ಳಿ ವೈದ್ಯೆ ಡಾ.ರೇಣುಕಾದೇವಿ ಸೇವೆಯಿಂದ ಅಮಾನತು



ಚಾಮರಾಜನಗರ: ತಾಲೂಕಿನ ಸಂತೇಮರಹಳ್ಳಿಯ ಸಮುದಾಯ ಆರೋಗ್ಯ ಕೇಂದ್ರದ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞ ವೈದ್ಯರಾದ ಡಾ.ಸಿ.ಎನ್. ರೇಣುಕಾದೇವಿ ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ. ಆರೋಗ್ಯ ಕೇಂದ್ರದ ಶುಶ್ರೂಷಾಧಿಕಾರಿ ಹಾಗೂ ಆಶಾ ಕಾರ್ಯಕರ್ತೆಯರ ಮೂಲಕ ರೋಗಿಗಳು ಹಾಗೂ ಫಲಾನುಭವಿಗಳಿಂದ ಹಣ ಪಡೆಯುತ್ತಿರುವ ವಿಡಿಯೋ ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು. ಈ ಹಿನ್ನೆಲೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ತನಿಖೆ ನಡೆಸಿ ಮಾರ್ಚ್ 28ರಂದು ತನಿಖಾ ವರದಿ ಸಲ್ಲಿಸಿದ್ದರು.

ವರದಿಯ ಆಧಾರದ ಮೇಲೆ ಡಾ.ರೇಣುಕಾದೇವಿ ಅವರು ಕರ್ತವ್ಯಲೋಪ ತೋರಿರುವ ಗಂಭೀರ ಆರೋಪಗಳು ಮೇಲ್ನೋಟಕ್ಕೆ ಕಂಡು ಬಂದಿದ್ದು, ಕರ್ನಾಟಕ ನಾಗರಿಕ ಸೇವಾ ನಿಯಮಗಳು 1957ರ ಅನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಯುಕ್ತರಾದ ಕೆ.ಬಿ. ಶಿವಕುಮಾರ್ ಅಮಾನತುಗೊಳಿಸಿ ಆದೇಶಿಸಿದ್ದಾರೆ.

ಜಯಲಕ್ಷ್ಮಿ ನಿಧನ



ಚಾಮರಾಜನಗರ: ಚಾಮರಾಜನಗರದ ಕುವೆಂಪು ಬಡಾವಣೆಯ ನಿವಾಸಿ ದಿವಂಗತ ಟಿ.ಸುಬ್ಬಯ್ಯ(ಬಸ್ ಬಾಡಿ ಬಿಲ್ಡರ್) ಅವರ ಪತ್ನಿ ಜಯಲಕ್ಷ್ಮಿ(68) ಶುಕ್ರವಾರ ಸಂಜೆ ನಿಧನ ಹೊಂದಿದರು.

ಮೃತರು ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ನಿಧನ ಹೊಂದಿದ್ದಾರೆ. ಇವರು ಓರ್ವ ಪುತ್ರಿ, ಮೊಮ್ಮಗ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಶನಿವಾರ ಮಧ್ಯಾಹ್ನ ಚಾಮರಾಜನಗರದ ಆರ್ಯ ವೈಶ್ಯ ಚಿರಶಾಂತಿಧಾಮದಲ್ಲಿ ಅಂತ್ಯಕ್ರಿಯೆ ನೆರವೇರಿತು.

ಜನೌಷಧಿ ಕೇಂದ್ರ ತೆರವುಗೊಳಿಸದಂತೆ ಬಿಜೆಪಿ ಪ್ರತಿಭಟನೆ



ಜನೌಷಧಿ ಕೇಂದ್ರ ತೆರವುಗೊಳಿಸದಂತೆ ಬಿಜೆಪಿ ನಗರ ಮಂಡಲದ ವತಿಯಿಂದ ಪ್ರತಿಭಟನೆ.

ಚಾಮರಾಜನಗರ: ಜನೌಷಧಿ ಕೇಂದ್ರಗಳನ್ನು ಸರ್ಕಾರಿ ಆಸ್ಪತ್ರೆ ಆವರಣದಿಂದ ತೆರವು ಮಾಡಲು ರಾಜ್ಯ ಕಾಂಗ್ರೆಸ್ ಸರ್ಕಾರ ಮುಂದಾಗಿರುವ ಕ್ರಮವನ್ನು ಖಂಡಿಸಿ ಬಿಜೆಪಿ ನಗರ ಮಂಡಲದ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಜಿಲ್ಲಾ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಹಾಗೂ ಜನೌಷಧಿ ಕೇಂದ್ರದ ಎದುರು ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಬಿಜೆಪಿ ಜಿಲ್ಲಾ ಮಾಜಿ ಅಧ್ಯಕ್ಷ ಆರ್. ಸುಂದರ್ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಬಿಜೆಪಿ ಸರ್ಕಾರ ಜಾರಿಗೆ ತಂದಿರುವ ಜನೌಷಧಿ ಕೇಂದ್ರಗಳು ಬಡ ಮಂದಿಗೆ ಕಡಿಮೆ ದರದಲ್ಲಿ ಔಷಧಿಗಳನ್ನು ಒದಗಿಸುತ್ತಿದೆ. ಜನರಿಗೆ ಹೆಚ್ಚು ಅನುಕೂಲವಾಗಿರುವ ಇಂತಹ ಕೇಂದ್ರಗಳನ್ನು ತೆರವುಗೊಳಿಸಲು ಜನವಿರೋಧಿ ಕಾಂಗ್ರೆಸ್ ಸರ್ಕಾರ ಮುಂದಾಗಿದೆ' ಎಂದು ಆರೋಪಿಸಿದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡುಪ್ರಕಾಶ್ ಮಾತನಾಡಿ, 'ಜನರಿಗೆ ಉಪಯೋಗವಾಗಿರುವ ಜನೌಷಧಿ ಕೇಂದ್ರಗಳನ್ನು ಮೆಡಿಕಲ್ ಲಾಭಿಗೆ ಮಣಿದು ಮುಚ್ಚುವ ಹಂತಕ್ಕೆ ಕಾಂಗ್ರೆಸ್ ಸರ್ಕಾರ ಬಂದಿದೆ ಬಡವರ ಶಾಪ ಸರ್ಕಾರಕ್ಕೆ ತಟ್ಟಲಿದೆ. ಇದೀಗ ಬಿಜೆಪಿ ಸಾಂಕೇತಿಕ ಪ್ರತಿಭಟನೆ ಮಾಡಲಿದೆ. ಸರ್ಕಾರ ತನ್ನ ನಿರ್ಧಾರವನ್ನು ಹಿಂಪಡೆಯದಿದ್ದರೆ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು' ಎಂದು ಎಚ್ಚರಿಸಿದರು.

ಕಾಡಾ ಮಾಜಿ ಅಧ್ಯಕ್ಷ ನಿಜಗುಣರಾಜು, ಚೂಡಾ ಮಾಜಿ ಅಧ್ಯಕ್ಷ ಬಾಲಸುಬ್ರಹ್ಮಣ್ಯಂ ಮಾತನಾಡಿದರು. ಪ್ರತಿಭಟನೆಯಲ್ಲಿ ನಗರಸಭಾ ಅಧ್ಯಕ್ಷ ಸುರೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊನ್ನೂರು ಮಹಾದೇವಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ಶಿವು ವಿರಾಟ್, ಜಿಲ್ಲಾ ವಕ್ತಾರ ಕಾಡಹಳ್ಳಿ ಕುಮಾರ್, ನಗರ ಮಂಡಲ ಅಧ್ಯಕ್ಷ ಶಿವರಾಜ್, ಪ್ರಧಾನ ಕಾರ್ಯದರ್ಶಿಗಳಾದ ಕೂಸಣ್ಣ, ಮಹೇಶ್, ನಗರಸಭಾ ಸದಸ್ಯೆ ಕುಮುದಕೇಶವಮೂರ್ತಿ, ಮಾಜಿ ಚೂಡಾ ಮಾಜಿ ಅಧ್ಯಕ್ಷ ಕುಲಗಾಣ ಶಾಂತಮೂರ್ತಿ, ಯುವ ಮೋರ್ಚಾ ಜಿಲ್ಲಾಧ್ಯಕ್ಷ ಸೂರ್ಯ ಕುಮಾರ್, ಎಸ್‌ಟಿ ಮೋರ್ಚಾ ಜಿಲ್ಲಾಧ್ಯಕ್ಷ ಚಂದ್ರಶೇಖರ್, ಉಪಾಧ್ಯಕ್ಷ ಬುಲೆಟ್ ಚಂದ್ರು, ಎಂ.ಎಸ್.ಚಂದ್ರಶೇಖರ್, ಬೇಡರಪುರ ಬಸವಣ್ಣ, ಪರಶಿವಯ್ಯ, ಮಾಜಿ ಸದಸ್ಯ ಶಿವಣ್ಣ, ಮಂಜುನಾಥ್, ರಾಮಸಮುದ್ರ ಶಿವಣ್ಣ, ನಗರ ಮಂಡಲ ಮಾಜಿ ಅಧ್ಯಕ್ಷ ನಾಗರಾಜು, ಆನಂದ್ ಭಗೀರಥ, ಕಿರಣ್, ಪರಶಿವಯ್ಯ, ಭಾಸ್ಕರ್, ಮಣಿಕಂಠ, ರುದ್ರ, ರಮೇಶ್ ನಾಯಕ್ ಇತರರು ಭಾಗವಹಿಸಿದ್ದರು.

ಬ್ಯಾಂಕ್ ಅಧಿಕಾರಿಗಳ ವಿರುದ್ಧ ರೈತರ ಪ್ರತಿಭಟನೆ



ಬ್ಯಾಂಕ್ ಅಧಿಕಾರಿಗಳ ವಿರುದ್ಧ ಪ್ರತಿಭಟನೆ ನಡೆಸಿ ಮನವಿ ಪತ್ರ ಸಲ್ಲಿಸುತ್ತಿರುವುದು.

ಚಾಮರಾಜನಗರ: ರೈತರ ಚಿನ್ನದ ಸಾಲ ನವೀಕರಣ ಸಂದರ್ಭದಲ್ಲಿ ಅಸಲು ಮತ್ತು ಬಡ್ಡಿಯನ್ನು ಒಂದೇ ಬಾರಿಗೆ ಪಾವತಿಸಬೇಕೆಂಬ ನಿಬಂಧನೆಯನ್ನು ಹಾಕುವ ಮೂಲಕ ರೈತರಿಗೆ ಬ್ಯಾಂಕ್ ಅಧಿಕಾರಿಗಳು ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ನಗರದಲ್ಲಿ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿರುವ ಲೀಡ್ ಬ್ಯಾಂಕ್ ಮುಂಭಾಗ ಸಮಾವೇಶಗೊಂಡ ಸಂಘದ ಪದಾಧಿಕಾರಿಗಳು ಹಾಗೂ ರೈತ ಮುಖಂಡರು ಬ್ಯಾಂಕ್ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಸಂಘದ ಅಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿದರು. ಜಿಲ್ಲೆಯಲ್ಲಿರುವ ಬ್ಯಾಂಕ್‌ನ ಅಧಿಕಾರಿಗಳು ಚಿನ್ನದ ಸಾಲಕ್ಕೆ ಆರ್‌ಬಿಐ ನಿಯಮವಿದೆ. ಅಸಲು ಮತ್ತು ಬಡ್ಡಿಯನ್ನು ಸಂಪೂರ್ಣವಾಗಿ ಪಾವತಿ ಮಾಡಿದರೆ ಮಾತ್ರ ನವೀಕರಣ ಮಾಡಲಾಗುವುದು ಎಂದು ಹೇಳುತ್ತಿದ್ದಾರೆ. ಇದರಿಂದ ರೈತರು ಆತಂಕಗೊಂಡಿದ್ದಾರೆ ಎಂದು ತಿಳಿಸಿದರು.


ಪ್ರತಿಭಟನೆಯಲ್ಲಿ ಮುಖಂಡರಾದ ಹಾಲಿನ ನಾಗರಾಜ್, ಮಹೇಂದ್ರ ಸಿದ್ದರಾಜು, ಪ್ರಭುಸ್ವಾಮಿ, ಮೋಹನ್, ಚಂದ್ರು ರಾಜು, ಪುಟ್ಟಮಲ್ಲೇಗೌಡ, ಶ್ರೀಕಂಠ, ನಂದೀಶ್, ರಾಮಣ್ಣ ಇತರರಿದ್ದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ

ಮೈಸೂರು ಮಿತ್ರ

ಭಾನುವಾರ 01-06-2025

ಆಸ್ತಿಯೇ ಆಶ್ರಯ!



ವಿಶ್ವ ಪೋಷಕರ ದಿನ

ಪೋಷಕರು ಮಕ್ಕಳನ್ನು ನಂಬಬೇಕು. ಆದರೆ, ನಂಬಿ ಮೋಸ ಹೋಗದಿರಿ, ನೀವು ದುಡಿಯುವಾಗ ಕೊಡುವ ಗೌರವ, ದುಡಿಮೆ ನಿಂತಾಗ ಅಥವಾ ವಯೋನಿವೃತ್ತಿಯಾದಾಗ ನಿರೀಕ್ಷಿಸಲಾಗದು. ಕ್ರಮೇಣ ಕಡಿಮೆ ಆಗುವುದುಂಟು, ಅಲ್ಪಸ್ವಲ್ಪ ಉಳಿಸಿಕೊಳ್ಳುವುದು ದೊಡ್ಡವರ ಬುದ್ಧಿವಂತಿಕೆಯ ಮೇಲೆ ನಿಂತಿರುತ್ತದೆ. ಅವರಿಗೂ ಹಣ ಆಸ್ತಿಯನ್ನು ಕೊಡಿ, ಆದರೆ ಯಾವುದೇ ಕಾರಣಕ್ಕೂ ನಿಮ್ಮೆಲ್ಲಾ ಆಸ್ತಿಯನ್ನು ಬರೆದು ಕೊಡಬೇಡಿ. ಹಣ ನಿಮ್ಮ ಖಾತೆಯಲ್ಲಿ, ಆಸ್ತಿ ನಿಮ್ಮ ಹೆಸರಿನಲ್ಲಿ ಎಲ್ಲಿಯವರೆಗೆ ಇರುತ್ತೋ ಅಲ್ಲಿವರೆಗೆ ಮೂರೊತ್ತು ಊಟ, ಆಶ್ರಯಕ್ಕೆ ತೊಂದರೆ ಆಗದು.

ಸಾಧಕರು ಸಾರ್ವಜನಿಕ ಬದುಕಿನಲ್ಲಿ ಜೀವಮಾನವಿಡೀ ಮಾಡಿದ ಸಮಾಜದ ಕೆಲಸಗಳನ್ನು ಗುರುತಿಸಿ ಸಂಘಸಂಸ್ಥೆಗಳು ಜೀವಮಾನ ಪ್ರಶಸ್ತಿ ಕೊಟ್ಟು ಗೌರವಿಸುವರು. ಇಂಥಹ ದೊಡ್ಡ ಗೌರವಕ್ಕೆ ಪಾತ್ರರಾಗುವುದು ಕೇವಲ ಬೆರಳೆಣಿಕೆಯಷ್ಟು ಸಾಧಕರು ಮಾತ್ರ, ಗುರುತಿಸಿಕೊಳ್ಳದೆ ತೆರೆಯ ಮರೆಯಲ್ಲಿದ್ದು ಮರೆಯಾಗುವ ಸಂಖ್ಯೆ ಎಣಿಕೆಗೆ ಸಿಗದಷ್ಟಿದೆ. ನಿಷ್ಠೆಯಿಂದ ಯಾವುದಾದರೂ ಕ್ಷೇತ್ರದಲ್ಲಿ ಅವರ ಸಾಮರ್ಥ್ಯಕ್ಕೆ ಅನುಗುಣವಾಗಿ ಬಹಳ ವರ್ಷಗಳ ಕಾಲ ಪ್ರತಿಫಲಾಪೇಕ್ಷೆಗಳಿಲ್ಲದೆ ಸಮಾಜದ ಶ್ರೇಯಸ್ಸಿಗೆ ದುಡಿದಿದ್ದಕ್ಕೆ ಪಡೆಯುವ ಗೌರವ ಜೀವಮಾನ ಪ್ರಶಸ್ತಿ.

ಹೆತ್ತು-ಹೊತ್ತು ಜೀವಂತ ಇರುವಷ್ಟು ಕಾಲದವರೆಗೂ ನಮ್ಮನ್ನು ಸಾಕಿದ, ಶ್ರೇಯಸ್ಸನ್ನೇ ಬಯಸುವ ಪೋಷಕರಿಗೆ ಯಾವ ಪ್ರಶಸ್ತಿಯನ್ನು ಕೊಡಬೇಕು ಹೇಳಿ?. ಮಕ್ಕಳಿಗಾಗಿ ಜೀವವನ್ನೇ ತೇಯ್ದವರು ಜೀವಮಾನ ಪ್ರಶಸ್ತಿಗಿಂತಲೂ ದೊಡ್ಡ ಪ್ರಶಸ್ತಿಗೆ ಅರ್ಹರು, ಅವರಿಗೆ ನೆಪಮಾತ್ರಕ್ಕೆ, ಫೋಟೋಗಾಗಿ ಪ್ರಶಸ್ತಿಯನ್ನು ಕೊಟ್ಟು ಕೈತೊಳೆದುಕೊಳ್ಳಲಾಗದು. ಅದಕ್ಕೂ ಮೀರಿದ ಕೃತಜ್ಞತೆ ಹಾಗೂ ಸೇವೆ ನಮ್ಮಿಂದ ಅವರಿಗೆ ಸಿಗಬೇಕು, ಸಿಕ್ಕೇ.. ಸಿಗುವುದು. ಹೆತ್ತವರನ್ನು ನಿರ್ಲಕ್ಷಿಸುವ ಕೃತಘ್ನ ಮಕ್ಕಳು ಅಲ್ಲಲ್ಲಿ ಕೆಲವರು ಇರಬಹುದು. ಪುರಾಣ ಕಾಲದಿಂದಲೂ ಪೋಷಕರು ಪೂಜಿಸುವ ಪರಂಪರೆ ಬೆಳೆಸಿಕೊಂಡು ಬಂದಿದ್ದೇವೆ. ಕಾರಣ ನಮ್ಮದು ಭಾರತೀಯ ಸಂಸ್ಕೃತಿ.

ವಿದೇಶಗಳಲ್ಲಿ ಪೋಷಕರನ್ನು ಗೌರವಿಸುವುದು, ಆದರಿಸುವುದು ನಮಗಿಂತ ವಿಭಿನ್ನ. ಪೂಜ್ಯನೀಯ ಭಾವನೆಗಿಂತ ಹೆಚ್ಚಾಗಿ ಅವರಲ್ಲಿರುವುದು ಯಾಂತ್ರಿಕ ಮನೋಭಾವ. ಪ್ರಕೃತಿಯಲ್ಲಿನ ಜೈವಿಕ ಸಹಜವಾಗಿ ಹೆತ್ತಿದ್ದಾರೆ, ಸಾಕಿದ್ದಾರೆ ಎನ್ನುವುದಿದೆ. ನಮ್ಮಲ್ಲೂ ಕೆಲವರಿಗೆ ಆ ಗುಣ ಆವರಿಸಿಕೊಳ್ಳುತ್ತಿದೆ. ವಿಶ್ವದ ಎಲ್ಲಾ ದೇಶಗಳಲ್ಲಿ ಪೋಷಕರನ್ನು, ತಮ್ಮ ಮಕ್ಕಳಿಗಾಗಿ ಅವರ ನಿಸ್ವಾರ್ಥ ಸೇವೆ ಮತ್ತು ಸಂಬಂಧಗಳನ್ನು ಕಟ್ಟಿ ಉಳಿಸುವಲ್ಲಿ ಜೀವಮಾನವೆಲ್ಲ ಮಾಡಿದ ತ್ಯಾಗವನ್ನು ಶ್ಲಾಘಿಸಲು ಪ್ರತೀ ವರ್ಷ ಜೂನ್ 1 ಅನ್ನು 'ವಿಶ್ವ ಪೋಷಕರ ದಿನ'ವೆಂದು ವಿಶ್ವಸಂಸ್ಥೆ ಘೋಷಿಸಿತು. ಆಚರಣೆಯ ಅವಶ್ಯಕತೆ ಏತಕ್ಕಾದರೂ ಬೇಕು ಎಂದು ಅನಿಸುವುದುಂಟು, ಇಳಿವಯಸ್ಸಿನಲ್ಲಿರುವ ಪೋಷಕರಿಗೆ ಕಾಲಕ್ಕೆ ಔಷಧೋಪಚಾರ ಹಾಗೂ ಆಹಾರ ನೀಡದಿದ್ದರೂ ವರ್ಷಕ್ಕೊಮ್ಮೆ ಪೋಷಕರ ದಿನ ಆಚರಿಸುವ ಮಕ್ಕಳು, ಕೆಲವರಂತೂ ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿ ಹಂಚಿಕೊಳ್ಳಲು ವೃದ್ಧಾಶ್ರಮದಲ್ಲಿರುವ ಪೋಷಕರನ್ನು ಕರೆತಂದು ಆಚರಿಸಿ ಅಂದೇ ಬಿಟ್ಟುಬರುವ ಮಕ್ಕಳೂ ಇದ್ದಾರೆ.

ಶ್ರವಣಕುಮಾರನೆಂಬ ಸುಪುತ್ರನು ಕಣ್ಣು ಕಾಣದ ವೃದ್ಧ ಪೋಷಕರನ್ನು ಹೆಗಲ ಮೇಲೆ ಹೊತ್ತು ತೀರ್ಥಯಾತ್ರೆಗೆ ಕರೆದೊಯ್ದು ಪಿತೃಭಕ್ತಿ ಮೆರೆದಿದ್ದ ನಾಡಿದು. ಇದೇ ದಾರಿಯಲ್ಲಿ ಮೈಸೂರಿನ ಕೃಷ್ಣಕುಮಾರ್ ಎಂಬುವರು ಸ್ಕೂಟರಿನಲ್ಲಿ ತನ್ನ 70 ವರ್ಷದ ತಾಯಿಯನ್ನು ಕುಳ್ಳಿರಿಸಿಕೊಂಡು ದೇಶಾದ್ಯಂತ ಯಾತ್ರೆ ಮಾಡಿಸಿ 2 ವರ್ಷ 9 ತಿಂಗಳ ಬಳಿಕ ಮರಳಿರುವ ಆಧುನಿಕ ಶ್ರವಣಕುಮಾರ. ತೀರಿಹೋದ ಅಪ್ಪನ ಹಳೆಯ ಸ್ಕೂಟರಿನಲ್ಲಿ ಮನೆ, ಮಕ್ಕಳಿಗಾಗಿ ಸದಾ ದುಡಿಯುವ ತಾಯಿಯ ಸೇವೆ ಮಾಡಬೇಕೆಂಬ ಸಲುವಾಗಿ ಬೆಂಗಳೂರಿನಲ್ಲಿದ್ದ ಒಳ್ಳೆಯ ಕೆಲಸವನ್ನು ಬಿಟ್ಟು ತಾಯಿಯ ಬಯಕೆಯನ್ನು ಪೂರೈಸುವ ಸಲುವಾಗಿ ಹಳೆಯ ಸ್ಕೂಟರ್‌ನಲ್ಲೇ ಇಡೀ ಭಾರತವನ್ನು ಸುತ್ತಿಸಿದ್ದಾರೆ, ತನ್ನ ತಂದೆ ದಕ್ಷಿಣಮೂರ್ತಿಯವರು ಕೊಡಿಸಿದ ಸ್ಕೂಟರ್‌ನ್ನೇ ತಮ್ಮ ತಂದೆ ಎಂದೇ ಭಾವಿಸಿದ್ದಾರೆ.

ಒಳ್ಳೆಯವರಿದ್ದ ಮೇಲೆ ಎದುರಾಗಿ ಕೆಟ್ಟವರೂ ಇರುತ್ತಾರಲ್ಲವೇ, ಆಸ್ತಿಯನ್ನು ಕೊಡಲಿಲ್ಲವೆಂದು, ಕಲಿತ ಚಟಗಳಿಗೆ ಖರ್ಚಿಗೆ ಹಣ ಕೊಡಲಿಲ್ಲವೆಂದು ಅಥವಾ ಬೇರೆ ಕಾರಣಗಳಿಗಾಗಿ ಹೆತ್ತವರನ್ನು ಕೊಲೆಗೈದಿರುವುದನ್ನು, ಮನೆಯಿಂದ ಹೊರಹಾಕಿದವರನ್ನು, ವೃದ್ಧಾಶ್ರಮಕ್ಕೆ ಕಳುಹಿಸಿದವರನ್ನು ನಮ್ಮ ಕಣ್ಣು ಕಂಡಿದೆ. ಪೋಷಕರಿಗೆ ಕೊಡುವ ಹಿಂಸೆಗಳು ನಿತ್ಯವೂ ಪತ್ರಿಕೆಗಳಲ್ಲಿ ಹಾಗೂ ದೃಶ್ಯ ಮಾಧ್ಯಮಗಳಲ್ಲಿ ಕ್ರೈಂ ಸ್ಟೋರಿಯಾಗಿ ಬರುತ್ತಿರುವುದನ್ನು ನೋಡಿದ್ದೇವೆ.

ಇಂಥಹ ಕೆಟ್ಟ ಮಕ್ಕಳನ್ನು ಪಡೆದ ಜೀವಗಳು ನೊಂದುಕೊಳ್ಳಬಾರದು ಎಂಬ ಸದುದ್ದೇಶದಿಂದ ಯುವಪೀಳಿಗೆಯನ್ನು ಪೋಷಕರು ಮಕ್ಕಳಿಗಾಗಿ ಅವರ ನಿಸ್ವಾರ್ಥ ಸೇವೆ, ಬದ್ಧತೆ ಮತ್ತು ಸಂಬಂಧವನ್ನು ಪೋಷಿಸುವುದಕ್ಕಾಗಿ ಜೀವಮಾನದ ತ್ಯಾಗವನ್ನು ಮನವರಿಕೆ ಮಾಡಿ ಜಾಗೃತಗೊಳಿಸುವುದಕ್ಕಾಗಿ ಪ್ರತೀ ವರ್ಷ ಜೂನ್ ಒಂದರಂದು ಜಾಗತಿಕ ಪೋಷಕರ ದಿನವನ್ನು ಆಚರಿಸಲಾಗುತ್ತಿದೆ. ಕೌಟುಂಬಿಕ ವ್ಯವಸ್ಥೆಯ ತಿಳುವಳಿಕೆಯು ಇದ್ದಾಗಲೇ ಮಾನವ ಪೀಳಿಗೆ ನಾಗರಿಕತೆಯ ಸನ್ಮಾರ್ಗದಲ್ಲಿ ಮುಂದುವರಿಯಲಿಕ್ಕೆ ಸಾಧ್ಯವಾಗುವುದು, ಇಲ್ಲವಾದರೆ ಸಮಾಜದಲ್ಲಿ ಕ್ರೌರ್ಯಗಳು ಮಿತಿಮೀರಿ ತನ್ನ ದುಷ್ಟಶಕ್ತಿಯಿಂದ ಶಾಂತಿ ನೆಮ್ಮದಿಗೆ ಭಂಗ ಉಂಟಾಗುವುದು.

ಹಬ್ಬಹರಿದಿನಗಳ ಆಚರಣೆಯನ್ನು ನಮ್ಮಲ್ಲಿ ತಲತಲಾಂತರದಿಂದ ಆಚರಿಸಿಕೊಂಡು ಬರುತ್ತಿರುವ ಉದ್ದೇಶಗಳಲ್ಲಿ ಇದು ಸಹ ಒಂದು. ಪೋಷಕರನ್ನು ನಮ್ಮಲ್ಲಿ ಆಚರಿಸಿಕೊಂಡು ಬಂದ ಪದ್ಧತಿಯನ್ನು ಅನುಕರಿಸಿಯೇ ವಿದೇಶಿಗರು ಪರ್ಯಾಯವಾಗಿ ವರ್ಷದ ಎಲ್ಲಾ ದಿನಗಳನ್ನು ಜಾಗತಿಕ ದಿನಗಳನ್ನಾಗಿ, ಪ್ರತಿಯೊಂದು ದಿನಕ್ಕೂ ಒಂದೊಂದು ವಿಷಯವನ್ನಾಧರಿಸಿ ಆಚರಿಸಿಕೊಂಡು ಬರುವಂತಾಗಿದೆ.

ದಕ್ಷಿಣ ಕೊರಿಯಾದಲ್ಲಿ ಮೇ 8 ರಂದು ಮತ್ತು ಅಮೆರಿಕಾದಲ್ಲಿ ಜುಲೈ ನಾಲ್ಕನೇ ಭಾನುವಾರದಂದು ಪೋಷಕರ ದಿನವನ್ನು ಆಚರಿಸಲಾಗುತ್ತದೆ. 1973ರಂದು ದಕ್ಷಿಣ ಕೊರಿಯಾದಲ್ಲಿ ಪ್ರಾರಂಭಗೊಂಡ ಈ ದಿನವು 1994 ರಲ್ಲಿ ಯುನೈಟೆಡ್ ಸ್ಟೇಟ್ಸ್‌ನ ಅಧ್ಯಕ್ಷರಾದ ಬಿಲ್ ಕ್ಲಿಂಟನ್ ಅವರ ಮುಂದಾಳತ್ವದಲ್ಲಿ ಜೂನ್ ಒಂದನ್ನು ವಿಶ್ವಸಂಸ್ಥೆಯು ಪೋಷಕರು ತಮ್ಮ ಮಕ್ಕಳ ಮೇಲಿಟ್ಟಿರುವ ಬದ್ಧತೆಯ ಕೃತಜ್ಞತೆಯ ಸಂಕೇತವಾಗಿ 'ಪೋಷಕರ ಜಾಗತಿಕ ದಿನ' ಎಂದು ಘೋಷಿಸಿತು, ಪೋಷಕರ ಜೀವಮಾನ ತ್ಯಾಗವನ್ನು ಶ್ಲಾಘಿಸಲು ವಿಶೇಷ ದಿನವಾಗಿದೆ.

2025ರ ಪೋಷಕರ ದಿನಕ್ಕೆ ಆಯ್ಕೆಯ ವಿಷಯ ಅಥವಾ ಥೀಮ್ 'ಪೋಷಕರನ್ನು ಬೆಳೆಸುವುದು (Raising Parents)', ಪೋಷಕರನ್ನು ಆರೈಕೆ ಮಾಡುವಂತೆ ಮಕ್ಕಳಿಗೆ ಅಗತ್ಯವಿರುವ ಜ್ಞಾನವನ್ನು ಕೊಡುವುದಾಗಿರುತ್ತದೆ.

ಪೋಷಕರು ಮಕ್ಕಳನ್ನು ನಂಬಬೇಕು ಆದರೆ ನಂಬಿ ಮೋಸ ಹೋಗದಿರಿ, ನೀವು ದುಡಿಯುವಾಗ ಕೊಡುತ್ತಿದ್ದ ಗೌರವ, ದುಡಿಮೆ ನಿಂತಾಗ ಅಥವಾ ವಯೋನಿವೃತ್ತಿಯಾದಾಗ ನಿರೀಕ್ಷಿಸಲಾಗದು ಕ್ರಮೇಣ ಕಡಿಮೆ ಆಗುವುದುಂಟು, ಅಲ್ಪಸ್ವಲ್ಪ ಉಳಿಸಿಕೊಳ್ಳುವುದು ದೊಡ್ಡವರ ಬುದ್ಧಿವಂತಿಕೆಯ ಮೇಲೆ ನಿಂತಿರುತ್ತದೆ. ಅವರಿಗೂ ಹಣ ಆಸ್ತಿಯನ್ನು ಕೊಡಿ, ಆದರೆ ಯಾವುದೇ ಕಾರಣಕ್ಕೂ ನಿಮ್ಮೆಲ್ಲಾ ಆಸ್ತಿಯನ್ನು ಬರೆದುಕೊಡಬೇಡಿ, ಹಣ ನಿಮ್ಮ ಖಾತೆಯಲ್ಲಿ, ಆಸ್ತಿ ನಿಮ್ಮ ಹೆಸರಿನಲ್ಲಿ ಎಲ್ಲಿಯವರೆಗೆ ಇರುತ್ತೋ ಅಲ್ಲಿವರೆಗೆ ಮೂರೊತ್ತು ಊಟ, ಆಶ್ರಯಕ್ಕೆ ತೊಂದರೆ ಆಗದು.

ಹೆಚ್ಚಿನ ಸಮಯ ಹಿರಿಯ ನಾಗರಿಕರ ಸಂಪರ್ಕದಲ್ಲಿ ಇರುವುದರಿಂದ ಅವರ ಕುಂದುಕೊರತೆಗಳೇನು ಎನ್ನುವುದನ್ನು ಅವರಿಂದಲೇ ಕೇಳಿ ತಿಳಿದಿದ್ದೇನೆ. ಎರಡೂ ಸ್ವಭಾವದ ಮಕ್ಕಳು ಇರುವ ಪೋಷಕರು ಇದ್ದಾರೆ, ಶ್ರವಣಕುಮಾರನ ಬಗ್ಗೆ ಮೊದಲೇ ಹೇಳಿದಂತೆ, ಇಲ್ಲಿಯೂ ಅಂತಹ ಮಗನನ್ನು ಪಡೆದ ತೊಂಬತ್ತರ ವೃದ್ಧರಿದ್ದಾರೆ. ಆ ಮಗನ ವಯಸ್ಸು ಐವತ್ತು ಇರಬಹುದು. ಈತ ಹೆತ್ತವರ ಸೇವೆ ಮಾಡುವುದರಲ್ಲಿ ಶ್ರವಣಕುಮಾರರ ಸಾಲಿನಲ್ಲಿ ನಿಲ್ಲುತ್ತಾನೆ. ಆದರೆ, ನನ್ನ ಅಪ್ಪ ಕೇಳಿದಷ್ಟು ಹಣ ಆಸ್ತಿ ಕೊಡಲಿಲ್ಲವೆಂದು ಮನೆ ಬಿಟ್ಟು ಹೊರಗೆ ಬಂದಿದ್ದಾರೆ. ಮಕ್ಕಳು, ಮೊಮ್ಮಕ್ಕಳು ಇದ್ದರೂ ಈ ವೃದ್ಧ ತಂದೆ-ತಾಯಿ ಇಬ್ಬರೇ ದೊಡ್ಡ ಬಂಗಲೆಯಲ್ಲಿ ವಾಸವಿರುವುದು ಮಕ್ಕಳಲ್ಲಿನ ಗುಣದ ಇನ್ನೊಂದು ಮುಖ.

ಇಂದಿನ ಯುವಕರೇ ಮುಂದಿನ ಮುದುಕರು, ವೃದ್ಧರಾಗಿ ಕೈಕಾಲುಗಳು ಸೋತು ನಿಂತಾಗ ನಿಮಗೂ ಮಕ್ಕಳು ಪಾಲನೆ ಪೋಷಣೆ ಮಾಡಬೇಕಾಗುತ್ತದೆ. ಇವತ್ತು ಆ ಕೆಲಸವನ್ನು ಶ್ರದ್ಧೆಯಿಂದ ಹೆತ್ತವರಿಗೆ ಮಾಡಿದರೆ ಮಕ್ಕಳು ಅದನ್ನೇ ಅನುಕರಣೆ ಮಾಡುತ್ತಾರೆ. ಪೋಷಕರ ಜಾಗತಿಕ ದಿನದ ಉದ್ದೇಶವೂ ಅದೆ. ಇಂದು ನಿಮ್ಮ ಪೋಷಕರನ್ನು ಮಕ್ಕಳಂತೆ ನೋಡಿಕೊಳ್ಳಿ, ಮಾಡುವುದನ್ನು ನೋಡಿ ಬೆಳೆಯುವ ಮಕ್ಕಳು ಮುಂದೆ ನಿಮ್ಮ ಮುಪ್ಪಿನ ಕಾಲಕ್ಕೆ ಅದೇ ದಾರಿಯಲ್ಲಿ ನಿಂತು ಪೋಷಣೆ ಮಾಡುವರು.




ಮಿರ್ಲೆ ಚಂದ್ರಶೇಖರ್
ಮೊ. 99161 29654


ಮಕ್ಕಳ ಚಿತ್ರಕಥೆ

ಕತ್ತೆಯ ಪಾಡು

■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199



ಒಬ್ಬ ಮಡಿವಾಳ ಇದ್ದ. ಅವನು ಕತ್ತೆ ಹಾಗೂ ನಾಯಿಯನ್ನು ಸಾಕಿಕೊಂಡಿದ್ದ.



ಒಂದು ದಿನ ರಾತ್ರಿ ಆ ಮಡಿವಾಳ ಗಾಢ ನಿದ್ದೆಯಲ್ಲಿದ್ದಾಗ ಮನೆಗೆ ಕಳ್ಳ ನುಗ್ಗಿದ. ಆತ ಬರುತ್ತಿರುವುದು ಕತ್ತೆ ಹಾಗೂ ನಾಯಿಗೆ ಗೊತ್ತಾಯಿತು.




ಆಗ ಬೊಗಳಬೇಕಾಗಿದ್ದ ನಾಯಿ ಸುಮ್ಮನಿತ್ತು. ಏಕೆಂದರೆ ಅದಕ್ಕೆ ಯಜಮಾನನ ಮೇಲೆ ಮುನಿಸು. ತನ್ನನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಎಂಬ ಕೋಪ. ಹೀಗಾಗಿ ತಾನು ಬೊಗಳಿ ಮಾಲೀಕನನ್ನು ಎಚ್ಚರಿಸುವುದು ಬೇಡ....ಹೀಗೆ ಮಾಡಿದರೆ ಈತನಿಗೆ ತಕ್ಕ ಪಾಠ ಕಲಿಸಿದಂತಾಗುತ್ತದೆ ಎಂದು ಯೋಚಿಸಿತು.



ನಾಯಿ ಬೊಗಳದಿದ್ದುದನ್ನು ನೋಡಿ ಕತ್ತೆ ಗಾಬರಿಗೆ ಬಿತ್ತು. ಆದರೆ ನಾಯಿಯು ತನ್ನ ನಿರ್ಧಾರ ಬದಲಿಸದೆ ನಿರಾಳವಾಗಿ ಮಲಗಿಬಿಟ್ಟಿತ್ತು.




ಮತ್ತೇನು ದಾರಿ ಕಾಣದ ಸ್ವಾಮಿನಿಷ್ಠೆಯ ಕತ್ತೆ ತಾನೇ ಅರಚತೊಡಗಿತು. ಈ ಅರಚಾಟದಿಂದ ಕಳ್ಳನೇನೋ ಹೆದರಿ ಕಾಲ್ಕಿತ್ತು ಓಡಿಹೋದ.



ಆದರೆ ನಿದ್ದೆಯಿಂದೆದ್ದ ಮಡಿವಾಳ, "ಹೊತ್ತು-ಗೊತ್ತು ಇಲ್ಲದೇ ಸರಿರಾತ್ರಿ ಅರಚಾಡಿ ನಿದ್ರೆ ಕೆಡಿಸುತ್ತೀಯಾ...!" ಎಂದು ಕತ್ತೆಗೆ ಕೋಲಿನಿಂದ ಚೆನ್ನಾಗಿ ಬಾರಿಸಿಬಿಟ್ಟ!

ನೀತಿ :- ನಮ್ಮದಲ್ಲದ ಕೆಲಸಕ್ಕೆ ನಾವು ಕೈ ಹಾಕಿ ಮುಖಭಂಗ ಅನುಭವಿಸಬಾರದು.



ವಾರಭವಿಷ್ಯ

01.06.2025 ರಿಂದ 07.06.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ವೃಷಭ, ಚಂದ್ರ-ಕಟಕ, ಸಿಂಹ, ಕನ್ಯಾ, ತುಲಾ, ಕುಜ-ಕಟಕ, ಬುಧ - ವೃಷಭ, ಮಿಥುನ, ಗುರು-ಮಿಥುನ, ಶುಕ್ರ-ಮೇಷ, ಶನಿ-ಮೀನ, ರಾಹು-ಕುಂಭ ಮತ್ತು ಕೇತು-ಸಿಂಹ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಯತ್ನ ಕಾರ್ಯಗಳು ನಿಧಾನಗತಿಯಲ್ಲಿ ಸಾಗುವುದು. ವಿದ್ಯಾರ್ಥಿಗಳಿಗೆ ಓದಿನಲ್ಲಿ ನಿರಾಸಕ್ತಿ ಕಾಡುವುದು. ಸ್ಥಿರಾಸ್ತಿ ವಿಲೇವಾರಿಯಲ್ಲಿ ವಿಳಂಬ. ನಿಮ್ಮ ರಾಶ್ಯಾಧಿಪತಿ ಕುಜ ನೀಚಸ್ಥಾನದಲ್ಲಿ ಸಂಚರಿಸುವ ಕಾರಣ ನಿಮ್ಮ ಸ್ಥಾನಮಾನಗಳಿಗೆ ಆತಂಕ ಎದುರಾಗುವುದು. ವಾರದ ಉತ್ತರಾರ್ಧಕ್ಕೆ ಖಾಸಗಿ ಉದ್ಯೋಗಿಗಳಿಗೆ ಹೆಚ್ಚಿನ ಜವಾಬ್ದಾರಿ ಹಾಗೂ ವರಮಾನದಲ್ಲಿ ಹೆಚ್ಚಳ. ಹವಳ ತಾಮ್ರ ಪದಾರ್ಥ ಪ್ರಾಪ್ತಿ.

ಶ್ರೀ ಗಣಪತಿ ಸೇವೆ. ಶುಭ ಸಂಖ್ಯೆ-4

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಸಾಮಾಜಿಕವಾಗಿ ಗೌರವಾದರಗಳಿಗೆ ಭಾಜನರಾಗುವಿರಿ. ಹಿರಿಯರ ಸಲಹೆಯಂತೆ ನಡೆದರೆ ಶುಭವಾಗುವುದು. ಫೈನಾನ್ಸ್ ಸಂಸ್ಥೆಗಳಿಗೆ ಆದಾಯದಲ್ಲಿ ಹೆಚ್ಚಳ. ಯತ್ನ ಕಾರ್ಯಗಳು ಯಶಸ್ಸಿನ ಹಾದಿಯಲ್ಲಿ ಸಾಗುವುದು. ಕುಶಲ ಕರ್ಮಿಗಳಿಗೆ ಸರ್ಕಾರದಿಂದ ಮನ್ನಣೆ ದೊರಕುವುದು. ಆಹಾರ-ವಿಹಾರಗಳಲ್ಲಿ ಸಂಯಮವಿರಲಿ. ಸಾಯಿಲ್ ವ್ಯಾಪಾರಿಗಳಿಗೆ ದೊಡ್ಡ ಆರ್ಡರ್ ದೊರೆಯುವುದು.

ಶ್ರೀ ದೇವೀ ಸ್ತುತಿ. ಶುಭ ಸಂಖ್ಯೆ-5

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

'ಪ್ರಯತ್ನ ಪುರುಷಾಧೀನ, ಫಲ ದೈವಾಧೀನ', ಇದನ್ನು ಅರಿತು ನಡೆದರೆ ಮನಃಶಾಂತಿ. ಯಾವುದೇ ನಿರ್ಧಾರಕ್ಕೆ ಮುನ್ನ ನಿಧಾನಿಸಿ. ನಂಬಲರ್ಹದಲ್ಲದವರೊಡನೆ ಹಣಕಾಸಿನ ವ್ಯವಹಾರ ಮಾಡಿ ನಷ್ಟಕ್ಕೆ ಗುರಿಯಾಗುವಿರಿ. ವಾರ ಮಧ್ಯೆ ಕೈಗೆ ಹಣ ಬರುತ್ತದೆ. ಆದರೆ ಸ್ವೇಚ್ಛಾಚಾರದಿಂದ ತೊಂದರೆಗೆ ಸಿಲುಕುವಿರಿ. ಸೌಜನ್ಯದ ಮಾತಿನಿಂದ ನೆರೆಹೊರೆಯವರ ಮನವನ್ನು ಗೆಲ್ಲುವಿರಿ. ಖಯ್ಯಾಲಿ ಪ್ರವಾಸಗಳು ಬೇಡ.

ಶ್ರೀ ವಿಷ್ಣು ನಾಮ ಜಪ. ಶುಭ ಸಂಖ್ಯೆ-8

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ವಾರದ ಆದಿಗೆ ನಿಮ್ಮ ರಾಶಿಗೆ ಚಂದ್ರನ ಆಗಮನದಿಂದ ಹಣಕಾಸಿನ ಪರಿಸ್ಥಿತಿ ಸುಧಾರಿಸಲಿದೆ. ಅಂದುಕೊಂಡ ಕೆಲಸ ಅಂದುಕೊಂಡ ಸಮಯಕ್ಕೆ ಆಗುವುದು. ಶುಭ ಕಾರ್ಯಕ್ಕೆ ಪ್ರೇರಣೆ. ಅಧಿಕಾರಿಗಳ ಭೇಟಿಯಿಂದ ಕಾರ್ಯ ಸಾಧನೆ. ಗೆಳೆಯರ ಸಂಪರ್ಕದಿಂದ ಹರುಷ. ವಾರದ ಕಡೆಗೆ ದ್ರವ್ಯಲಾಭ, ಹೋಟೆಲ್, ಕೇಟರಿಂಗ್ ವ್ಯವಹಾರಿಗಳಿಗೆ ಹೇರಳ ಧನಲಾಭ. ಸಮುದ್ರ ಜನ್ಯ ವಸ್ತು ವ್ಯಾಪಾರದಿಂದ ಧನಲಾಭ.

ಶ್ರೀ ದುರ್ಗಾ ಪರಮೇಶ್ವರಿ ದರ್ಶನ. ಶುಭ ಸಂಖ್ಯೆ-1

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಗುರು ಸಂಚಾರ ಶುಭವಿರುವ ಕಾರಣ ಪ್ರತಿದಿನ ನೀವು ಮಾಡುವ ಕೆಲಸಗಳು ನಿಮ್ಮ ಗುರಿ ಈಡೇರಿಕೆಗೆ ಸಹಾಯಕವಾಗಲಿದೆ. ಒಳ್ಳೆಯ ಜನರ ಸಹವಾಸ ದೊರೆತು ನಿಮಗೂ ಒಳ್ಳೆಯದಾಗುವುದು. ವಾರ ಮಧ್ಯೆ ನಿಮ್ಮ ಪೂರ್ವ ಉಪಾಧ್ಯಾಯರ ಭೇಟಿ, ಸವಿ ನೆನಪುಗಳ ಮೆಲಕು. ಸತಿ-ಪತಿಯರಲ್ಲಿ ವಾತ್ಸಲ್ಯ ವೃದ್ಧಿಸುವುದು. ಉದ್ಯೋಗ ಅರಸುವವರಿಗೆ ಶುಭ ವಾರ್ತೆ ಬಂದು ನಿರಾಳವೆನಿಸುವುದು.

ಶ್ರೀ ಸೂರ್ಯಾಷ್ಟಕ ಪಠಿಸಿ. ಶುಭ ಸಂಖ್ಯೆ-3

ಕನ್ಯಾ (ಟೊ.ಪ.ಪಿ.ಪು.ಫ.ಣ.ಠ.ಪೆ.ಪೊ)

ಜಯಾಪಜಯಗಳು ಜೊತೆ ಜೊತೆಯಾಗಿಯೇ ಬರುತ್ತವೆ. ಹಾಗಂತ ಕೈಚೆಲ್ಲಿ ಕೂರುವ ಅಗತ್ಯವಿಲ್ಲ. ಕೈಗೆ ಹಣ ಬಂದರೂ ಕ್ಷಣ ಮಾತ್ರದಲ್ಲಿ ಜೇಬು ಖಾಲಿ. ನಿಮ್ಮ ಆರೋಗ್ಯದ ಬಗ್ಗೆ ಅಸಡ್ಡೆ ತೋರಬೇಡಿ. ನ್ಯಾಯಸಮ್ಮತವಲ್ಲದ ಕೆಲಸಗಳಿಂದ ದೂರವಿರಿ. ಅನ್ಯಥಾ ಸಂಕಷ್ಟಕ್ಕೆ ಗುರಿಯಾಗುವಿರಿ. ಮುಂದಿನ ಒಳಿತಿಗಾಗಿ ಈಗ 'ಕಾಲಾಯ ತಸ್ಮೈನಮಃ' ಎಂಬಂತೆ ಶಾಂತವಾಗಿರಿ. ಜಲಗಂಡವಿದೆ ಎಚ್ಚರಿಕೆಯಾಗಿರಿ.

ಶ್ರೀ ವೆಂಕಟೇಶ್ವರ ಪ್ರಾರ್ಥನೆ. ಶುಭ ಸಂಖ್ಯೆ-7

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

'ಸಮತೋಲನ ಮನಸ್ಸು ಸ್ವರ್ಗಕ್ಕೆ ದಾರಿ'. ಇಚ್ಛಿತ ಕಾರ್ಯಗಳು ಕೈಗೂಡಬೇಕೆಂದರೆ ಪ್ರಾಮಾಣಿಕ ಪ್ರಯತ್ನ, ದೈವ ಸಹಾಯ ಎರಡೂ ಬೇಕು. ಗುರು ಹಾಗೂ ಶನಿಗ್ರಹಗಳ ಶುಭ ಸಂಚಾರದಿಂದ ಜೀವನದಲ್ಲಿ ಉನ್ನತವಾದುದನ್ನು ಸಾಧಿಸುವ ಯೋಗ ಬಂದಿದೆ. ಶ್ರೀಮತಿಯ ಸಲಹೆ, ಮಾರ್ಗದರ್ಶನಗಳು ನಿಮ್ಮ ಏಳಿಗೆಗಾಗಿಯೇ ಎಂಬುದನ್ನು ಸ್ವೀಕರಿಸಿ. ಮನೆಗೆ ನೆಂಟರಿಷ್ಟರ ಆಗಮನ ಅವರ ಸತ್ಕಾರಕ್ಕೆ ಹಣ ವ್ಯಯ.

ಶ್ರೀ ಸಪ್ತಮಾತೃಕಾದೇವಿ ದರ್ಶನ. ಶುಭ ಸಂಖ್ಯೆ-1

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ

ಈ ವಾರದಲ್ಲಿ 'ದುರ್ಭಿಕ್ಷದಲ್ಲಿ ಅಧಿಕಮಾಸ' ಎಂಬಂತೆ ನಡೆದೀತು. ವರಮಾನ ಹೆಚ್ಚಾದಂತೆ ಖರ್ಚುಗಳೂ ಹೆಚ್ಚುವುದು. ಗುರು ಹಿರಿಯರ ಮಾತಿಗೆ ಮನ್ನಣೆ ನೀಡಿದರೆ ಹಿತ. ನಿಮ್ಮ ವಿರೋಧಿಗಳೇ ನಿಮ್ಮ ಮಿತ್ರತ್ವ ಬಯಸಿ ಬರುವರು, ತಿರಸ್ಕರಿಸದಿರಿ. ಯಾರಾದರೂ ವಿರುದ್ಧವಾಗಿ ಮಾತನಾಡಿದಾಗ ಪ್ರತಿಯಾಡಬೇಡಿ. ರಾಹು-ಕೇತುಗಳು ಅಶುಭರಿದ್ದು ನೀವು ಮಾಡುವ ತಂತ್ರ ನಿಮಗೇ ತಿರುಗುಬಾಣವಾಗಬಹುದು.

ಶ್ರೀ ನೃಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ-2

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ವಾರದಾರಂಭಕ್ಕೆ ಆರೋಗ್ಯದಲ್ಲಿ ಸುಧಾರಣೆ, ಲವಲವಿಕೆಯ ಜೀವನ. ನೀವು ಇತರರೊಡನೆ ಸಕಾರಾತ್ಮಕವಾಗಿ ಇದ್ದರೆ ಎಲ್ಲರೂ ಇಷ್ಟಪಡುತ್ತಾರೆ. ಹಿರಿಯರ ನೈತಿಕ ಬೆಂಬಲ ದೊರೆತು ಸ್ಥಗಿತವಾಗಿದ್ದ ಜರೂರು ಕೆಲಸಗಳು ಪ್ರಗತಿಯ ಹಾದಿಯಲ್ಲಿ ಸಾಗುವುದು. ಚತುರ್ಥಸ್ಥಿತ ಶನಿದೇವ ನಿಮ್ಮನ್ನು ಕಾಡಿಸಿದರೂ ನಿಮ್ಮ ರಾಶಿಸ್ವಾಮಿ ಗುರು ನಿಮ್ಮ ಸಕಲ ಚರ್ಯೆಗಳನ್ನೂ ರಕ್ಷಿಸುವುದು.

ಶ್ರೀ ಗುರುಗ್ರಹ ಪ್ರಾರ್ಥನೆ. ಶುಭ ಸಂಖ್ಯೆ-8

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಸಪ್ತಾಹದ ಆದಿಗೆ ಗೊತ್ತು ಗುರಿಯಿಲ್ಲದೆ ಓಡಾಟಗಳು, ದೇಹಕ್ಕೆ ಆಯಾಸ. ನಿರೀಕ್ಷಿತ ಫಲ ಪಡೆಯುವಲ್ಲಿ ವಿಫಲತೆ, ಅಸ್ಥಿರವಾದ ಮನಸ್ಸು. ವಾರ ಮಧ್ಯೆ ಆಪ್ತೇಷ್ಟರ ಸ್ನೇಹಮಯ ಸೌಹಾರ್ದಗಳಿಗೆ ಮಾನಸಿಕ ಉಲ್ಲಾಸ. ಸರ್ಕಾರಿ ನೌಕರರಿಗೆ ಬೇಡದ ಜಾಗಕ್ಕೆ ವರ್ಗ ಹಾಗೂ ಪರಸ್ಥಳದಲ್ಲಿ ಪರಿಪಾಟಲುಗಳು. ಕೇಟರಿಂಗ್ ವ್ಯವಹಾರದವರಿಗೆ ಡಿಮ್ಯಾಂಡ್ ಜಾಸ್ತಿ. ನೆರೆಹೊರೆಯಲ್ಲಿನ ವಿವಾದಗಳು ಸುಖಾಂತ್ಯವಾಗುವುದು.

ಶ್ರೀ ಹರಿನಾಮ ಸ್ಮರಣೆ. ಶುಭ ಸಂಖ್ಯೆ-3

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಗುರು ಅನುಗ್ರಹಿಸಿದ್ದನ್ನು ಜನ್ಮ ಶನಿ ಕೆಡಿಸುತ್ತಲಿದ್ದಾನೆ. 'ನಂಬಿ ಕೆಟ್ಟವರಿಲ್ಲವೋ ಹರಿಯ, ನಂಬದವರು ಕೆಟ್ಟರೆ ಕೆಡಲಿ ಬಿಡಿ' ಎಂಬ ದಾಸರವಾಣಿಯನ್ನು ಅನುಸರಿಸಿ ನಡೆಯಿರಿ, ಕೈಗೊಂಡ ಕೆಲಸ ಕಾರ್ಯಗಳಲ್ಲಿ ಜಯಶೀಲರಾಗುವಿರಿ. ಸರಾಫ್ ವ್ಯಾಪಾರಿಗಳಿಗೆ ಹೇರಳ ವ್ಯಾಪಾರ ಹಾಗೂ ಧನಲಾಭ. ಇಂಜಿನಿಯರ್‌ಗಳಿಗೆ ಹೊಸ ಯೋಜನೆಗಳು ದೊರಕುವುದು. ವಾರಾಂತ್ಯಕ್ಕೆ ಪುಣ್ಯಕ್ಷೇತ್ರ ಸಂದರ್ಶನ.

ಶ್ರೀ ಶನಿಚಾಲೀಸ ಪಠಿಸಿ. ಶುಭ ಸಂಖ್ಯೆ-4

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದ ಆದಿಗೆ ಮನೆಯಲ್ಲಿ ಹರುಷದ ವಾತಾವರಣ ನಿರೀಕ್ಷಿತ ಧನ ಕೈ ಸೇರುವುದು. ಪ್ರಿಯ ಜನರ ಸಾಂಗತ್ಯ ಹಾಗೂ ಶತೃನಾಶ. ರಾಹು-ಕೇತುಗಳ ಪ್ರಭಾವದಿಂದ ವಿವಾದದ ಸುಳಿಯಲ್ಲಿ ಸಿಲುಕುವಿರಿ. ಮನೆ ಮಂದಿಯೇ ನಿಮ್ಮ ಮನಃಶಾಂತಿಗೆ ಭಂಗ ಉಂಟು ಮಾಡುವರು. ಎಲ್ಲವನ್ನೂ ಸಾತ್ವಿಕ ಭಾವನೆಯಿಂದ ಸ್ವೀಕರಿಸಿದರೆ ಕ್ಷೇಮ. 'ಮಾತು ಬೆಳ್ಳಿ ಮೌನ ಬಂಗಾರ'. ನರ ಸಂಬಂಧಿ ಕಾಯಿಲೆ ಕಾಡಿಸಬಹುದು.

ಶ್ರೀ ಮಂತ್ರಾಲಯ ಪ್ರಭುಗಳ ಉಪಾಸನೆ. ಶುಭ ಸಂಖ್ಯೆ-5

ಮೈಸೂರು ಮಿತ್ರ

ಭಾನುವಾರ 1 ಜೂನ್ 2025

ಶಿಥಿಲಾವಸ್ಥೆಯಲ್ಲಿರುವ ಕೆ.ಆರ್.ನಗರ ತಾಲೂಕು ಪಂಚಾಯಿತಿ ಕಚೇರಿ ಕಟ್ಟಡ

ಕಾರ್ಯಕ್ರಮದ ನಂತರ ನ್ಯಾಯಾಧೀಶರುಗಳ ತರಾಟೆ, ಅಸಮಾಧಾನ



ಶಿಥಿಲಗೊಂಡಿರುವ ಕಟ್ಟಡವನ್ನು ನ್ಯಾಯಾಧೀಶರಾದ ಬಿ.ಸಿ.ರವೀಂದ್ರ ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಎಸ್.ಚಂದನ್ ಪರಿಶೀಲಿಸಿದರು.

ಕೆ.ಆರ್.ನಗರ: ಪಟ್ಟಣದ ತಾಲೂಕು ಪಂಚಾಯಿತಿ ಕಟ್ಟಡ ಶಿಥಿಲಾವ್ಯವಸ್ಥೆ ಗೊಂಡಿರುವುದನ್ನು ಕಂಡ ನ್ಯಾಯಾಧೀಶರು ತಾಲೂಕು ಪಂಚಾಯಿತಿ ಅಧಿಕಾರಿಗಳನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ಹಿರಿಯ ಸಿವಿಲ್ ನ್ಯಾಯಾಧೀಶ ಬಿ.ಸಿ. ರವೀಂದ್ರ ಮತ್ತು ಪ್ರಧಾನ ಸಿವಿಲ್ ನ್ಯಾಯಾಧೀಶ ಎಸ್.ಚಂದನ್ ಅವರು ತಾಪಂ ಕಚೇರಿ ಸಭಾಂಗಣದಲ್ಲಿ ನಡೆದ ಅಂತರರಾಷ್ಟ್ರೀಯ ಕಾರ್ಮಿಕ ದಿನಾಚರಣೆ ಕಾರ್ಯಕ್ರಮ ಮುಗಿಸಿ ಹೊರ ಬಂದ ನಂತರ ತಾಲೂಕು ಪಂಚಾಯಿತಿ ಕಟ್ಟಡ ಶಿಥಿಲಾವಸ್ಥೆಗೆ ತಲುಪಿ ಕುಸಿಯುವ ಹಂತ ತಲುಪಿರುವುದನ್ನು ಕಂಡ ಆಶ್ವರ್ಯಚಕಿತರಾಗಿ ಇಲ್ಲಿ ನೌಕರರು ಹೇಗೆ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಪ್ರಶ್ನಿಸಿದರು.

ಕಚೇರಿಯಲ್ಲಿ ಇರುವ ಕಾರ್ಯ ನಿರ್ವಹಣಾಧಿಕಾರಿ, ಆಡಳಿತಾಧಿಕಾರಿ ಮತ್ತು ಗ್ಯಾರಂಟಿ ಸಮಿತಿ ಅಧ್ಯಕ್ಷರುಗಳ ಕೊಠಡಿಗಳು ಸ್ವಚ್ಛವಾಗಿವೆ. ಆದರೆ ಕಚೇರಿಯ ಆವರಣ ಮತ್ತು ಶೌಚಾಲಯ ಗಬ್ಬೆದ್ದು ನಾರುತ್ತಿದ್ದು ಇದನ್ನು ಹೇಳುವವರು ಹಾಗೂ ಕೇಳುವವರು ಯಾರು ಇಲ್ಲವೆ? ಎಂದು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ತಾ.ಪಂ.ಆವರಣದಲ್ಲಿ ಸಾರ್ವಜನಿಕ ಶೌಚಾಲಯ ಇಲ್ಲದಿರುವುದು ಮತ್ತು ಕಛೇರಿ ಸಂಪರ್ಕ ರಸ್ತೆ ಹಾಳಾಗಿರುವುದನ್ನು ಕಂಡು ಸಖೇದಾಶ್ವರ್ಯ ವ್ಯಕ್ತಪಡಿಸಿದ ನ್ಯಾಯಾಧೀಶರುಗಳು ಅಧಿಕಾರಿಗಳು ಕಟ್ಟಡದ ಅವ್ಯವಸ್ಥೆಯ ಬಗ್ಗೆ ಶಾಸಕರ ಗಮನಕ್ಕೆ ತಂದು ಇದನ್ನು ದುರಸ್ಥಿ ಪಡಿಸಲು ಕ್ರಮ ವಹಿಸಬೇಕು ಎಂದು ತಾಕೀತು ಮಾಡಿದರು.

ಕಾರ್ಯ ನಿರ್ವಹಣಾಧಿಕಾರಿ ಬಗ್ಗೆ ಅಸಮಾಧಾನ: ತಾ.ಪಂ.ಆಡಳಿತ ಸಭಾಂಗಣದಲ್ಲಿ ಕಾರ್ಮಿಕರ ದಿನಾಚರಣೆ ನಡೆಯುತ್ತಿದ್ದು ಇಲ್ಲಿಗೆ ನ್ಯಾಯಾಧೀಶರು ಆಗಮಿಸಿದ್ದರು. ಕಾರ್ಯ ನಿರ್ವಹಣಾಧಿಕಾರಿ ವಿ.ಪಿ.ಕುಲದೀಪ್ ಬಾರದಿದ್ದರಿಂದ ತಮ್ಮ ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಾಧೀಶರುಗಳು ಇಂತಹ ವರ್ತನೆಯನ್ನು ಅಧಿಕಾರಿಗಳು ತಿದ್ದಿಕೊಳ್ಳಬೇಕು ಎಂದು ಎಚ್ಚರಿಸಿದರು.

ರೈತರು ಭೂಮಿ ಹದ ಮಾಡಿಕೊಂಡು ಬಿತ್ತನೆ ಮಾಡಿ

ನಂಜನಗೂಡು, ಮೇ 31– ಮುಂಗಾರು ಮಳೆ ವಾಡಿಕೆಗೂ ಮುನ್ನ ಬಂದಿರುವುದರಿಂದ ರೈತರು ಗೊಬ್ಬರ, ಬಿತ್ತನೆ ಬೀಜ ಸಿದ್ಧವಾಗಿಟ್ಟುಕೊಂಡು ಭೂಮಿ ಹದಗೊಳಿಸಿ ಬಿತ್ತನೆ ಮಾಡಬೇಕು ಎಂದು ಮೈಸೂರಿನ ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಹೆಚ್.ಎಂ.ನಾಗರಾಜು ತಿಳಿಸಿದರು.

ಸುತ್ತೂರಿನಲ್ಲಿರುವ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿ ಸಿದ್ದ ವಿಕಸಿತ ಕೃಷಿ ಸಂಕಲ್ಪ ಅಭಿಯಾನ ಉದ್ಘಾಟಿಸಿ ಮಾತನಾಡಿದ ಅವರು, ಬೀಜೋಪಚಾರ, ಸಮಗ್ರ ಪೋಶಕಾಂಶಗಳ ಹಾಗೂ ಕೀಟಗಳ ನಿರ್ವಹಣೆಯನ್ನು ಕೃಷಿ ತಂತ್ರಜ್ಞರ ಸಲಹೆಯಂತೆ ಪಾಲಿಸುವ ಮೂಲಕ ರೋಗ ಮುಕ್ತ ಬೆಳೆಗಳನ್ನು ಬೆಳೆದು ರೈತರು ಆರ್ಥಿಕ ವಾಗಿ ಹೆಚ್ಚಿನ ಲಾಭ ಗಳಿಸಬಹುದಾಗಿದೆ ಎಂದರು.

ಸರ್ಕಾರದ ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಂ.ಮದನ್ ಗೋಪಾಲ್ ಮಾತನಾಡಿ, ರೈತರು ರಾಸಾಯನಿಕ ಮುಕ್ತ ಬೆಳೆ ಬೆಳೆಯಲು ಮುಂದಾಗಬೇಕಿದೆ. ಸದ್ಯ ಕೇಂದ್ರ ಸರ್ಕಾರ ರೈತರ ಆದಾಯ ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತವಾಗಿದ್ದು, ಈ ಅಭಿಯಾನಕ್ಕೆ ರೈತ ಬಾಂಧವರು ಹೆಚ್ಚಿನ ರೀತಿ ಸಹಕರಿಸಬೇಕು ಎಂದರು.

ಮಾಜಿ ಶಾಸಕ ಮಹಿಮಾ ಪಟೇಲ್ ಮಾತನಾಡಿ, ರೈತರು ಅಧಿಕ ಇಳುವರಿ ಹಾಗೂ ಹಣಗಳಿಸುವ ಧಾವಂತದಿಂದ ಭೂಮಿಗೆ ಹೆಚ್ಚು ರಾಸಾಯನಿಕಗಳನ್ನು ಹಾಕುತ್ತಿದ್ದಾರೆ. ಇದರಿಂದಾಗಿ ಆರೋಗ್ಯ ಸಮಸ್ಯೆ ಹೆಚ್ಚಾಗುತ್ತಿದೆ. ಆದ ಕಾರಣ, ರೈತರು ಸಾವಯವ ಕೃಷಿ ಕಡೆಗೆ ಹೆಚ್ಚು ಆಸಕ್ತಿ ಬೆಳೆಸಿಕೊಳ್ಳಲು ಮುಂದಾಗಬೇಕು ಎಂದು ಸಲಹೆ ನೀಡಿದರು.

ವಿವಿಧ ಬೇಡಿಕೆ ಈಡೇರಿಕೆಗಾಗಿ ಪೌರಕಾರ್ಮಿಕರ ಪ್ರತಿಭಟನೆ



ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಪೌರ ಕಾರ್ಮಿಕರು ಪುರಸಭೆ ನೂತನ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ತಿ.ನರಸೀಪುರ, ಮೇ 31– ಪೌರ ಕಾರ್ಮಿಕರನ್ನು ರಾಜ್ಯ ಸರ್ಕಾರಿ ನೌಕರರೆಂದು ಪರಿಗಣಿಸುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪೌರ ಕಾರ್ಮಿಕರು ಪುರಸಭೆಯ ನೂತನ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಪಟ್ಟಣದ ಪುರಸಭೆಯ ನೂತನ ಕಚೇರಿ ಎದುರು ಜಮಾವಣೆಗೊಂಡ ಪೌರ ಕಾರ್ಮಿಕರು ವಿವಿಧ ಬೇಡಿಕೆಗಳಿಗೆ ಒತ್ತಾಯಿಸಿ ಪುರಸಭೆ ಕಚೇರಿ ಸಿಬ್ಬಂದಿ ಬೆಂಬಲದೊಂದಿಗೆ ಧರಣಿ ಆರಂಭಿಸಿದರು.

ಈ ವೇಳೆ ಮಾತನಾಡಿದ ಪೌರ ಕಾರ್ಮಿಕರ ಸಂಘದ ಕಾರ್ಯದರ್ಶಿ ಪ್ರಸನ್ನ ಪುರಸಭೆಯಲ್ಲಿ ಕೆಲಸ ಮಾಡುತ್ತಿರುವ ಪೌರ ಕಾರ್ಮಿಕರು ಹಾಗೂ ಪೌರ ನೌಕರರನ್ನು ನಿರ್ಲಕ್ಷಿಸದೆ ಹೊರ ಗುತ್ತಿಗೆ ಪದ್ಧತಿ ನಿಲ್ಲಿಸಿ ಪೌರ ಕಾರ್ಮಿಕರ ಸೇವೆ ಖಾಯಂಗೊಳಿಸಬೇಕು. ನೀರು ಸರಬರಾಜುದಾರರು ಹಾಗೂ ವಾಹನ ಚಾಲಕರು ಜೀವನ ಭದ್ರತೆಯಿಲ್ಲದೆ ಅನೇಕ ವರ್ಷಗಳಿಂದಲೂ ಕೆಲಸ ಮಾಡುತ್ತಿದ್ದಾರೆ. ಅವರನ್ನು ಸರ್ಕಾರಿ ನೌಕರರೆಂದು ಪರಿಗಣಿಸಬೇಕು. ಜೊತೆಗೆ ಪೌರ ಕಾರ್ಮಿಕರಿಗೆ ಪ್ರತಿ ತಿಂಗಳು ವೇತನ ಸಿಗುತ್ತಿಲ್ಲ. ಇದರಿಂದ ಕುಟುಂಬದ ನಿರ್ವಹಣೆ ಕಷ್ಟವಾಗಿದ್ದು ಇದರ ಕಡೆ ಸರ್ಕಾರ ಗಮನಹರಿಸಬೇಕು ಹಾಗೂ ಜ್ಯೋತಿ ಸಂಜೀವಿನಿ, ಕೆಜಿಐಡಿ, ಸೇರಿದಂತೆ ಸರ್ಕಾರಿ ನೌಕರ ಪಡೆಯುವ ಎಲ್ಲ ಸೌಲಭ್ಯಗಳನ್ನು ನೀಡಬೇಕೆಂದು ಅವರು ಒತ್ತಾಯಿಸಿದರು.

ಸಂಘದ ಅಧ್ಯಕ್ಷ ಶಿವಣ್ಣ ಮಾತನಾಡಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅನಿರ್ಧಿಷ್ಟಾವಧಿ ಧರಣಿ ಆರಂಭವಾಗಿದೆ. ಸೋಮವಾರದಿಂದ ಪಟ್ಟಣದ ಸ್ವಚ್ಛತೆಯನ್ನು ಸ್ಥಗಿತಗೊಳಿಸಿ ಸರ್ಕಾರದ ಗಮನ ಸೆಳೆಯುವ ಕೆಲಸ ಮಾಡಲಾಗುತ್ತದೆ, ಕಸ ಸಂಗ್ರಹ, ವಿಲೇವಾರಿ, ನೀರು ಪೂರೈಕೆ ಸ್ಥಗಿತಗೊಳಿಸಿ ಪ್ರತಿಭಟನೆಯನ್ನು ತೀವ್ರ ಸ್ವರೂಪಕ್ಕೆ ಕೊಂಡೊಯ್ಯಲಾಗುತ್ತದೆ. ಹಾಗಾಗಿ ರಾಜ್ಯ ಸರ್ಕಾರ ಶೀಘ್ರ ಸ್ಪಂದಿಸಬೇಕು. ಇಲ್ಲದಿದ್ದರೆ ಪ್ರತಿಭಟನೆ ಮುಂದುವರೆಯುತ್ತದೆ ಎಂದು ಎಚ್ಚರಿಸಿದರು.

ಆರ್‌ಐ. ತ್ರಿವೇಣಿ, ಅಶೋಕ್, ಹರೀಶ್, ಆರೋಗ್ಯ ಅಧಿಕಾರಿಗಳಾದ ಮಧು, ಚಂಪಶ್ರೀ, ಮಹೇಂದ್ರ, ಕಿರಣ್, ಎನ್.ಸತೀಶ್, ಆಲಗೂಡು ಚಂದ್ರು, ಲೆಕ್ಕಾಧಿಕಾರಿ ವಿನಯ್, ಚಾಲಕರಾದ ಭರತ್, ದೇವರಾಜ್, ರಾಜು, ಶಿವಸಾಗರ, ಮಣಿರಾಜ್, ಗಣೇಶ್, ವಿಶ್ವನಾಥ್, ಮನೋಜ್, ಲಿಂಗರಾಜು, ಚಿನ್ನಸ್ವಾಮಿ, ಟಪಾಲು ರಾಮು ಸೇರಿದಂತೆ ಪೌರ ಕಾರ್ಮಿಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಕಾನೂನು ಸುವ್ಯವಸ್ಥೆಗೆ ಭಂಗ ತಂದ್ರೆ ಗಡಿಪಾರ್

ರೌಡಿಪೆರೇಡ್‌ನಲ್ಲಿ ಅಡಿಷನಲ್ ಎಸ್ಪಿ ಮಲ್ಲಿಕ್ ಖಡಕ್ ವಾರ್ನಿಂಗ್



ಪೆರೇಡ್ ಕಾರ್ಯಕ್ರಮದಲ್ಲಿ ಅಡಿಷನಲ್ ಎಸ್ಪಿ ಮಲ್ಲಿಕ್ ರೌಡಿಗಳಿಗೆ ಎಚ್ಚರಿಕೆ ನೀಡಿದರು.

ಹುಣಸೂರು, ಮೇ 31(ಕೆಕೆ)– ಹುಣಸೂರು ತಾಲೂಕು ರೌಡಿಶೀಟರ್‌ಗಳಿಗೆ ಡಿವೈಎಸ್ಪಿ ಕಚೇರಿಯ ಅವರಣದಲ್ಲಿ ಆಯೋಜಿಸಲಾಗಿದ್ದ ಪೆರೇಡ್ ಕಾರ್ಯಕ್ರಮದಲ್ಲಿ ಖಾಕಿ ಪಡೆ ಬೆವರಿಳಿಸಿತು. ಡಿವೈಎಸ್ಪಿ ಕಚೇರಿಯ ಅವರಣದಲ್ಲಿ ರೌಡಿಶೀಟರ್‌ಗಳಿಗೆ ಅಡಿಷನಲ್ ಎಸ್ಪಿ ಮಲ್ಲಿಕ್ ಅವರು ಚುರುಕು ಮುಟ್ಟಿಸಿದ್ದಾರೆ. ಸುಮಾರು 150 ಕ್ಕೂ ಹೆಚ್ಚು ರೌಡಿಗಳಿಗೆ ಪೆರೇಡ್ ಕಾರ್ಯಕ್ರಮದಲ್ಲಿ ಖಡಕ್ ವಾರ್ನಿಂಗ್ ನೀಡಿದ್ದಾರೆ.

ವಿವಿದ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿ ರೌಡಿ ಲಿಸ್ಟ್‌ನಲ್ಲಿ ದಾಖಲಾದ ವ್ಯಕ್ತಿಗಳಿಗೆ ಪೆರೇಡ್ ಕಾರ್ಯಕ್ರಮದಲ್ಲಿ ಮುಂದಿನ ದಿನಗಳಲ್ಲಿ ಯಾವುದೇ ಅಹಿತಕರ ಘಟನೆಗಳಲ್ಲಿ ಭಾಗಿಯಾಗದಂತೆ ಎಚ್ಚರಿಕೆ ನೀಡಿದರು. ಉತ್ತಮ ಜೀವನ ರೂಪಿಸಿಕೊಳ್ಳುವಂತೆ ಸಲಹೆ ನೀಡಲಾಯಿತು. ಸಮಾಜದಲ್ಲಿ ಶಾಂತಿ ಕದಡುವ ಹಾಗೂ ರೌಡಿ ಚಟುವಟಿಕೆಗಳಲ್ಲಿ ಭಾಗಿಯಾದ್ರೆ ಗಡಿಪಾರ್ ಮಾಡುವುದಾಗಿ ಎಚ್ಚರಿಕೆ ನೀಡಿದರು.

ತಮ್ಮ ವರ್ತನೆಯಿಂದ ಸಮಾಜದಲ್ಲಿನ ಸಾಮಾನ್ಯ ಕುಟುಂಬಸ್ಥರ ಮೇಲೆ ಪರಿಣಾಮ ಬೀರುತ್ತದೆ ಹೀಗಾಗಿ ಅಂತಹ ಚಟುವಟಿಕೆಗಳಿಂದ ದೂರವಿರುವಂತೆ ಕಿವಿಮಾತು ಹೇಳಿದರು.

ಕಮಲ್ ವಿರುದ್ಧ ಕೋಟೆಯಲ್ಲಿ ಪ್ರತಿಭಟನೆ



ತಹಸೀಲ್ದಾರ್ ಶ್ರೀನಿವಾಸ್ ಅವರಿಗೆ ಮನವಿ ಪತ್ರವನ್ನು ಸಲ್ಲಿಸಲಾಯಿತು.

ಹೆಚ್.ಡಿ.ಕೋಟೆ: ಕನ್ನಡ ಹುಟ್ಟಿದ್ದು ತಮಿಳಿನಿಂದ ಎಂದು ಹೇಳಿರುವ ಬಹು ಭಾಷಾ ನಟ ಕಮಲ್ ಹಾಸನ್ ಕೂಡಲೇ ತಮ್ಮ ಹೇಳಿಕೆಯನ್ನು ಹಿಂಪಡೆದು ಕನ್ನಡಿಗರ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ) ತಾಲೂಕು ಘಟಕದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಆಡಳಿತಸೌಧದ ಮುಂಭಾಗದಲ್ಲಿ ನಡೆದ ಪ್ರತಿಭಟನೆಯ ನೇತೃತ್ವ ವಹಿಸಿದ್ದ ತಾಲೂಕು ಘಟಕದ ಅಧ್ಯಕ್ಷ ಕ್ರಾಂತಿ ಕುಮಾರ್ ಮಾತನಾಡಿ, ಕಮಲ್ ಹಾಸನ್ ಕನ್ನಡ ಹುಟ್ಟಿದ್ದು ತಮಿಳಿನಿಂದ ಎಂದಿರುವುದು ಖಂಡನೀಯ. ನಟನಾಗಿ ಬೆಳೆಯುವುದಕ್ಕೆ ಕೇವಲ ಒಂದು ಭಾಷೆ ಕಾರಣವಾಗಿರುವುದಿಲ್ಲ ಎಂಬುದನ್ನು ಅವರು ಮನದಟ್ಟು ಮಾಡಿಕೊಳ್ಳಬೇಕು. ಅವರ ಹೇಳಿಕೆ ನಮ್ಮ ಕೋಟ್ಯಾಂತರ ಕನ್ನಡಾಭಿಮಾನಿಗಳಿಗೆ ನೋವುಂಟು ಮಾಡಿದೆ ಎಂದರು.

ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಉದ್ದೇಶದಿಂದ ಹಾಗೂ ತಮಿಳು ಜನರ ಮತಗಳ ಮೇಲೆ ಕಣ್ಣಿಟ್ಟಿರುವ ಅವರು ಅಸಂಬದ್ಧ ಹೇಳಿಕೆ ನೀಡಿದ್ದಾರೆ. ಅವರು ತಮ್ಮ ಹೇಳಿಕೆಯನ್ನು ಹಿಂಪಡೆದು ಕನ್ನಡಿಗರಲ್ಲಿ ಕ್ಷಮೆ ಕೇಳಬೇಕು. ಇಲ್ಲವಾದಲ್ಲಿ ಜೂ.6ರಂದು ಅವರ ಥಗ್‌ಲೈಫ್ ಚಿತ್ರವನ್ನು ಕರ್ನಾಟಕದ ಯಾವುದೇ ಚಿತ್ರಮಂದಿರಗಳಲ್ಲಿ ಬಿಡುಗಡೆ ಗೊಳಿಸಲು ಕರವೇ (ಪ್ರವೀಣ್ ಶೆಟ್ಟಿ ಬಣ) ಅವಕಾಶ ನೀಡುವುದಿಲ್ಲ ಎಂದು ಎಚ್ಚರಿಸಿದರು.

ನಂತರ ತಹಸಿಲ್ದಾರ್ ಶ್ರೀನಿವಾಸ್ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು. ಕರವೇ ಉಪಾಧ್ಯಕ್ಷ ಶಿವಕುಮಾರ್, ಪ್ರಧಾನ ಕಾರ್ಯದರ್ಶಿ ಪ್ರವೀಣ್ ಕುಮಾರ್, ಸಂಘಟನೆಯವರಾದ ಸ್ವಾಮಿ ಕುಮಾರ್, ಉಮೇಶ್, ಚೆಲುವರಾಜು, ನಾಗರಾಜು, ಸಿದ್ದರಾಜು, ರಾಮಕುಮಾರ್, ಗೋಪಿ, ತಮ್ಮನಾಯಕ, ಕೃಷ್ಣಮೂರ್ತಿ, ವೆಂಕಟಸ್ವಾಮಿ, ಸೋಮಣ್ಣ ಚೆನ್ನ, ಮಹೇಶ್, ಜೀವಿಕ ಬಸವರಾಜು, ದೇವರಾಜು, ಮಂಜು, ನಾಗ, ಇತರರು ಭಾಗವಹಿಸಿದ್ದರು.

ದೊಡ್ಡೆಕೊಪ್ಪಲು ಗ್ರಾಪಂಗೆ ಭಾಗ್ಯ ಅಧ್ಯಕ್ಷೆ



ನೂತನ ಅಧ್ಯಕ್ಷೆ ಭಾಗ್ಯ ಅವರನ್ನು ಸದಸ್ಯರು ಅಭಿನಂದಿಸಿದರು.

ಕೆ.ಆರ್.ನಗರ, ಮೇ 31– ತಾಲೂಕಿನ ದೊಡ್ಡೆಕೊಪ್ಪಲು ಗ್ರಾಪಂ ಅಧ್ಯಕ್ಷೆಯಾಗಿ ಭಾಗ್ಯ ಅವಿರೋಧವಾಗಿ ಆಯ್ಕೆಯಾದರು.

ಈ ಹಿಂದಿನ ಅಧ್ಯಕ್ಷೆ ರಾಜೇಶ್ವರಿ ಅವರ ರಾಜೀನಾಮೆಯಿಂದ ತೆರವಾದ ಅಧ್ಯಕ್ಷ ಸ್ಥಾನಕ್ಕೆ ಭಾಗ್ಯ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಮಾಜ ಕಲ್ಯಾಣ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಶಂಕರ್ ಮೂರ್ತಿ ಘೋಷಿಸಿದರು.

ಚುನಾವಣಾ ಸಭೆಯಲ್ಲಿ ಉಪಾಧ್ಯಕ್ಷೆ ಹೆಚ್.ಜೆ.ಮಹದೇವಮ್ಮ, ಸದಸ್ಯರಾದ ಮಹೇಶ್‌ಗೌಡ, ಡಿ.ಆರ್.ಲಕ್ಷ್ಮಿ, ಎ.ಎಸ್. ಯೋಗೇಶ್, ಕೆ.ಎಸ್.ಶೇಖರ್, ಎಂ.ಕಾವ್ಯ, ಕೆ.ಕುಮಾರ್, ಬಿ.ಮ.ಗಿರೀಶ್, ನಂಜುಂಡ, ಕೆ.ಬಿ.ಪಲ್ಲವಿ, ಮಹದೇವ, ರಾಜೇಶ್ವರಿ, ರಾಮನಾಯಕ, ಎ.ಶ್ವೇತಾ, ಕೆಎಂ.ಸವಿತಾ, ಸಾವಿತ್ರಮ್ಮ, ಸುನೀತಾ, ಜಯಸುಮ, ಪಿಡಿಓ ರಮೇಶ್ ಇದ್ದರು.

ನೂತನ ಅಧ್ಯಕ್ಷರ ಅವಿರೋಧ ಆಯ್ಕೆಯಾಗುತ್ತಿದ್ದಂತೆಯೇ ಗ್ರಾಪಂ ಆವರಣದಲ್ಲಿ ನೆರೆದಿದ್ದ ಕಾಂಗ್ರೆಸ್ ಮುಖಂಡರು ಪಟಾಕಿ ಸಿಡಿಸಿ, ಸಿಹಿ ಹಂಚಿ ಶಾಸಕ ಡಿ.ರವಿಶಂಕರ್‌ಗೆ ಘೋಷಣೆ ಕೂಗಿ ಸಂಭ್ರಮಾಚರಣೆ ನಡೆಸಿದರು.

ಅಂಬೇಡ್ಕರ್ ಸಹಕಾರ ಸಂಘವನ್ನು ಅಭಿವೃದ್ಧಿಪಡಿಸಲು ಮನವಿ



ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಿ ಸಂದರ್ಭ.

ಹುಣಸೂರು, ಮೇ 31– ಸದಸ್ಯತ್ವ ಅಭಿಯಾನ ಮಾಡುವ ಮೂಲಕ ಹೆಚ್ಚು ಹೆಚ್ಚು ಸದಸ್ಯರನ್ನು ಸಂಘಕ್ಕೆ ಸೇರಿಸುವ ಮೂಲಕ ಸಹಕಾರ ಸಂಘದ ಅರ್ಥಿಕ ಬಂಡವಾಳವನ್ನು ಹೆಚ್ಚಿಸಿ ಅಭಿವೃದ್ಧಿ ಪರಿಸ್ಥಿತಿಯನ್ನು ಕಂಡುಕೊಳ್ಳಲು ಮುಂದಾಗಿ ಎಂದು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು.

ನಗರದ ಡಾ.ಬಿ.ಅರ್.ಅಂಬೇಡ್ಕರ್ ಮಹಾಭೋದಿ ವಿವಿಧೋದ್ದೇಶ ಸಹಕಾರ ಸಂಘದ ನೂತನ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಮತ್ತು ನಿರ್ದೇಶಕರನ್ನು ಉದ್ದೇಶಿಸಿ ಮಾತನಾಡಿದ ಅವರು ನೂತನವಾಗಿ ಅಯ್ಕೆಯಾಗಿ ಬಂದಿದ್ದೀರಿ. ಸಹಕಾರ ಸಂಘ ಈಗಾಗಲೇ ಸಾಕಷ್ಟು ಅರ್ಥಿಕ ಪರಿಸ್ಥಿತಿಯ ತೊಂದರೆಯಿಂದ ನಲುಗುತ್ತಿದೆ. ಈ ಕಾರಣದಿಂದ ನೀವು ಸಂಘಕ್ಕೆ ಹೊಸದಾಗಿ ಒಂದು ಸಾವಿರ ಷೇರುದಾರರನ್ನು ಸೇರಿಸಿ ಸರ್ಕಾರದಿಂದ ಹತ್ತು ಲಕ್ಷ ಷೇರು ಹಣ ಬರುತ್ತದೆ. ಇದರೊಂದಿಗೆ ಪಿಕಾರ್ಡ್‌ನಿಂದ ಹತ್ತು ಲಕ್ಷ ಹಣ ಪಡೆದುಕೊಳ್ಳಿ ಇದನ್ನು ಮೂಲ ಬಂಡವಾಳವನ್ನಾಗಿ ಮಾಡಿಕೊಂಡು ಸಹಕಾರ ಸಂಘವನ್ನು ಮುನ್ನಡೆಸಿ, ಜೊತೆಗೆ ನಿಮ್ಮ ಪರಿಶ್ರಮವು ಇರಲಿ. ಅಗಲೇ ಸಹಕಾರ ಸಂಘ ಅಭಿವೃದ್ಧಿಯತ್ತ ಸಾಗಲು ಸಾಧ್ಯ ಎಂದರು.

ಮೇ.13 ರಂದು ನಡೆಯಬೇಕಾಗಿದ್ದ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆ ಕಾರಣಾಂತರಗಳಿಂದ ನಿಂತು ಹೋಗಿ ಮೇ 30 ಬದಲಿ ದಿನಾಂಕವನ್ನು ಚುನಾವಣಾಧಿಕಾರಿ ನಿಗದಿ ಮಾಡಿದರು. ಅದರಂತೆ ಇಂದು ಬೆಳಿಗ್ಗೆ ನಾಮಪತ್ರ ಸಲ್ಲಿಕೆ ಸಮಯದಲ್ಲಿ ಅಯ್ಕೆ ಬಯಸಿ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಕಾರ್ಯಾಧ್ಯಕ್ಷ ಹಾಗೂ ವಕೀಲ ಪುಟ್ಟರಾಜು ಉಪಾಧ್ಯಕ್ಷ ಸ್ಥಾನಕ್ಕೆ ಶಿಕ್ಷಕ ಶಿವಯ್ಯ ಬಿಟ್ಟರೆ ಬೇರೆ ಯಾರು ನಾಮಪತ್ರ ಸಲ್ಲಿಸದ ಕಾರಣ ಇವರಿಬ್ಬರ ಅವಿರೋಧ ಆಯ್ಕೆಯನ್ನು ಘೋಷಿಸಲಾಯಿತು.

ನರಸೀಪುರದಲ್ಲಿ ಕೆಡಿಪಿ ನಾಮನಿರ್ದೇಶಿತ ಸದಸ್ಯರಿಗೆ ಸನ್ಮಾನ



ತಿ.ನರಸೀಪುರ ತಾಲೂಕು ಪಂಚಾಯ್ತಿ ಇಓ ಕಚೇರಿಯಲ್ಲಿ ನಡೆದ ಸರಳ ಸಮಾರಂಭದಲ್ಲಿ ಕೆಡಿಪಿ ಸದಸ್ಯರಾಗಿ ಆಯ್ಕೆಯಾದವರನ್ನು ಇಓ ಅನಂತರಾಜು ಅಭಿನಂದಿಸಿದರು.

ತಿ.ನರಸೀಪುರ, ಮೇ 31– ರಾಜ್ಯ ಸರ್ಕಾರದ ಆದೇಶದ ಮೇರೆಗೆ ಕೆಡಿಪಿ ನಾಮ ನಿರ್ದೇಶಿತ ಸದಸ್ಯರಾಗಿ ಆಯ್ಕೆಗೊಂಡ ನಾಮ ನಿರ್ದೇಶಿತ ಸದಸ್ಯರನ್ನು ತಾಲೂಕು ಪಂಚಾಯ್ತಿ ಕಾರ್ಯ ನಿರ್ವಾಹಕ ಅಧಿಕಾರಿ ಪಿ.ಎಸ್.ಅನಂತರಾಜು ಅಭಿನಂದಿಸಿ ಪೂರ್ವಭಾವಿಯಾಗಿ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ಭಾಗವಹಿಸುವಂತೆ ಆಹ್ವಾನ ನೀಡಿದರು.

ಸರ್ಕಾರದಿಂದ ಕೆಡಿಪಿ ಸದಸ್ಯರಾಗಿ ನೇಮಕಗೊಂಡ ಬೈರಾಪುರ ಗ್ರಾಮದ ದಿವಾಕರ್,ಮುದ್ದಬೀರನ ಹುಂಡಿ ಎಂ.ನಿಂಗರಾಜು, ವೀಣಾ ಶಿವಕುಮಾರ್ ಹಾಗೂ ಮೋಹಿನ್ ಖಾನ್ ಅವರನ್ನು ತಾ.ಪಂ. ಕಾರ್ಯ ನಿರ್ವಾಹಣಾಧಿಕಾರಿ ಕಚೇರಿಯಲ್ಲಿ ನಡೆದ ಸರಳ ಸಮಾರಂಭದಲ್ಲಿ ಅಭಿನಂದಿಸಲಾಯಿತು.

ಈ ವೇಳೆ ಮಾತನಾಡಿದ ತಾ.ಪಂ. ಇಓ ಅನಂತರಾಜು ಮಂಗಳವಾರ ತ್ರೈಮಾಸಿಕ ಕೆಡಿಪಿ ಸಭೆ ನಡೆಯಲಿದೆ. ಸಭೆಯಲ್ಲಿ ಅಭಿವೃದ್ಧಿ ಸಂಬಂಧ ಆಗು ಹೋಗುಗಳನ್ನು ಚರ್ಚಿಸಲು ಸರ್ಕಾರ ಆರು ಮಂದಿ ಕಾರ್ಯಕರ್ತರನ್ನು ನಾಮ ನಿರ್ದೇಶಿತ ಸದಸ್ಯರನ್ನಾಗಿ ನೇಮಕ ಮಾಡಿದೆ. ಹಾಗಾಗಿ ಅವರನ್ನು ಪರಿಚಯಾತ್ಮಕವಾಗಿ ಕೆಡಿಪಿ ಸಭೆಗೆ ಆಹ್ವಾನ ಮಾಡಿ ಅಭಿನಂದಿಸಲಾಗಿದೆ ಎಂದರು. ನೂತನ ಕೆಡಿಪಿ ಸದಸ್ಯರಾದ ದಿವಾಕರ್ ಹಾಗು ವೀಣಾ ಶಿವಕುಮಾರ್ ಮಾತನಾಡಿ ಸರ್ಕಾರ 6 ಮಂದಿ ಸಕ್ರಿಯ ಕಾಂಗ್ರೆಸ್ ಕಾರ್ಯಕರ್ತರನ್ನು ಗುರುತಿಸಿ ಕೆಡಿಪಿ ನಾಮ ನಿರ್ದೇಶಿತ ಸದಸ್ಯರನ್ನಾಗಿ ನೇಮಕ ಮಾಡಿದೆ.ನೇಮಕಕ್ಕೆ ಕಾರಣರಾದ ಮುಖ್ಯ ಮಂತ್ರಿ ಸಿದ್ದರಾಮಯ್ಯ, ಸಚಿವ ಹೆಚ್.ಸಿ.ಮಹದೇವಪ್ಪ, ಸಂಸದ ಸುನೀಲ್ ಬೋಸ್ ಹಾಗೂ ವಿಧಾನಪರಿಷತ್ ಸದಸ್ಯ ಯತೀಂದ್ರರಿಗೆ ಆಬಾರಿಯಾಗಿದ್ದೇವೆ. ಮುಖ್ಯಮಂತ್ರಿಗಳ ಕ್ಷೇತ್ರದಲ್ಲಿ ತ್ರೈ ಮಾಸಿಕ ಸಭೆ ನಡೆಯುತ್ತಿರುವುದು ಸಂತಸ ತಂದಿದೆ. ಸಭೆಯಲ್ಲಿ ಭಾಗವಹಿಸುವ ಸದವಕಾಶ ನಮ್ಮದಾಗಿದೆ. ಸರ್ಕಾರ ನಮಗೆ ಕೊಟ್ಟಿರುವ ಅಧಿಕಾರವನ್ನು ಸದುಪಯೋಗ ಪಡಿಸಿ ಕೊಳ್ಳುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗುತ್ತೇವೆ ಎಂದರು. ಈ ವೇಳೆ ಸಹಾಯಕ ರಂಗಸ್ವಾಮಿ, ನಾರಾಯಣ, ಮುಖಂಡ ಬಣ್ಣ ಅಶ್ವತ್ಥಾಮ ಸೇರಿದಂತೆ ಇತರರು ಹಾಜರಿದ್ದರು.

625ಕ್ಕೆ 625 ಅಂಕ ಪಡೆದ ಎನ್.ಸ್ಫೂರ್ತಿಗೆ ಗ್ರಾಮಸ್ಥರಿಂದ ಸನ್ಮಾನ



ಇತ್ತೀಚೆಗೆ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625 ಕ್ಕೆ 625 ಅಂಕ ಪಡೆದ ನಂಜನಗೂಡು ತಾಲೂಕಿನ ತರಗನಹಳ್ಳಿ ಗ್ರಾಮದ ಚಾಮಲತಾ ನಾಗೇಂದ್ರ ಅವರ ಪುತ್ರಿ ಎನ್ ಸ್ಫೂರ್ತಿಯನ್ನು ಗ್ರಾಮಸ್ಥರು ಸನ್ಮಾನಿಸಿದರು. ಗ್ರಾಮದ ಮುಖಂಡ ಬಸವರಾಜ್ ಮಾತನಾಡಿ ನಮ್ಮ ಗ್ರಾಮದ ವಿದ್ಯಾರ್ಥಿ ಸ್ಫೂರ್ತಿಯ ಪರಿಶ್ರಮಕ್ಕೆ ತಕ್ಕ ಪ್ರತಿಫಲ ಸಿಕ್ಕಿದೆ ಪ್ರತಿಯೊಬ್ಬ ವಿದ್ಯಾರ್ಥಿಗಳು ಇಂತಹ ಅಂಕ ಪಡೆದು ರಾಜ್ಯ ಮಟ್ಟಕ್ಕೆ ತಲುಪುವ ಕೆಲಸ ಮಾಡಬೇಕು ಸ್ಫೂರ್ತಿಯು ಎಸ್‌ಎಲ್‌ಸಿಯಲ್ಲಿ ಉತ್ತಮ ಅಂಕ ಪಡೆದು ರಾಜ್ಯಕ್ಕೆ ಹಾಗೂ ಗ್ರಾಮಕ್ಕೆ ಕೀರ್ತಿ ತಂದಿದ್ದಾಳೆ ಎಂದು ತಿಳಿಸಿದರು. ಈ ವೇಳೆ ಮಹೇಶ್, ರಾಜೇಂದ್ರ, ಕುಮಾರ್, ರಾಜಣ್ಣಾರಾಧ್ಯ, ಶಿವರಾಜು,ಸಿದ್ದರಾಜು, ಹಾಜರಿದ್ದರು

ನಾಳೆಯಿಂದ ನಂಜನಗೂಡಲ್ಲಿ ಪೌರಕಾರ್ಮಿಕರ ಮುಷ್ಕರ ಅರಂಭ

ನಂಜನಗೂಡು, ಮೇ 31– ಪೌರ ಸೇವಾ ನೌಕರರ ಬೇಡಿಕೆಗಳನ್ನು ಈಡೇರಿಸದೆ ಇರುವುದನ್ನು ಖಂಡಿಸಿ ಕರ್ನಾಟಕ ರಾಜ್ಯ ಪೌರ ಸೇವಾ ನೌಕರರ ಸಂಘದ ವತಿಯಿಂದ ನಗರಸಭಾ ಆವರಣದಲ್ಲಿ ಜೂ.2ರಿಂದ ಅನಿರ್ದಿಷ್ಟಾವಧಿ ಮುಷ್ಕರವನ್ನು ಪ್ರಾರಂಭಿಸಲಾಗುವುದು ಎಂದು ಕರ್ನಾಟಕ ರಾಜ್ಯ ಪೌರ ಸೇವಾ ನೌಕರರ ಸಂಘದ ಜಿಲ್ಲಾ ಕಾರ್ಯದರ್ಶಿ ನಾರಾಯಣ್ ರಾವ್ ತಿಳಿಸಿದರು.

ನಗರಸಭೆಯ ಆವರಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ರಾಜ್ಯ ಸರ್ಕಾರಿ ನೌಕರರಿಗೆ ನೀಡುವ ಪ್ರತಿಯೊಂದು ಸವಲತ್ತುಗಳನ್ನು ಪೌರ ಸೇವಾ ನೌಕರರಿಗೆ ಪ್ರತ್ಯೇಕ ಆದೇಶವಿಲ್ಲದೆ ವಿಸ್ತರಿಸಬೇಕು, ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ದಿನಗೂಲಿ ಮತ್ತು ಕ್ಷೇಮಾಭಿವೃದ್ಧಿ ನಿಯಮದಡಿ ಕಾರ್ಯ ನಿರ್ವಹಿಸುವ ನೌಕರರನ್ನು ಸಕ್ರಮಾತಿಗೊಳಿಸಬೇಕು, ನಗರಸಭೆಯ ಶೇಕಡ 100ರಷ್ಟು ಪೌರಕಾರ್ಮಿಕರನ್ನು ವಿಶೇಷ ನೇಮಕಾತಿ ಅಡಿ ನೇಮಕಾತಿ ಮಾಡಿಕೊಳ್ಳಬೇಕು.

2022ರಲ್ಲಿ ವಿಶೇಷ ನೇಮಕಾತಿ ಅಡಿ ಆಯ್ಕೆಯಾದ ಪೌರಕಾರ್ಮಿಕರಿಗೆ ಮತ್ತು ಲೋಡರ್ಸ್‌ಗಳಿಗೆ ಎಸ್‌ಎಫ್‌ಸಿ ವೇತನ ನಿಧಿಯಿಂದ ವೇತನ ಪಾವತಿಸಬೇಕು, ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೀರು ಸರಬರಾಜು ನೌಕರರನ್ನು ವಿಶೇಷ ನೇಮಕಾತಿ ಅಡಿ ಪರಿಗಣಿಸಬೇಕು, ಪೌರ ಸೇವಾ ನೌಕರರಿಗೆ ಜ್ಯೋತಿ ಸಂಜೀವಿನಿ, ನಗದು ರಹಿತ ಚಿಕಿತ್ಸಾ ಸೌಲಭ್ಯವನ್ನು ಕಲ್ಪಿಸಬೇಕು, ಐಟಿ ಸಿಬ್ಬಂದಿ, ಅಕೌಂಟ್ ಕನ್ಸಲ್ಟೆಂಟ್, ಕಂಪ್ಯೂಟರ್ ಆಪರೇಟರ್, ವಾಹನ ಚಾಲಕ, ಸ್ಯಾನಿಟರಿ ಸೂಪರ್ವೈಸರ್ ಇತರೆ ವೃಂದದ ನೌಕರರನ್ನು ಪೌರ ಸೇವಾ ನೌಕರರೆಂದು ಪರಿಗಣಿಸಿ ವಿಲೀನಾತಿಗೊಳಿಸಬೇಕು ಎಂಬ ಬಗ್ಗೆ ಸರ್ಕಾರಕ್ಕೆ ಹಲವಾರು ದಶಕಗಳಿಂದ ಬೇಡಿಕೆ ಇಟ್ಟಿದ್ದರೂ ಸಹ ರಾಜ್ಯ ಸರ್ಕಾರ ಪೌರ ಸೇವಾ ನೌಕರರ ಬೇಡಿಕೆಗಳನ್ನು ಈಡೇರಿಸದೆ ಹಲವಾರು ದಶಕಗಳಿಂದ ಬಾಕಿ ಉಳಿಸಿಕೊಂಡಿದೆ, ಈ ಸರ್ಕಾರದ ಧೋರಣೆಯನ್ನು ಖಂಡಿಸಿ ಜೂನ್ 2 ರಿಂದ ನಗರಸಭೆಯ ಮುಂಭಾಗ ಪೌರ ಸೇವಾ ನೌಕರರ ಸೇವೆಯನ್ನು ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗುವುದು ಎಂದರು.

ಮಳೆಯಿಂದ ಸರಗೂರು ತಾಲೂಕಲ್ಲಿ ಪ್ರವಾಹದ ಭೀತಿ

ತಗ್ಗು ಪ್ರದೇಶದಲ್ಲಿರುವ ಜನರ ಸ್ಥಳಾಂತರ, ಕಾಳಜಿ ಕೇಂದ್ರ ತೆರೆಯಲು ಸಿದ್ಧತೆ



ಜನಧ್ವನಿ ಸಮುದಾಯ ಬಾನುಲಿ ಕೇಂದ್ರದ ಫೋನ್ ಇನ್ ಕಾರ್ಯಕ್ರಮದಲ್ಲಿ ಹೆಚ್.ಡಿ.ಕೋಟೆ ತಾಲ್ಲೂಕಿನ ತಹಶೀಲ್ದಾರ್ ಶ್ರೀನಿವಾಸ್ ಮಾತನಾಡಿದರು,

ಸರಗೂರು: ಕಳೆದ ಒಂದು ವಾರದಿಂದ ನಿರಂತರವಾಗಿ ತಾಲೂಕಿನಲ್ಲಿ ಮಳೆಯಾಗುತ್ತಿದ್ದು ಪ್ರವಾಹದ ಸಾಧ್ಯತೆ ಇದೆ. ಆದ್ದರಿಂದ ತಾಲೂಕು ಆಡಳಿತ ಸಕಲ ಸಿದ್ಧತೆ ಮಾಡಿಕೊಂಡಿದ್ದು, ತಗ್ಗು ಪ್ರದೇಶದಲ್ಲಿ ಮತ್ತು ಕಬಿನಿ ಹಿನ್ನೀರಿನಲ್ಲಿ ವಾಸಿಸುವ ಜನರನ್ನು ಸುರಕ್ಷಿತವಾಗಿ ಕಾಪಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ತಹಸೀಲ್ದಾರ್ ಶ್ರೀನಿವಾಸ್ ತಿಳಿಸಿದರು.

ಪಟ್ಟಣದ ಸ್ವಾಮಿ ವಿವೇಕಾನಂದ ಯೂತ್ ಮೂವ್ ಮೆಂಟ್‌ನ ಅಂಗ–ಸಂಸ್ಥೆಯಾದ ಜನಧ್ವನಿ ಸಮುದಾಯ ಬಾನುಲಿ ಕೇಂದ್ರದಲ್ಲಿ ಮಳೆ ಪ್ರವಾಹ ಮತ್ತು ಸಾರ್ವಜನಿಕರ ಮುಂಜಾಗ್ರತಾ ಕ್ರಮಗಳ ಕುರಿತು ನಡೆದ ನೇರ ಸಂದರ್ಶನ ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಪ್ರಮುಖವಾಗಿ ಕಬಿನಿ ನದಿಯಲ್ಲಿ ನೀರು ಹೆಚ್ಚು ಸಂಗ್ರಹವಾದಂತೆ ಹಿನ್ನೀರಿನ ಅಂಚಿನಲ್ಲಿ ವಾಸಿಸುವ ಡಿ.ಬಿ.ಕುಪ್ಪೆ, ಕಡೆಗದ್ದೆ ಹಾಗೂ ಇನ್ನೂ ಕೆಲವು ಗ್ರಾಮಗಳು ಮುಳುಗಡೆಯಾಗುವ ಸಾಧ್ಯತೆ ಇರುವುದರಿಂದ ಡಿ.ಬಿ ಕುಪ್ಪೆ ಸರ್ಕಾರಿ ಪ್ರಾಥಶಾಲೆಯಲ್ಲಿ ಕಾಳಜಿ ಕೇಂದ್ರವನ್ನು ತೆರೆಯಲು ಸಿದ್ದತೆ ಮಾಡಿಕೊಂಡಿದ್ದು ನೋಡಲ್ ಅಧಿಕಾರಿಗಳನ್ನು ನೇಮಿಸಿ ಕಾಳಜಿ ಕೇಂದ್ರಕ್ಕೆ ಎಲ್ಲಾ ರೀತಿಯ ವ್ಯವಸ್ಥೆಗಳನ್ನು ಮಾಡಲಾಗಿದೆ ಎಂದರು.

ನಿರಂತರ ಮಳೆಯಿಂದ ಕೆಲವು ಮನೆಗಳು ಬಿದ್ದಿದೆ, ಕೆಲವು ಸೋರುತ್ತಿರುತ್ತವೆ ಹಾಗೂ ಕೆಲವು ಬೆಳೆಗಳು ಹಾನಿಯಾಗಿವೆ. ಇಂತಹ ಸಂದರ್ಭದಲ್ಲಿ ನಮ್ಮ ಗಮನಕ್ಕೆ ತಂದರೆ ನಮ್ಮ ಇಲಾಖೆ ಅಧಿಕಾರಿಗಳನ್ನು ಕಳುಹಿಸಿ ಸ್ಥಳ ಪರೀಶೀಲಿಸಿ ಸರ್ಕಾರದಿಂದ ಸಿಗುವಂತಹ ಸೌಲಭ್ಯವನ್ನು ತಲುಪಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುತ್ತೇನೆ ಎಂದು ಭರವಸೆ ನೀಡಿದರು.

ಫೋನ್ ಇನ್ ಕಾರ್ಯಕ್ರಮದಲ್ಲಿ ಮಾಗುಡಿಲು ನಾಗರಾಜು, ಚಿಕ್ಕೆರೆಯೂರು ಶಂಕರ್, ದೊಡ್ಡಸಿದ್ದನಾಯಕ ಮತ್ತು ಗಿರಿಜನ ಹಾಡಿಗಳಾದ ಗೋಳೂರು ಹಾಡಿಯ ಮಂಜುಳ, ಬಸವಗಿರಿ ಹಾಡಿಯ ಸ್ವಾಮಿ, ಹಾಲಹಳ್ಳಿ ಹಾಡಿಯ ಮಹದೇವಮ್ಮ, ನಡಾಡಿ ರಾಜೇಶ್, ಅರಳ್ಳಿಹಾಡಿಯ ಮಣಿಕಂಠ ಹಾಗೂ ಆನೆಮಾಳ ಹಾಡಿಯ ಕರಿಯಪ್ಪ ಅವರು ಕರೆ ಮಾಡಿ ಗಿರಿಜನ ಹಾಡಿಗಳಲ್ಲಿ ವಾಸಿಸುತ್ತಿರುವ ಹಲವಾರು ಮನೆಗಳು ಸೋರುತ್ತಿದ್ದು, ರಸ್ತೆಗಳು ತುಂಬ ಹದೆಗೆಟ್ಟಿವೆ. ಜೀವನ ನಡೆಸಲು ತುಂಬ ಕಷ್ಟಕರವಾಗಿದೆ ಎಂದು ತಹಸೀಲ್ದಾರ್ ಗಮನಕ್ಕೆ ತರಲಾಯಿತು. ಇದಕ್ಕೆ ಪ್ರತಿಕ್ರಿಯಿಸಿದ ತಹಸೀಲ್ದಾರ್ ನಮ್ಮ ಇಲಾಖೆಯ ಅಧಿಕಾರಿಗಳನ್ನು ನಿಮ್ಮ ಹಾಡಿಗಳಿಗೆ ಭೇಟಿ ನೀಡಲು ತಿಳಿಸುತ್ತೇನೆ ಹಾಗೂ ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ತಲುಪಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುತ್ತೇನೆ ಎಂದು ಭರವಸೆ ನೀಡಿದರು

ಕಾರ್ಯಕ್ರಮವನ್ನು ಜನಧ್ವನಿ ಬಾನುಲಿ ಕೇಂದ್ರದ ವ್ಯವಸ್ಥಾಪಕ ನಿಂಗರಾಜು ನಡೆಸಿಕೊಟ್ಟರು, ಕಾರ್ಯಕ್ರಮದಲ್ಲಿ ಜನಧ್ವನಿ ಬಾನುಲಿ ಕೇಂದ್ರದ ಸಿಬ್ಬಂದಿಗಳಾದ ಶ್ರೀಕಾಂತ್, ಅನಿತಾ, ಸ್ಫೂರ್ತಿ ಪ್ರಕಾಶ್, ಪ್ರೀತಿ ಉಪಸ್ಥಿತರಿದ್ದರು.



ಸಿ.ಸಿದ್ದಶೆಟ್ಟಿ ನಿಧನ



ನಂಜನಗೂಡು, ಮೇ 31–ನಂಜನಗೂಡಿನ ವಿದ್ಯಾನಗರ ಬಡಾವಣೆ ನಿವಾಸಿ ನಿವೃತ್ತ ಮುಖ್ಯೋಪಾಧ್ಯಾಯರಾದ ಸಿ. ಸಿದ್ದಶೆಟ್ಟಿ (80) ಶನಿವಾರ ನಿಧನ ಹೊಂದಿದರು.

ಮೃತರು, ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಂಜನಗೂಡು ನದಿ ದಂಡೆಯ ಲಿಂಗಾಭಟ್ಟರ ಗುಡಿ ಸಮೀಪದ ಹಿಂದೂ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇವರ ನಿಧನಕ್ಕೆ ನಂಜನಗೂಡು ತಾಲೂಕು ಮಡಿವಾಳರ ಸಂಘ, ಮೈಸೂರು ಜಿಲ್ಲಾ ಮಡಿವಾಳರ ಸಂಘ, ನಂಜನಗೂಡು ತಾಲೂಕು ಶಿಕ್ಷಕರ ಸಂಘ, ಛಾಯಗ್ರಾಹಕರ ಸಂಘ ಸೇರಿದಂತೆ ಹಲವಾರು ಸಂಘಟನೆಗಳ ಪದಾಧಿಕಾರಿಗಳು ತೀವ್ರ ಸಂತಾಪ ಸೂಚಿಸಿದ್ದಾರೆ.


ಮೈಸೂರು ಮಿತ್ರ

ಭಾನುವಾರ 1 ಜೂನ್ 2025

'ಡಾ.ರಾಜ್‌ಕುಮಾರ್ ದಿ ಲೆಜೆಂಡ್' ಪುಸ್ತಕ, ಅವರ ಯಶೋಗಾಥೆ ಕುರಿತ 10 ಸಂಚಿಕೆಗಳ ಬಿಡುಗಡೆ

ರಾಜ್‌ಕುಮಾರ್ ಜನ್ಮಶತಮಾನೋತ್ಸವ ವೇಳೆಗೆ ಅವರ ಕುರಿತ ಅತ್ಯದ್ಭುತ ಸಾಹಿತ್ಯ ಹೊರತರಬೇಕು

ವಿಶ್ರಾಂತ ಕುಲಪತಿಗಳೂ ಆದ ವಿಜ್ಞಾನಿ ಪ್ರೊ.ಕೆ.ಎಸ್.ರಂಗಪ್ಪ ಸಲಹೆ



ಮೈಸೂರಿನ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಶುಕ್ರವಾರ 'ಡಾ.ರಾಜ್‌ಕುಮಾರ್ ದಿ ಲೆಜೆಂಡ್' ಪುಸ್ತಕ ಹಾಗೂ 'ಡಾ.ರಾಜ್‌ಕುಮಾರ್ ಅವರ ಯಶೋಗಾಥೆ ಕುರಿತ 10 ಸಂಚಿಕೆ' ಅನ್ನು ಅಂತಾರಾಷ್ಟ್ರೀಯ ಖ್ಯಾತಿಯ ವಿಜ್ಞಾನಿ ಪ್ರೊ.ಕೆ.ಎಸ್.ರಂಗಪ್ಪ ಬಿಡುಗಡೆ ಮಾಡಿದರು.

ಮೈಸೂರು, ಮೇ31(ಪಿಎಂ)– ಕನ್ನಡದ ಮೇರುನಟ ಡಾ.ರಾಜ್‌ಕುಮಾರ್ ಅವರ ಜನ್ಮಶತಮಾನೋತ್ಸವ ವೇಳೆಗೆ ಅವರ ಕುರಿತಂತೆ ಇನ್ನು ಅತ್ಯುನ್ನತವಾದ ಸಾಹಿತ್ಯ ಹೊರತರಬೇಕೆಂದು ಮೈಸೂರು ವಿವಿ ಹಾಗೂ ಮುಕ್ತ ವಿವಿ ವಿಶ್ರಾಂತ ಕುಲಪತಿಗಳೂ ಆದ ಅಂತಾರಾಷ್ಟ್ರೀಯ ಖ್ಯಾತಿಯ ವಿಜ್ಞಾನಿ ಪ್ರೊ.ಕೆ.ಎಸ್.ರಂಗಪ್ಪ ಸಲಹೆ ನೀಡಿದರು.

ಮೈಸೂರಿನ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಕದಂಬ ರಂಗವೇದಿಕೆ ಮತ್ತು ಕನ್ನಡ ಸಾಹಿತ್ಯ ಕಲಾಕೂಟದ ಜಂಟಿ ಆಶ್ರಯದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಡಾ.ಡಿ.ಗುರುಮೂರ್ತಿ ಹಾರೋಹಳ್ಳಿ ಅವರ 'ಡಾ.ರಾಜ್‌ಕುಮಾರ್ ದಿ ಲೆಜೆಂಡ್' ಪುಸ್ತಕ ಹಾಗೂ 'ಡಾ.ರಾಜ್‌ಕುಮಾರ್ ಅವರ ಯಶೋಗಾಥೆ ಕುರಿತ 10 ಸಂಚಿಕೆ ಬಿಡುಗಡೆಗೊಳಿಸಿ ಮಾತನಾಡಿದರು.

ರಾಜ್‌ಕುಮಾರ್ ಈಗ ಬದುಕಿದ್ದರೆ ಅವರಿಗೆ 97 ವರ್ಷಗಳು ಆಗುತ್ತಿತ್ತು. ಅವರ ಜನ್ಮಶತಮಾನೋತ್ಸವ ಸಂದರ್ಭಕ್ಕೆ ಅವರ ಬಗ್ಗೆ ಇನ್ನೂ ವಿಸ್ತೃತವಾದ ಅತ್ಯುತ್ತಮ ಸಾಹಿತ್ಯ ಹೊರತರಬೇಕು. ನಾನಾ ವಿದ್ವಾಂಸರು, ಸಾಹಿತಿಗಳು ಇಲ್ಲಿದ್ದೀರಿ. ಒಳ್ಳೆಯ ಸಾಹಿತ್ಯ ಸಿದ್ಧಪಡಿಸಲು ಪ್ರಕ್ರಿಯೆ ಆರಂಭಿಸಿ, ನಾನು ನಿಮ್ಮೊಂದಿಗೆ ಇರುತ್ತೇನೆ ಎಂದು ನುಡಿದರು.

ನನಗೆ ಡಾ.ರಾಜ್‌ಕುಮಾರ್ ಅಂದರೆ ಬಹಳ ಅಭಿಮಾನ. ಚಿಕ್ಕಂದಿನಲ್ಲಿ ಟಾಕೀಸ್‌ಗೆ ಹೋಗಿ ಅವರ ಸಿನಿಮಾ ನೋಡುತ್ತಿದ್ದೆ. ನಾನು 1983ರಿಂದ 86ರವರೆಗೆ ಕೆನಡಾದಲ್ಲಿದ್ದೆ. ಆ ದೇಶಕ್ಕೆ ಹೋಗುವಾಗ ರಾಜ್‌ಕುಮಾರ್ ಅವರ 10 ಚಿತ್ರಗೀತೆಗಳು ಒಳಗೊಂಡ ಕ್ಯಾಸೆಟ್ ತೆಗೆದುಕೊಂಡು ಹೋಗಿದ್ದೆ. ಮೂರು ವರ್ಷಗಳೂ ಅಲ್ಲಿ ಪ್ರತಿದಿನ ಆ ಹಾಡುಗಳನ್ನು ಕೇಳುತ್ತಿದ್ದೆ. ಅಷ್ಟು ಅಭಿಮಾನ ಅವರಲ್ಲಿ ನನಗಿದೆ. ಕೆನಡಾದಲ್ಲಿದ್ದ ಕನ್ನಡಿಗರು, 'ನೀನು ರಾಜ್‌ಕುಮಾರ್ ತರನೇ ಕಾಣುತ್ತಿಯಾ' ಅನ್ನುತ್ತಿದ್ದರು. ರಾಜ್ ಅವರ ಬಗ್ಗೆ ನನ್ನ ಹೃದಯದಲ್ಲಿ ಅತೀವ ಗೌರವವಿದೆ ಎಂದರು.

ಏಕಪ್ಪಾ ಈ ದೇಶಕ್ಕೆ ಬಂದೆ ಎಂದು ಬೇಸರವಾದಾಗ ರಾಜ್‌ಕುಮಾರ್ ಗೀತೆಗಳನ್ನು ಕೇಳಿ ಮನಸ್ಸಿಗೆ ನೆಮ್ಮದಿ ತಂದುಕೊಳ್ಳುತ್ತಿದ್ದೆ. ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ರಾಜ್‌ಕುಮಾರ್ ಪ್ರೇರಣೆಯಾಗಿದ್ದಾರೆ. ಅವರ ವ್ಯಕ್ತಿತ್ವ, ಸಿನಿಮಾ, ಅವರ ಸರಳ ಸಜ್ಜನಿಕೆಯು ನಾಡಿನ ಎಷ್ಟೋ ಜನಕ್ಕೆ ಪ್ರೇರಣೆಯಾಗಿದೆ. ನಾನು ಕುಲಪತಿಯಾಗಿದ್ದ ಸಂದರ್ಭದಲ್ಲಿ ಅವರ ಹೆಸರಿನಲ್ಲಿ ಅವಾರ್ಡ್ ಕೂಡ ಸ್ಥಾಪಿಸಿದ್ದು, ಪುನೀತ್ ರಾಜ್‌ಕುಮಾರ್ ಬಂದು ಪ್ರದಾನ ಮಾಡಿದ್ದರು. ಡಾ.ಡಿ.ಗುರುಮೂರ್ತಿ ಅವರು ಈ ಕೃತಿಯನ್ನು ಮೈಸೂರು ವಿವಿಗೆ ಪ್ರಬಂಧವಾಗಿ ಮಂಡಿಸಿ ಪಿಹೆಚ್.ಡಿ ತೆಗೆದುಕೊಂಡಿರುವುದು ಬಹಳ ಸಂತೋಷ ಎಂದು ಹರ್ಷ ವ್ಯಕ್ತಪಡಿಸಿದರು. ರಾಜ್‌ಕುಮಾರ್ ಅವರ ಕುರಿತು ಇವರಿಗೂ ಮೊದಲು ಯಾರು ಪಿಹೆಚ್.ಡಿ ಮಾಡದಿರುವುದು ಕೇಳಿ ಅಚ್ಚರಿ ಮತ್ತು ಬೇಸರ ಉಂಟಾಯಿತು. ಯಾರ್‍ಯಾರ ಮೇಲೆ ಕೆಲಸಕ್ಕೆ ಬಾರದ ಪಿಹೆಚ್.ಡಿ ಮಾಡಿರುವುದನ್ನು ಸಾಕಷ್ಟು ನೋಡಿದ್ದೇನೆ. ರಾಜ್‌ಕುಮಾರ್ ಕುರಿತು ಗುರುಮೂರ್ತಿಯವರದ್ದೇ ಮೊದಲ ಪಿಹೆಚ್.ಡಿ ಎಂದು ಕೇಳಿ ಅಚ್ಚರಿಯಾಯಿತು. ಹಾಗಾಗಿ ಗುರುಮೂರ್ತಿಯವರಿಗೆ ವೈಯಕ್ತಿಕವಾಗಿ ಹಾಗೂ ಮೈಸೂರು ವಿವಿ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ ಎಂದು ಹೇಳಿದರು.

ಇನ್ನೊಬ್ಬ ರಾಜ್‌ಕುಮಾರ್ ಮತ್ತೆ ಹುಟ್ಟೊಲ್ಲ ಎಂದೇ ಭಾವಿಸಿದ್ದೇನೆ. ಅವರು ದೈವಾಂಶ ಸಂಭೂತರು, ವಿದ್ವಾಂಸರು. ಪ್ರಪಂಚದಲ್ಲಿ ಹೆಚ್ಚು ನೋಬೆಲ್ ಪ್ರಶಸ್ತಿ ಪಡೆದುಕೊಂಡವರು ಶೇ.90ರಷ್ಟು ಮಂದಿ ಬಡತನದ ಹಿನ್ನೆಲೆಯುಳ್ಳವರು. ರಾಜ್‌ಕುಮಾರ್ ಅವರನ್ನೂ ಇಂತಹ ಶ್ರಮಜೀವಿಗಳ ಗ್ರೂಪ್‌ಗೆ ಸೇರಿಸಬಹುದು. ರಾಜ್‌ಕುಮಾರ್ ನಮ್ಮ ನಾಡಿಗೆ ಒಂದು ಮೆರುಗು. ಬಬ್ರುವಾಹನ ಸೇರಿದಂತೆ ರಾಜ್‌ಕುಮಾರ್ ಅವರ ವಿವಿಧ ಚಿತ್ರಗಳ ಕ್ಲಿಪ್‌ಗಳು ಮೊಬೈಲ್‌ಗೆ ಸಂದೇಶವಾಗಿ ಬರುತ್ತವೆ. ಅವುಗಳನ್ನು ಪೂರ್ತಿ ನೋಡಿದರೆ ನನಗೆ ಸಮಾಧಾನ. ಅವರ ಕುರಿತು ಇನ್ನೂ ಹೆಚ್ಚಿನ ಕೃತಿಗಳು ಬರಬೇಕು ಎಂದರು.

ಇದಕ್ಕೂ ಮುನ್ನ ಕದಂಬ ರಂಗವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ ಮಾತನಾಡಿ, ರಾಜ್‌ಕುಮಾರ್ ಪ್ರಬುದ್ಧ ಕಲಾವಿದರು. ಮಾನವೀಯ ಮೌಲ್ಯಗಳನ್ನು ಹೊಂದಿದ್ದ ಸರಳ ಸಜ್ಜನಿಕೆಯ ವ್ಯಕ್ತಿತ್ವ ಅವರದು. ಆಡುಮುಟ್ಟದ ಸೊಪ್ಪಿಲ್ಲ ಎನ್ನುವಂತೆ ರಾಜ್‌ಕುಮಾರ್ ಅವರು ಮಾಡದ ಪಾತ್ರಗಳಿಲ್ಲ. 'ಕನ್ನಡ ರಂಗಭೂಮಿ ಮತ್ತು ಚಲನಚಿತ್ರ ರಂಗಕ್ಕೆ ಡಾ.ರಾಜ್‌ಕುಮಾರ್ ಕೊಡುಗೆ' ಶೀರ್ಷಿಕೆಯಡಿ ಡಾ.ಮಳಲಿ ವಸಂತಕುಮಾರ್ ಅವರ ಮಾರ್ಗದರ್ಶನದಲ್ಲಿ ಡಾ.ಡಿ.ಗುರುಮೂರ್ತಿ ಅವರು ಮೈಸೂರು ವಿವಿಗೆ ಸಾದರಪಡಿಸಿ ಡಾಕ್ಟರೇಟ್ ಪದವಿ ಪಡೆದ ಮಹಾಪ್ರಬಂಧದ ಕೃತಿ ಇಂದು ಬಿಡುಗಡೆಯಾಗಿದೆ ಎಂದು ಹೇಳಿದರು.


ಕೃತಿ ಕುರಿತು ವಿಮರ್ಶಕ ಡಾ.ಸಿ.ನಾಗಣ್ಣ ಮಾತನಾಡಿದರು. ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ನಿಗಮದ ಮಾಜಿ ಅಧ್ಯಕ್ಷ ಆರ್.ರಘು ಕೌಟಿಲ್ಯ, ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಆರ್ಯ ಈಡಿಗರ ಸಂಘದ ಅಧ್ಯಕ್ಷ ಎಂ.ಕೆ.ಪೋತರಾಜು, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಮತ್ತಿತರರು ಹಾಜರಿದ್ದರು.

ಇಂದು ವಾರ್ಷಿಕ ಮಹಾಸಭೆ

ಮೈಸೂರು, ಮೇ 31– ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಆರ್ಯ ಈಡಿಗರ ಸಂಘದ 2024–25ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ಜೂ. 1 ರಂದು ಬೆಳಗ್ಗೆ 11 ಗಂಟೆಗೆ ವಿಜಯನಗರ 1ನೇ ಹಂತದಲ್ಲಿರುವ ಸಂಘದ ಆವರಣದಲ್ಲಿ ಸಂಘದ ಅಧ್ಯಕ್ಷ ಡಾ. ಎಂ.ಕೆ. ಪೋತರಾಜ್ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕವಿ ಹೆಚ್‌ಎಸ್‌ವಿ ನಿಧನ ಸಾಹಿತ್ಯಲೋಕಕ್ಕೆ ಅಪಾರ ನಷ್ಟ

ಸುತ್ತೂರು ಶ್ರೀಗಳಿಂದ ಶ್ರದ್ಧಾಂಜಲಿ



ಡಾ. ಎಚ್.ಎಸ್. ವೆಂಕಟೇಶ ಮೂರ್ತಿ

ಮೈಸೂರು, ಮೇ 31– ಕನ್ನಡದ ಖ್ಯಾತ ಕವಿಗಳಲ್ಲೊಬ್ಬರಾಗಿದ್ದ ಡಾ. ಎಚ್.ಎಸ್. ವೆಂಕಟೇಶ ಮೂರ್ತಿಯವರು ಅಗಲಿರುವುದು ವಿಷಾದದ ಸಂಗತಿ ಎಂದು ಸುತ್ತೂರು ಶ್ರೀಗಳು ಅಭಿಪ್ರಾಯಪಟ್ಟಿದ್ದಾರೆ.

ವೆಂಕಟೇಶಮೂರ್ತಿಯವರು ಬೆಂಗಳೂರಿನ ಸೆಂಟ್ ಜೋಸೆಫ್ ವಾಣಿಜ್ಯ ಕಾಲೇಜಿನಲ್ಲಿ ಮೂರು ದಶಕಗಳ ಕಾಲ ಕನ್ನಡ ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು. ಕವಿಗಳು, ನಾಟಕಕಾರರು, ಪ್ರಬಂಧಕಾರರು, ಚಿಂತಕರು ಆಗಿದ್ದರು. ಸಮಚಿತ್ತದ ವಿಮರ್ಶಕರು, ಉತ್ತಮ ವಾಗ್ಮಿಗಳು ಆಗಿದ್ದರು. 'ಪರಿವೃತ್ತ', 'ಬಾಗಿಲು ಬಡಿದ ಜನಗಳು' ಮುಂತಾದ ಕವನ ಸಂಕಲನಗಳು; 'ಹೆಜ್ಜೆಗಳು', 'ಅಗ್ನಿವರ್ಣ' ಮುಂತಾದ ನಾಟಕಗಳನ್ನು ರಚಿಸಿದ್ದರು. 'ಚಿನ್ನಾರಿ ಮುತ್ತ', 'ಅಮೆರಿಕಾ ಅಮೆರಿಕಾ' ಮೊದಲಾದ ಹಲವಾರು ಚಲನಚಿತ್ರಗಳಿಗೆ ಹಾಡು–ಸಂಭಾಷಣೆಗಳನ್ನು ಬರೆದಿದ್ದರು. ಒಳ್ಳೆಯ ಗೀತರಚನಕಾರರಾಗಿದ್ದರು. ಕಲಬುರ್ಗಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ಅವರ 'ಕಥನ ಕವನ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ಲಭಿಸಿದೆ. ಪಿ.ಎಂ. ಇನಾಂದಾರ್ ಸ್ಮಾರಕ ಪ್ರಶಸ್ತಿ, ಧ್ವನಿ ಶ್ರೀರಂಗ ಪ್ರಶಸ್ತಿ, ಫಿಲಂ ಫೇರ್ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ – ಇವು ಇವರ ಪ್ರತಿಭೆಗೆ ಸಂದ ಕೆಲವು ಪ್ರತಿಷ್ಠಿತ ಪುರಸ್ಕಾರಗಳು.

ಇಂಥ ಬಹು ಮುಖ ಸಾಧನೆಗಳ ಸಜ್ಜನ ವ್ಯಕ್ತಿ ದೈವಾಧೀನರಾಗಿ ರುವುದು ಕನ್ನಡ ಸಾಹಿತ್ಯ–ಸಂಸ್ಕೃತಿ ಲೋಕಕ್ಕೆ ತುಂಬ ಲಾರದ ನಷ್ಟ. ದಿವಂಗತರ ಆತ್ಮಕ್ಕೆ ಶಾಂತಿಯನ್ನು, ಅವರ ಕುಟುಂಬದ ಸದಸ್ಯರು, ಬಂಧುವರ್ಗದವರು ಮತ್ತು ಅಸಂಖ್ಯಾತ ಸಾಹಿತ್ಯಾಭಿಮಾನಿಗಳಿಗೆ ಈ ಅಗಲಿಕೆಯ ದುಃಖವನ್ನು ಸಹಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ಹಾರೈಸುತ್ತೇವೆ ಎಂದು ತಿಳಿಸಿದ್ದಾರೆ.

ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದಿಂದ ಪ್ರತಿಭಾ ಪುರಸ್ಕಾರ





ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ, ಅಭಿನಂದಿಸಲಾಯಿತು.

ಮೈಸೂರು, ಮೇ 31(ಎಂಕೆ)– ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ವತಿಯಿಂದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ನೂತನ ಪದಾಧಿಕಾರಿಗಳಿಗೆ ಅಭಿನಂದನೆ ಸಲ್ಲಿಸಲಾಯಿತು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಸಂಘದ ಶ್ರೀ ಶಾರದಾನಿಕೇತನ ಸಮುದಾಯ ಭವನದಲ್ಲಿ ಶನಿವಾರ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ವಿಶ್ವನಾಥಯ್ಯ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ನಗರ ಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮ್ ಪ್ರಸಾದ್ ಸೇರಿದಂತೆ ಇನ್ನಿತರೆ ಗಣ್ಯರು ಎಸ್‌ಎಸ್‌ಎಲ್‌ಸಿ (17 ವಿದ್ಯಾರ್ಥಿಗಳು) ಮತ್ತು ಪಿಯುಸಿ (27 ವಿದ್ಯಾರ್ಥಿಗಳು)ಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ತೇರ್ಗಡೆಯಾದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ, ಸ್ಮರಣಿಕೆ ಹಾಗೂ ಅಭಿನಂದನಾ ಪತ್ರ ನೀಡಿ ಗೌರವಿಸಿದರು.

ನೂತನ ಪದಾಧಿಕಾರಿಗಳಿಗೆ ಸನ್ಮಾನ...

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾಗೆ ನೂತನ ಉಪಾಧ್ಯಕ್ಷರಾಗಿ ಆಯ್ಕೆಯಾದ ಹೆಚ್.ವಿ.ರಾಜೀವ್, ವಿಶ್ವನಾಥಯ್ಯ, ನಂ.ಶ್ರೀಕಂಠಕುಮಾರ್ ಹಾಗೂ ಸಂಘಟನಾ ಕಾರ್ಯದರ್ಶಿ ರಾಜ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಈ ವೇಳೆ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ನಮ್ಮ ಮನೆಯ ಮಕ್ಕಳು ಅತ್ಯಂತ ಶ್ರಮಪಟ್ಟು, ಇವತ್ತಿನ ಪೈಪೋಟಿಯ ಸನ್ನಿವೇಶದಲ್ಲಿಯೂ ಅತ್ಯನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗುವ ಮೂಲಕ ನಾಡಿಗೆ ಕೊಡುಗೆ ನೀಡಲು ಸಿದ್ಧರಾಗುತ್ತಿದ್ದಾರೆ. ಶಾಲೆಯ ಗೇಟ್ ಒಳಗೆ ಬಿಟ್ಟು ಮತ್ತೆ ಶಾಲೆ ಬಿಡುತ್ತಿದ್ದಂತೆ ಗೇಟ್ ಹೊರಗೆ ನಿಂತು ಜೋಪಾನವಾಗಿ ತಮ್ಮ ತಮ್ಮ ಮಕ್ಕಳನ್ನು ಕರೆದುಕೊಂಡು ಹೋಗುವ ತಾಯಂದಿರ ಪರಿಶ್ರಮದ ಫಲವೂ ಇದಾಗಿದೆ ಎಂದು ಶ್ಲಾಘಿಸಿದರು.

ಸಾಧಕ ಮಕ್ಕಳ ಹಿಂದೆ ಪೋಷಕರ ಶ್ರಮವಿದೆ: ಹೆಚ್.ವಿ.ರಾಜೀವ್

ಇವತ್ತು ಸಾಕಷ್ಟು ಅವಕಾಶಗಳಿವೆ. ಆದರೆ, ಬಹುತೇಕ ಮಕ್ಕಳು ಇಂಜಿನಿಯರಿಂಗ್ ಕಡೆ ಹೆಚ್ಚಿನ ಒಲವು ತೋರುತ್ತಿದ್ದಾರೆ. ಬದಲಾಗುತ್ತಿರುವ ಪ್ರಪಂಚದಲ್ಲಿ ಇಂಜಿನಿಯರಿಂಗ್ ಜೊತೆಗೆ ಹಲವು ಆಯ್ಕೆಗಳಿದ್ದು, ಪೈಪೋಟಿಯಲ್ಲಿ ತಾವು ಯಾವ ಕ್ಷೇತ್ರಕ್ಕೆ ಹೋಗಬೇಕು ಎಂಬುದನ್ನು ನಿಮ್ಮ ಪೋಷಕರೊಂದಿಗೆ ಚರ್ಚಿಸಿ ಉತ್ತಮ ನಿರ್ಧಾರಗಳನ್ನು ತೆಗೆದುಕೊಳ್ಳಿ ಎಂದು ಸಲಹೆ ನೀಡಿದರು.

ಇತ್ತೀಚಿನ ವರ್ಷಗಳಲ್ಲಿ ಮಕ್ಕಳು ಮಾನಸಿಕವಾಗಿ ಕುಗ್ಗುತ್ತಿರುವುದನ್ನು ನೋಡುತ್ತಿದ್ದೇವೆ. ಒಂದೆರಡು ಅಂಕಗಳು ಕಡಿಮೆ ಬಂದರೆ ಮರು ಮೌಲ್ಯಮಾಪನಕ್ಕೆ ಅವಕಾಶವಿದೆ. ಆದರೂ ಕೆಲ ಮಕ್ಕಳು ಆತ್ಮಹತ್ಯೆಗೆ ಮಾಡಿಕೊಳ್ಳುತ್ತಿದ್ದಾರೆ. ಆತನಿಗಿಂತ ನನಗೆ ಕಡಿಮೆ ಅಂಕ ಬಂದಿದೆ ಎಂದು ಮಾನಸಿಕ ಕಿನ್ನತೆಗೆ ಒಳಗಾಗುವುದು ಸರಿಯಲ್ಲ. ಪ್ರಪಂಚದಲ್ಲಿ ರುವ ಜನಸಂಖ್ಯೆಯಲ್ಲಿ ನಾವು ತುಂಬಾ ಕಡಿಮೆ ಇದ್ದು, ಇಷ್ಟು ಅಂಕಗಳನ್ನು ಪಡೆದಿರುವುದೇ ನಮ್ಮ ಸಾಧನೆಯಾಗಿದೆ ಎಂದುಕೊಂಡು ಆತ್ಮವಿಶ್ವಾಸ ಹೆಚ್ಚಿಸಿಕೊಂಡು ಸುಂದರ ಬದುಕನ್ನು ರೂಪಿಸಿಕೊಳ್ಳಬೇಕು. ಅಂಕಗಳನ್ನು ಪಡೆದ ಖುಷಿಯನ್ನು ಹಂಚಿ ಕೊಳ್ಳುವುದಕ್ಕಾಗಿದರೂ ಎಲ್ಲರೊಂದಿಗೆ ಇರಬೇಕು ಎಂಬುದನ್ನು ಅರ್ಥಮಾಡಿಕೊಳ್ಳಿ ಎಂದರು.

ಆರ್ಥಿಕ ಅಸಕ್ತರಿಗೆ ಬೆಂಬಲ, ಯಾರು ಹಸಿವಿನಿಂದ ಇರಬಾರದು...

ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದಿಂದ ಸಮುದಾಯದಲ್ಲಿ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಹಾಗೂ ಆ ಕುಟುಂಬದ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗುವ ನಿಟ್ಟಿನಲ್ಲಿ ಆರ್ಥಿಕ ಸಹಾಯ ಯೋಜನೆಯೊಂದನ್ನು ಆರಂಭಿಸಿದರೆ, ಅದರ ಖರ್ಚಿನ ಅರ್ಧದಷ್ಟು ಹಣವನ್ನು ದೇಣಿಗೆ ನೀಡುತ್ತೇನೆ. ಹಿರಿಯರಿಗೆ ಮಾಸಿಕ 500 ರೂ. ನೆರವು ಹಾಗೂ ತೀರ ಬಡವರಿಗೆ ದಿನದಲ್ಲಿ ಮಧ್ಯಾಹ್ನ ಮತ್ತು ರಾತ್ರಿ ಊಟದ ವ್ಯವಸ್ಥೆ ಮಾಡಲಾಗುವುದು. ಒಟ್ಟಿನಲ್ಲಿ ಸಮುದಾಯದ ಯಾರೊಬ್ಬ ಹಿರಿಯ ಜೀವವೂ ಹಸಿವಿನಿಂದ ಇರಬಾರದು. - ಹೆಚ್.ವಿ.ರಾಜೀವ್, ಮುಡಾ ಮಾಜಿ ಅಧ್ಯಕ್ಷ

ಸರ್ಕಾರಿ ಸವಲತ್ತುಗಳನ್ನು ಸದ್ಬಳಕೆ ಮಾಡಿಕೊಳ್ಳಿ: ನಗರಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮ್ ಪ್ರಸಾದ್ ಮಾತನಾಡಿ, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಪ್ರತಿಭಾನ್ವಿತ ಮಕ್ಕಳಿಗೆ ನಗರಪಾಲಿಕೆಯಿಂದ ಪ್ರೋತ್ಸಾಹ ಧನ ನೀಡಲಾಗುವುದು. ಹಾಗೆಯೇ ವಿದ್ಯಾಭ್ಯಾಸದ ಅನುಕೂಲಕ್ಕಾಗಿ ಹಲವು ಯೋಜನೆಗಳಿದ್ದು, ಅವುಗಳನ್ನು ಸದ್ಬಳಕೆ ಮಾಡಿಕೊಳ್ಳಿ. ಯೋಜನೆಗಳ ಬಗ್ಗೆ ಅರಿವಿಲ್ಲದಿದ್ದರೆ, ನೇರವಾಗಿ ನನ್ನನ್ನೇ ಭೇಟಿಯಾದರೆ, ಸವಲತ್ತುಗಳನ್ನು ಕೊಡಿಸುವ ಪ್ರಯತ್ನ ಮಾಡುತ್ತೇನೆ ಎಂದರು. ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ಉಪಾಧ್ಯಕ್ಷರಾದ ನಂದಕುಮಾರ್, ಶ್ರೀಧರಮೂರ್ತಿ, ಪ್ರಧಾನ ಕಾರ್ಯದರ್ಶಿ ಮಂಜುನಾಥ್, ಸಹ ಕಾರ್ಯದರ್ಶಿ ರಾವ್ ಸೋಮಶೇಖರ್, ಖಜಾಂಚಿ ಶ್ರೀಕಂಠಶರ್ಮ, ಎಲ್ಲಾ ನಿರ್ದೇಶಕರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಭೈರವಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಏಸ್ (ತ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ರೆಟ್ರೋ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಹಿಟ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಟಕೀಲಾ (ಕ)	4 ಪ್ರದರ್ಶನಗಳು
ರಾಜಕಮಲ್	
ಜಿನ್ನ್ (ತ)	4 ಪ್ರದರ್ಶನಗಳು
ಸಂಗಂ	
ಮಂಡ್ಯ (ಕ)	4 ಪ್ರದರ್ಶನಗಳು
ಲಿಡೋ	
ಠಾಣೆ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.


ದಿವಂಗತ ಡಿ.ಕೆ.ಸದಾಶಿವ ಸ್ಮರಣೆ



ರಾಜ್ಯ ಬಿಜೆಪಿ ಕಚೇರಿಯಲ್ಲಿ ಭಾರತೀಯ ಮಜ್ದೂರ್ ಸಂಘದ ರುವಾರಿ ದಿವಂಗತ ಡಿ.ಕೆ.ಸದಾಶಿವ ಅವರ ಸ್ಮರಣೆ ಮಾಡಲಾಯಿತು. ಮಾಜಿ ಮುಖ್ಯಮಂತ್ರಿ ಡಿ.ವಿ ಸದಾನಂದಗೌಡ, ಬಿಜೆಪಿ ಪ್ರಕೋಷ್ಠಗಳ ರಾಜ್ಯ ಸಂಯೋಜಕ ಎಸ್. ದತ್ತಾತ್ರಿ, ಭಾರತೀಯ ಮಜ್ದೂರ್ ಸಂಘದ ರಾಜ್ಯಾಧ್ಯಕ್ಷ ಎನ್.ಕೆ. ಪ್ರಕಾಶ್, ಹಿರಿಯ ಪತ್ರಕರ್ತ ದು.ಗು.ಲಕ್ಷ್ಮಣ್, ರಾಜೇಶ್, ಸಚಿನ್‌ಗೌಡ, ರಾ. ಪರಮೇಶ್ ಗೌಡ, ಮತ್ತಿತರರಿದ್ದರು.

ಅವರು ನಮ್ಮ ತಾತನಂತೆ ಕಂಡರು! ಅದಕ್ಕೆ ಅವರ ಭುಜದ ಮೇಲೆ ಕುಳಿತೆ!!

• ಕೆ.ಆರ್.ಸರ್ಕಲ್‌ನ ನಾಲ್ವಡಿಯವರ ಶಿರವೇರಿದ್ದ ಶಿವಮೂರ್ತಿ ಸಮರ್ಥನೆ • ದೂರ ಗ್ರಾಮದಿಂದ ಬಂಧಿಸಿ ಕರೆತಂದ ಆರೋಪಿಗೆ ವೈದ್ಯಕೀಯ ತಪಾಸಣೆ; ಮಾನಸಿಕ ಸ್ಥಿತಿ ಏರುಪೇರು



ನಾಲ್ವಡಿ ಅವರ ಶಿರದ ಮೇಲೆ ಕುಳಿತಿರುವ ಶಿವಮೂರ್ತಿ

ಮೈಸೂರು, ಮೇ 31– 'ಅವರು ನಮ್ಮ ತಾತನಂತೆ ಕಂಡರು, ಅದಕ್ಕೆ ಅವರ ಭುಜದ ಮೇಲೆ ಕುಳಿತೆ'. ಇದು ಮೈಸೂರಿನ ಕೆ.ಆರ್. ವೃತ್ತದಲ್ಲಿ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆಯ ಶಿರವೇರಿ ಕುಳಿತು ವಿಕೃತಿ ಮೆರೆದಿದ್ದ ವ್ಯಕ್ತಿಯ ಸಮರ್ಥನೆ.

ಶುಕ್ರವಾರ ಮಧ್ಯಾಹ್ನ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ಏರಿ ಹುಚ್ಚಾಟ ಮೆರೆದಿದ್ದ ಮೈಸೂರು ತಾಲೂಕು ದೂರ ಗ್ರಾಮದ ಶಿವಮೂರ್ತಿ(36) ಎಂಬಾತನನ್ನು ದೇವರಾಜ ಠಾಣೆ ಪೊಲೀಸರು ಬಂಧಿಸಿದ್ದು, ಮಾನಸಿಕ ಸಮಸ್ಯೆ ಇರುವಂತೆ ಕಾಣುವ ಆತ ವಿಚಾರಣೆ ವೇಳೆ ನಾಲ್ವಡಿಯವರ ಪ್ರತಿಮೆಯನ್ನು 'ನನ್ನ ತಾತಾ ಅಂದುಕೊಂಡೆ' ಎಂದು ಹೇಳಿರುವುದಾಗಿ ತಿಳಿದುಬಂದಿದೆ. ಸದ್ಯ ವೈದ್ಯಕೀಯ ಪರೀಕ್ಷೆ ಬಳಿಕ ಆರೋಪಿಯನ್ನು ನ್ಯಾಯಾಧೀಶರ ಮುಂದೆ ಪೊಲೀಸರು ಹಾಜರುಪಡಿಸಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರತಿಮೆ ಮೇಲೆ ಹತ್ತಿದ್ದವನನ್ನು ಮೈಸೂರು ತಾಲೂಕು ದೂರ ಗ್ರಾಮದಲ್ಲಿ ಪತ್ತೆ ಹಚ್ಚಿ ಬಂಧಿಸಲಾಗಿದೆ. ಆತನ ವರ್ತನೆಯಿಂದ ಮಾನಸಿಕ ಸಮಸ್ಯೆ ಇರುವಂತೆ ಕಂಡು ಬಂದಿದ್ದರಿಂದ ಕೆ.ಆರ್.ಆಸ್ಪತ್ರೆಯ ಮಾನಸಿಕ ಆರೋಗ್ಯ ಸೇವೆಗಳ ಘಟಕದ ವೈದ್ಯರು ಪರೀಕ್ಷೆ ನಡೆಸಿದರು. ಆತನಿಗೆ ಚಿಕಿತ್ಸೆಯ ಅಗತ್ಯವಿದ್ದು, ಆಸ್ಪತ್ರೆಗೆ ದಾಖಲಿಸಬೇಕೆಂದು ವರದಿ ನೀಡಿದ್ದಾರೆ. ಆರೋಪಿಯನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದು, ನ್ಯಾಯಾಧೀಶರ ಆದೇಶದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ದೇವರಾಜ ಠಾಣೆ ಇನ್ಸ್‌ಪೆಕ್ಟರ್ ರಘು ತಿಳಿಸಿದ್ದಾರೆ.

ಹೊಸ ಕಾನೂನು ಕಾಯ್ದೆಗಳ ಬಗ್ಗೆ ಪೊಲೀಸ್ ಸಿಬ್ಬಂದಿಗೆ ಹಂತ ಹಂತವಾಗಿ ತರಬೇತಿ ನೀಡಲಾಗುತ್ತಿದ್ದು, ಕರ್ತವ್ಯ ಪಾಳಿಯಲ್ಲಿ ವ್ಯತ್ಯಾಸವಾಗುತ್ತಿದೆ. ಹಾಗೆಯೇ ನಿನ್ನೆ ಕೆ.ಆರ್.ವೃತ್ತದಲ್ಲಿ ಕರ್ತವ್ಯದಲ್ಲಿದ್ದ ಸಂಚಾರ ಪೊಲೀಸ್ ಸಿಬ್ಬಂದಿ, ಊಟಕ್ಕೆಂದು ಹೋಗಿದ್ದಾಗ ಈ ಘಟನೆ ನಡೆದಿದೆ. 112 ವಾಹನ ಸ್ಥಳಕ್ಕೆ ಹೋಗುವಷ್ಟರಲ್ಲಿ ಪ್ರತಿಮೆ ಮೇಲಿದ್ದ ವ್ಯಕ್ತಿಯನ್ನು ಸಾರ್ವಜನಿಕರು ಕೆಳಗಿಳಿಸಿದ್ದರಿಂದ ಆತ ಅಲ್ಲಿಂದ ಹೊರಟು ಹೋಗಿದ್ದ. ನಮ್ಮ ಸಿಬ್ಬಂದಿ ಸದಾ ವೃತ್ತದ ಕಡೆ ನಿಗಾ ವಹಿಸಿರುತ್ತಾರೆ ಎಂದು ಹೇಳಿದ್ದಾರೆ.

ಮನೆಯವರು ಜೊತೆಗಿಲ್ಲ ಶಿವಮೂರ್ತಿಯ ವೃದ್ಧ ತಂದೆ–ತಾಯಿ ಮಗನಿಂದ ದೂರವಿದ್ದಾರೆ. ಅವರಿಬ್ಬರೂ ರಸ್ತೆ ಬದಿ ಚೀಲ ಹಾಸಿಕೊಂಡು ತರಕಾರಿ ವ್ಯಾಪಾರ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಯಾವಾಗಲಾದರೊಮ್ಮೆ ಶಿವಮೂರ್ತಿ ಮೈಸೂರಿನಲ್ಲಿರುವ ತಂದೆ–ತಾಯಿಯನ್ನು ಭೇಟಿಯಾಗಿ ಹೋಗುತ್ತಾನೆ. ಇಬ್ಬರಿಗೂ ವಯಸ್ಸಾಗಿದ್ದು, ತಂದೆಗೆ ಕಿವಿಯೂ ಕೇಳಿಸುವುದಿಲ್ಲ. ಶಿವಮೂರ್ತಿಗೆ ವಿವಾಹವಾಗಿದ್ದು, ಹೆಂಡತಿ–ಮಕ್ಕಳು ಜೊತೆಯಲ್ಲಿಲ್ಲ ಎಂದು ಹೇಳಲಾಗುತ್ತಿದೆಯಾದರೂ ಈತನ ಬಗ್ಗೆ ಸ್ಪಷ್ಟ ಮಾಹಿತಿ ಲಭ್ಯವಾಗಿಲ್ಲ.

ಶುಕ್ರವಾರ ಮಧ್ಯಾಹ್ನ ವ್ಯಕ್ತಿಯೊಬ್ಬ ಕೃಷ್ಣರಾಜ ಒಡೆಯರ್ ಪ್ರತಿಮೆ ಮೇಲೇರಿ, ಎರಡೂ ಕಾಲು ಭುಜದ ಮೇಲಿಟ್ಟು ಪ್ರತಿಮೆಯ ಶಿರ ಭಾಗದಲ್ಲಿ ಕುಳಿತುಕೊಂಡಿದ್ದಲ್ಲದೆ ಬೀಡಿಗೆ ಬೆಂಕಿ ಹೊತ್ತಿಸಿಕೊಂಡು ಪ್ರತಿಮೆಯ ಬಾಯಿ ಗಿಟ್ಟು ವಿಕೃತಿ ಮೆರೆಯುವುದನ್ನು ಅನಿಲ್ ನಂಜರಾಜ್ ಅರಸ್ ಎಂಬುವವರು ವಿಡಿಯೋ ಮಾಡಿ, ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದರು. ತುರ್ತು ಸೇವೆಯ ದೂರವಾಣಿ ಸಂಪರ್ಕವೂ ಸಾಧ್ಯವಾಗುತ್ತಿಲ್ಲ, ಅರ್ಧ ಗಂಟೆಯಾದರೂ ಪೊಲೀಸರು ಸ್ಥಳಕ್ಕೆ ಬಂದಿಲ್ಲ ಎಂದು ವಿಡಿಯೋದಲ್ಲಿ ಆರೋಪಿಸಿದ್ದರು. ಮೈಸೂರು ಕಟ್ಟಿದ ಮಹಾರಾಜರ ಪ್ರತಿಮೆಗಳಿಗೂ ರಕ್ಷಣೆ ಇಲ್ಲ ಎಂದು ಸಾರ್ವಜನಿಕರು ಪ್ರತಿಭಟನೆ ನಡೆಸಿ, ಆಕ್ರೋಶ ವ್ಯಕ್ತಪಡಿಸಿದ್ದರು. ಕಿಡಿಗೇಡಿಯ ಆಟಾಟೋಪ ಹಾಗೂ ವ್ಯವಸ್ಥೆಯ ನಿರ್ಲಕ್ಷ್ಯದ ಬಗ್ಗೆ 'ಮೈಸೂರು ಮಿತ್ರ' ಸವಿವರ ವರದಿ ಪ್ರಕಟಿಸಿತ್ತು. ಈ ಹಿನ್ನೆಲೆಯಲ್ಲಿ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಪೊಲೀಸರು, ವಿಡಿಯೋ ಆಧಾರದಲ್ಲಿ ಪ್ರತಿಮೆ ಮೇಲೆ ಹತ್ತಿದ್ದವನ ಹುಡುಕಾಟಕ್ಕೆ ಮುಂದಾಗಿದ್ದರು. ನಗರದೆಲ್ಲೆಡೆ ಹುಡುಕಾಡುವಾಗ ನಡೆಸುವಾಗ ಆತ ದೂರ ಗ್ರಾಮದವನೆಂದು ತಿಳಿದು, ಆ ಗ್ರಾಮಕ್ಕೆ ತೆರಳಿ ಬಂಧಿಸಿ ಕರೆತಂದಿದ್ದಾರೆ. ಆ ರೀತಿ ಏಕೆ ಮಾಡಿದೆ ಎಂದು ಆರೋಪಿಯನ್ನು ಪ್ರಶ್ನಿಸಿದರೆ, ಅವರು ನಮ್ಮ ತಾತನಂತೆ ಕಂಡರು, ಅದಕ್ಕಾಗಿ ಅವರ ಭುಜದ ಮೇಲೆ ಹತ್ತಿ ಕುಳಿತುಕೊಂಡೆ. ಯಾರೋ ಬಂದು ಇಳಿ ಎಂದರು ನಾನು ಅಲ್ಲಿಂದ ಇಳಿದು ಹೋದೆ ಎಂದು ಹೇಳುತ್ತಾನೆಂದು ತಿಳಿದುಬಂದಿದೆ.


ಮೈಸೂರಿನ ಪ್ರತಿಮೆಗಳು, ಸ್ಮಾರಕಗಳ ರಕ್ಷಣೆಗೆ ಸಂಸದ ಯದುವೀರ್ ಆಗ್ರಹ



ಮೈಸೂರು, ಮೇ 31– ಮೈಸೂರಿನ ಐತಿಹಾಸಿಕ, ಪಾರಂಪರಿಕ ಸ್ಮಾರಕಗಳು ಹಾಗೂ ಪ್ರತಿಮೆಗಳ ರಕ್ಷಣೆಗೆ ಪೊಲೀಸರು ಕ್ರಮ ವಹಿಸಬೇಕು ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಆಗ್ರಹಿಸಿದ್ದಾರೆ.

ಮಹಾರಾಜ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರತಿಮೆಯ ಮೇಲಿನ ಅಗೌರವದ ಕೃತ್ಯವನ್ನು ನಾವು ಬಲವಾಗಿ ಖಂಡಿಸುತ್ತೇವೆ. ಅವರು ನನ್ನ ಪೂರ್ವಜರು ಮಾತ್ರವಲ್ಲ, ರಾಜ್ಯ ಮತ್ತು ರಾಷ್ಟ್ರಕ್ಕಾಗಿ ಕೈಗೊಂಡ ದೂರದೃಷ್ಟಿಯ ಅಭಿವೃದ್ಧಿ ಕಾರ್ಯಗಳಿಂದಾಗಿ ಅವರನ್ನು ಈ ನಾಡಿನ ಜನತೆ ಆಭಾರಿಯಾಗಿ ಸ್ಮರಿಸುತ್ತಿದ್ದಾರೆ. ಈ ಘಟನೆಯಿಂದ ಜನರ ಗೌರವ ಭಾವನೆಗಳಿಗೆ ಧಕ್ಕೆ ಉಂಟಾಗಿದೆ. ಆದರೆ ಪರಿಸ್ಥಿತಿಯನ್ನು ನಿಭಾಯಿಸುವ ನಿಟ್ಟಿನಲ್ಲಿ ಪೊಲೀಸರು ತ್ವರಿತವಾಗಿ ಪ್ರತಿಕ್ರಿಯಿಸಿದ್ದಕ್ಕಾಗಿ ಅವರಿಗೆ ಕೃತಜ್ಞರಾಗಿರುತ್ತೇವೆ. ಆದಾಗ್ಯೂ, ಐತಿಹಾಸಿಕ ಮತ್ತು ಸಾಂಸ್ಕೃತಿಕ ಪ್ರಾಮುಖ್ಯತೆಯ ಸ್ಮಾರಕಗಳು ಮತ್ತು ಪ್ರತಿಮೆಗಳ ಜಾಗರೂಕತೆ ಮತ್ತು ರಕ್ಷಣೆಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳನ್ನು ಒತ್ತಾಯಿಸುತ್ತೇವೆ. ನಮ್ಮ ಪರಂಪರೆ ಮತ್ತು ಹೆಮ್ಮೆಯನ್ನು ಸಂಕೇತಿಸುವ, ನಮ್ಮ ರಾಷ್ಟ್ರದ ಅತ್ಯಮೂಲ್ಯ ಸಂಪತ್ತಾಗಿರುತ್ತಾರೆ ಮಹನೀಯರ ಘನತೆ ಮತ್ತು ಗೌರವವನ್ನು ರಕ್ಷಿಸುವುದು ನಮ್ಮೆಲ್ಲರ ಜವಾಬ್ದಾರಿ ಆಗಿದೆ ಎಂದು ಎಕ್ಸ್ ಖಾತೆಯಲ್ಲಿ ಮನವಿ ಮಾಡಿದ್ದಾರೆ.

IN LOVING MEMORY OF



Sri. C. RUKMANGADA
FOUNDER OF HOTEL KALYANI And EASY THINDI
Hebbal Ring Road, Mysore

Ex. Upa Pradhan of Hinkal Mandal Panchayat
Ex President of Hebbal Gram Panchayat

- Family Members, Relatives, Friends & Staff

